ಬಿ. ಎಂ. ಶ್ರೀ ಪ್ರತಿಷ್ಠಾನ
2828
ಗ್ರಂಥಾಲಯ
2434
ಬೆಂಗಳೂರು-೧೯

ಕನ್ನಡ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮಾಸಪತ್ರಿಕೆ

[ಸಂಪುಟ ೨೫] ಸಂಪಾದಕರು : ಅನ್ನದಾನಯ್ಯ ಪುರಾಣಿಕ, ಬಿ.ಕಾಮ್., ಎಲ್ಎಲ್.ಬಿ. [ಸಂಚಿಕೆ ೧


೪೩ನೆ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ



ಕಳೆದ ಡಿಸೆಂಬರ್ ೨೭ರಂದು ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದ ಚಿತ್ರ. ಇದರಲ್ಲಿ ಎಡದಿಂದ ಬಲಕ್ಕೆ ಮೈಸೂರಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ, ಸಮ್ಮೇಳನಾಧ್ಯಕ್ಷ ಪ್ರಾ॥ ಶ್ರೀ ಕೆ. ಜಿ. ಕುಂದಣಗಾರರು, ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಇವರನ್ನು ಕಾಣಬಹುದು. ಮೈಸೂರಿನ ವಿದ್ಯಾಮಂತ್ರಿಗಳಾದ ಮಾನ್ಯ ಶ್ರೀ ಅಣ್ಣಾರಾವ್ ಗಣಮುಖಿಯವರು ಸಮ್ಮೇಳನದ ಉದ್ಘಾಟನಾ ಭಾಷಣ ಮಾಡುತ್ತಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮

ವಿಷಯ ಸೂಚಿಕೆ



ಸಂಪುಟ ೨೫] ಜನವರಿ ೧೯೬೨ [ಸಂಚಿಕೆ ೧

ಎಷ್ಟು ಅಂತರ!

ಶ್ರೀ ಸುಧಾಕರ, ಮೈಸೂರು.

೧

ಅಂದಿಗಿಂದಿಗು ಎಷ್ಟು ಅಂತರ ನನ್ನ ನಿನ್ನಯ ಸ್ನೇಹದಿ
ನೀನೆ ಈತೆರ ಗೈದನಂತರ ಯಾರ ನಂಬಲಿ ಲೋಕದಿ!
ಸುಳಿದು ಇದ್ದರೆ ಶಂಕೆ ಚಿಂತರ ಹೇಗೊ ತವ ಹೃದ್ಗೇಹದಿ
ಹೇಳು, ಇಂತಾದರ್ಶವಂತರ ಬಾಳಿಗೇತಕೆ ಬೇಗುದಿ?

೨

ಎದುರು ಕಂಡರು ಕಾಣದಂತೆಯೆ ಕಣ್ಣನೆತ್ತಿಯು ನೋಡದೆ
ತಲೆಯು ತಗ್ಗಿಸಿ ನನ್ನ ಲಕ್ಷಿಸಿ, ಮಾತನೊಂದೂ ಆಡದೆ
ಮುಂದು ಮುಂದಕೆ ಸಾಗಿ ಹೋಗಲು 'ಏನು, ಎತ್ತ?'
ಎನ್ನದೆ,
ನೀನೆ ಯೋಚಿಸು, ದುಃಖ ಭಾರದಿ ಭಗ್ನವಾಗದೆ ನನ್ನೆದೆ?

೩

ಸಖ್ಯವಿಲ್ಲದ ಬಾಳು ಎನ್ನುತ ಬರಿಯ ಶುಷ್ಕವಸಾರ್ಥಕ
ಸ್ನೇಹವರ್ಷಕೆ ಕಾದು ಪರಿತಪಿಪಂದು ತವ ಹೃಚ್ಚಾತಕ;
ಎಷ್ಟು ತಳಮಳವೆಷ್ಟು ಕಳವಳ ಕಾಣದಿದ್ದರೆ ಅರೆಚಣ!
ಎಷ್ಟು ಕಾತರವೆಷ್ಟು ಆತುರವೆಷ್ಟು ದೈನ್ಯತೆ ಮರುಚಣ!!

೪

ಅಷ್ಟೆ ಔದಾಸೀನ್ಯದಿಂದಲಿ ಇಂದು ನನ್ನೊಳನಾದರ
ತೋರಿ, ನಡೆನುಡಿಯಲ್ಲಿ ಸಿಡಿಮಿಡಿಗೊಂಡು ಈ ತೆರ ನಿರ್ನೆರ
ತೊರೆದು ಮಾತನೆ, ನರಕ ಯಾತನೆಗೇಕೆ ನೀ ಗುರಿ ಮಾಡಿದೆ?
ಯಾವ ತಪ್ಪಿಗೆ ಇಂಥ ಶಿಕ್ಷೆಯ ವಿಧಿಸಿ ದೂರಕೆ ಸಾರಿದೆ?

೫

ನಾನು ಬಂದಂತೆಲ್ಲ ಹತ್ತಿರ ನೀನು ದೂರಕೆ ಸಾಗಲು
ಏನು ಕಾರಣ ಹೇಳು ಗೆಳತಿಯೆ, ಸಮಯವಿರುವುದು ಈಗಲು!
ಹೇಳಲೊಲ್ಲೆಯ? ಯೋಗ್ಯನಲ್ಲವೆ? ಹತ್ತಲಿಲ್ಲವೆ ಕಣ್ಣಿಗೆ?
ಭಾರವಾದೆನೆ ನಿನ್ನ ಪಾಲಿಗೆ? ಬೇಡವಾದೆನೆ ಇಂದಿಗೆ?

೬

ಅಯ್ಯೊ! ನನ್ನಯ ನೋವನೆನಿತನೊ ನಿನ್ನ ಸ್ನೇಹದ
ಮರೆಯಲಿ
ಮರೆತು ನಲಿದೆನು, ಬೆರೆತು ನಿನ್ನಯ ಸರಸ ಮಾತಿನ
ಸವಿಯಲಿ!
'ಎಂದು ನನ್ನನು ಮರೆತುಬಿಡುವೆಯೊ!'
ಎಂದು ನೀನೇ ಮೊದಲಲಿ
ಹೇಳಿಯೂ ಸಹ ಮರೆಯಲೀ ತೆರ, ಹೇಗೆ ನಾನದ
ಮರೆಯಲಿ?

೭

ಕವಿದ ಕಾವಳ ಕರಗಿ ಹೋಗದೆ, ಮತ್ತೆ ಬೆಳಗನೆ ದಿನಮಣಿ?
ನೋವ ಸಹಿಸುತ, ಸ್ನೇಹ ಬಯಸುತ ಅಂತೆ ಕಾದಿಹೆ
ಕಣ್ಮಣಿ!
ಹೇಳು ಉತ್ತರ, ಬಂದು ಹತ್ತಿರ ಮರೆತು ಎಲ್ಲವನಿಂದಿಗೆ:
'ಮೊದಲಿನಂದದಿ ನಾವು ಒಂದಿಗೆ ಕೂಡಿ ನಗುವುದು
ಎಂದಿಗೆ!'

ವಿನಯದಲ್ಲಿ ಮಿಂದ ವಿದ್ಯೆ

ಶ್ರೀ ಡಿ. ಎಸ್. ಕರ್ಕಿ

ವಿನಯದಲ್ಲಿ ಮಿಂದ ವಿದ್ಯೆಗಿಲ್ಲಿದೆ ಇದೊ ರೂಪ
ಕುಂದಣದಲಿ ಹೊಳೆವ ಹರಳು ಬಗೆ ಬೆಳಗುವ ದೀಪ

೨

ಗುರು ಕುಂದಣಗಾರರಲ್ಲಿ ನಯ ತೆರೆದಿದೆ ಕಣ್ಣ
ಮೂಡಿದೆ ಅದೊ ಅಡಿ ಅಡಿಯಲಿ ಸೌಜನ್ಯದ ಚಿಹ್ನ

೩

ತೊಡರನೆಲ್ಲ ನಯದಿ ಬಿಡಿಸಿ ತಿರುಳನರಿವ ದೃಷ್ಟಿ
ಪ್ರೇರಿಸಿಹುದು ಸಾಜವಾಗಿ ಸಾಹಿತ್ಯದ ಸೃಷ್ಟಿ

೪

ಸದ್ದು ಇರದ ಸಂಶೋಧನೆ, ಕಾಯಕದನುರಾಗ
ನಿತ್ಯದ ಸಾಧನೆ, ಆರಾಧನೆ; ತೃಪ್ತಿಯೆ ಭೋಗ

೫

ಸುಗಮವಾಗಿ ಹರಿವ ಶಾಂತರಸದ ಹೊನಲಿನಂತೆ
ಸಾಗಿರುವುದು ಕರ್ಮಯೋಗ ಚಿತ್ತ ಸ್ಫುರಿಸಿದಂತೆ

೬

ತೊರೆದು ಹರಿಯೆ ಸದಾ ಸಿದ್ಧ ಸೌಹಾರ್ದದ ಕರುಳು
ತುಂಬಿಕೊಳ್ಳ ಬಲ್ಲವರಿಗೆ ಇಲ್ಲಿ ಇಹುದು ತಿರುಳು

೭

ಮುನ್ನಡೆದಿರೆ ಕಣ್ಣೊಳಿಟ್ಟು ತಿಳಿಯೆ ಮನದ ಧ್ಯೇಯ
ಬೇಡವೆಂದರೇನು ? ಬಂದಿರುವುದು ತಾನೆ ಶ್ರೇಯ

೮

ಸ್ವಾಗತಿಸಿದೆ ಸದು ಹೃದಯದ ಸಾಹಿತ್ಯದ ಪೀಠ
ತೆರೆಯದೇನು ನೋಟಕೆ ಪರಿಮಳದ ಅಲರ ತೋಟ

ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ.

ಸಿಂಹಾವಲೋಕನ

(ದಿನಾಂಕ ೨೭-೧೨-೧೯೬೧ ರಿಂದ ೨೯-೧೨-೧೯೬೧ ರ ವರೆಗೆ)

ಸಮ್ಮೇಳನಾಧ್ಯಕ್ಷರ ಮೆರೆವಣಿಗೆ

ದಿನಾಂಕ ೨೬-೧೨-೧೯೬೧ನೆಯ ಮಂಗಳವಾರ ಸಂಜೆ ೮ ಘಂಟೆಗೆ ೪೩ ಸಿಂಗರಿಸಿದ ಎತ್ತುಗಳಿಂದ ಹೂಡಲ್ಪಟ್ಟ ಅಲಂಕೃತ ರಥದಲ್ಲಿ ಆಸೀನರಾದ ಸಮ್ಮೇಳನಾಧ್ಯಕ್ಷ ಪ್ರೊ|| ಕೆ. ಜಿ. ಕುಂದಣಗಾರರವರ ವೈಭವ ಪೂರ್ಣ ಮೆರೆವಣಿಗೆಯು ಗದಗಿನ ಮುಖ್ಯ ಬೀದಿಗಳಲ್ಲಿ ನಡೆಯಿತು. ಸಮ್ಮೇಳನಾಧ್ಯಕ್ಷರೊಡನೆ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ಸ್ವಾಗತಾಧ್ಯಕ್ಷರಾದ ಶ್ರೀ ಕೆ. ಎಚ್. ಪಾಟೀಲರು, ಕಾರ್ಯಸಮಿತಿಯ ಸದಸ್ಯರಾದ ಶ್ರೀ ಟಿ. ಮಾದಯ್ಯ ಗೌಡರು, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ಅನ್ನದಾನಯ್ಯ ಪುರಾಣಿಕರು ಮತ್ತು ಕೋಶಾಧಿಕಾರಿಗಳಾದ ಶ್ರೀ ಜಿ. ಶ್ರೀನಿವಾಸನ್ ಅವರು ರಥದಲ್ಲಿ ಮಂಡಿಸಿದ್ದರು. ಸಹಸ್ರಾರು ಜನ ಮೆರೆವಣಿಗೆಯಲ್ಲಿ ಭಾಗವಹಿಸಿ ಸಮ್ಮೇಳನಾಧ್ಯಕ್ಷರಿಗೆ ಗೌರವವನ್ನರ್ಪಿಸಿದರು.

ಗದಗಿನ ಕೋ-ಆಪರೆಟೀವ್ ಕಾಟನ್ ಸೇಲ್ಸ್ ಸೊಸೈಟಿಯ ವಿಶಾಲವಾದ ಆವರಣದಲ್ಲಿ ಸಮ್ಮೇಳನಕ್ಕಾಗಿ ರಚಿಸಲಾದ ಭವ್ಯ ಹಾಗೂ ವಿಸ್ತೃತವಾದ "ಕುಮಾರವ್ಯಾಸ ಮಂಟಪ"ವು ಕಂಗೊಳಿಸುತ್ತಿತ್ತು. ಸಮ್ಮೇಳನದ ಆವರಣದಲ್ಲಿ ಪ್ರವೇಶಿಸಲು ನೂತನವಾಗಿ ನಿರ್ಮಿತವಾಗಿದ್ದ "ಚಾಮರಸ ಕವಿಯ ಮಹಾದ್ವಾರ"ವು ತುಂಬಾ ಆಕರ್ಷಕವಾಗಿದ್ದಿತು. ಕಲ್ಲು ಇಟ್ಟಿಗೆಗಳ ಗಟ್ಟಿಮುಟ್ಟಾದ ಈ ಮಹಾದ್ವಾರದ ಮೇಲ್ಭಾಗದಲ್ಲಿ ಚಿತ್ರಿಸಲಾಗಿದ್ದ ಕುಮಾರವ್ಯಾಸ, ಚಾಮರಸ, ಸರಸ್ವತಿ, ಕಿತ್ತೂರ ಚನ್ನಮ್ಮ, ಗಂಡಭೇರುಂಡ ಮತ್ತು ವಕ್ಕಲಿಗನ ವರ್ಣರಂಜಿತ ಚಿತ್ರಗಳು ಅತಿ ಮನೋಹರವಾಗಿದ್ದವು. "ಚಾಮರಸ ಕವಿಯ ಮಹಾದ್ವಾರ"ವು ಸಾಹಿತ್ಯ, ಕಲೆ, ಸಾಹಸ, ಭಾವೈಕ್ಯ, ಅಭಿವೃದ್ಧಿ ಯೋಜನೆಗಳ ದ್ಯೋತಕವಾಗಿ ಮೆರೆಯುತಲಿದ್ದಿತು. ಸಭಾಭವನದ ಬಲಭಾಗದಲ್ಲಿ ಪುಸ್ತಕವ್ಯಾಪಾರಿಗಳ, ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿ ಶಾಖೆಯ ಹಾಗೂ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ ಮೊದಲಾದವರ ಮಳಿಗೆಗಳಿದ್ದವು. ಸಮ್ಮೇಳನದ ಮುಖ್ಯ ಅತಿಥಿಗಳಿಗೆ ಜನರಲ್ ಹಾಸ್ಟೆಲಿನಲ್ಲಿ ವಸತಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಪ್ರತಿನಿಧಿಗಳಿಗೆ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಸಮ್ಮೇಳನದ ಆವರಣದಲ್ಲಿಯೇ ಮಾಡಲಾಗಿತ್ತು. ಸಮ್ಮೇಳನಕ್ಕೆ ಬರುವವರಿಗೆ ವಾಹನಗಳ ವಿಶೇಷ ವ್ಯವಸ್ಥೆಯಾಗಿತ್ತು.

ಸಮ್ಮೇಳನದ ಪ್ರಾರಂಭ

೨೭ನೆಯ ತಾರೀಖು ಬೆಳಗ್ಗೆ ೯ ಘಂಟೆಗೆ ಮೈಸೂರಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಕೆಂಗಲ್ ಹನುಮಂತಯ್ಯನವರು ಧ್ವಜಾರೋಹಣ ಮಾಡಿದರು. ಈ ಸಮಾರಂಭದಲ್ಲಿ ಭಾಗವಹಿಸಿದ ಪ್ರಮುಖರು ಹಾಗೂ ಪ್ರೇಕ್ಷಕರು ಅಲ್ಲಿಂದ "ಕುಮಾರವ್ಯಾಸ ಮಂಟಪ"ಕ್ಕೆ ದಯಮಾಡಿಸಿದರು. ಸಭಾಭವನವು ಸಾಹಿತಿಗಳಿಂದಲೂ ಸಾಹಿತ್ಯೋಪಾಸಕರಿಂದಲೂ ಸಹಸ್ರಾರು ಜನ ಸ್ತ್ರೀ ಪುರುಷರಿಂದಲೂ ತುಂಬಿ ತುಳುಕುತ್ತಿದ್ದಿತು. ಸುಂದರವಾಗಿ ರಚಿಸಲಾಗಿದ್ದ ವೇದಿಕೆಯಮೇಲೆ ಮಧ್ಯದಲ್ಲಿ ಶ್ರೀ ಮ. ನಿ. ಪ್ರ. ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಮಂಡಿಸಿದ್ದರು. ಅವರ ಎಡ ಬಲ ಭಾಗಗಳಲ್ಲಿ ಸಮ್ಮೇಳನಾಧ್ಯಕ್ಷರಾದ ಪ್ರೊ|| ಕೆ. ಜಿ. ಕುಂದಣಗಾರರೂ ಮತ್ತು ಸಮ್ಮೇಳನದ ಉದ್ಘಾಟಕರಾದ ಶ್ರೀ ಅಣ್ಣಾರಾವ್ ಗಣಮುಖಿಯವರೂ ಆಸೀನರಾಗಿದ್ದರು. ಶ್ರೀ ಕೆಂಗಲ್ ಹನುಮಂತಯ್ಯನವರೂ, ಡಾ|| ಎಸ್. ಸಿ. ನಂದೀಮಠರೂ, ಶ್ರೀ ಹುಯಿಲಗೋಳ ನಾರಾಯಣರಾಯರೂ, ಪಂಡಿತ ಪುಟ್ಟರಾಜ ಗವಾಯಿಗಳೂ, ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳೂ, ಸ್ವಾಗತಾಧ್ಯಕ್ಷರಾದ ಶ್ರೀ ಕೆ. ಎಚ್.

ಪಾಟೀಲರೂ, ನಗರ ಸಭಾಧ್ಯಕ್ಷರಾದ ಶ್ರೀ ಕೆ. ಎಂ. ಕಣವಿಯವರೂ, ಪರಿಷತ್ತಿನ ಕಾರ್ಯಸಮಿತಿಯ ಸದಸ್ಯರೂ, ಅಧಿಕಾರಿವರ್ಗದವರೂ ಮೊದಲಾದವರು ವೇದಿಕೆಯ ಮೇಲೆ ವಿರಾಜಮಾನರಾಗಿದ್ದರು.

ನಾಡಕವಿ ಶ್ರೀ ಹುಯಿಲಗೋಳ ನಾರಾಯಣ ರಾಯರು ವಿರಚಿಸಿದ ಸ್ವಾಗತ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಕೆ. ಎಚ್. ಪಾಟೀಲರು ಭಾಷಣ ಮಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಸಮ್ಮೇಳನವು ಶುಭಪ್ರದವಾಗಲೆಂದು ಹಾರೈಸಿದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಪಾಟೀಲರು ಸಮ್ಮೇಳನಕ್ಕೆ ಯಶಸ್ಸನ್ನು ಕೋರಿ ಬಂದ ಸಂದೇಶಗಳನ್ನು ಓದಿದರು. ಹುಬ್ಬಳ್ಳಿಯ ಶ್ರೀ ಮೂರು ಸಾವಿರ ಮಠದ ಜಗದ್ಗುರಗಳು, ಶ್ರೀ ಉರವಕೊಂಡ ಜಗದ್ಗುರುಗಳು, ಧಾರವಾಡದ ಶ್ರೀ ಮುರುಘಾಮಠದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು, ನಿಡುಮಾಮಿಡಿ ಮಹಾಸ್ವಾಮಿಗಳು, ನವಕಲ್ಯಾಣ ಮಠದ ಶ್ರೀ ಕುಮಾರಸ್ವಾಮಿಗಳು, ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್, ಕೇಂದ್ರಮಂತ್ರಿ ಶ್ರೀ ಕರಮರ್‌ಕರ್, ರಾಜ್ಯಮಂತ್ರಿಗಳಾದ ಶ್ರೀ ಎಚ್. ಕೆ. ವೀರಣ್ಣಗೌಡ, ಶ್ರೀ ಹೆಗ್ಗಡೆ, ಶ್ರೀ ಶಂಷುದ್ದೀನ್, ಕರ್ನಾಟಕದ ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಡಿ. ಸಿ. ಪಾವಟೆ, ಮದ್ರಾಸ್ ಹೈಕೋರ್ಟ್ ನಿವೃತ್ತ ಶ್ರೇಷ್ಠ ನ್ಯಾಯಾಧೀಶರಾದ ರಾಜಮನ್ನಾರ್ ಅವರು, ಶ್ರೀಗಳಾದ ಎಂ. ಗೋವಿಂದ ಪೈ, ಡಿ. ವಿ. ಗುಂಡಪ್ಪ, ಉತ್ತಂಗಿಚನ್ನಪ್ಪ, ದ. ರಾ. ಬೇಂದ್ರೆ, ವಿ. ಕೆ. ಗೋಕಾಕ್, ವಿ. ಸೀತಾರಾಮಯ್ಯ, ಸಿ. ಕೆ. ವೆಂಕಟರಾಮಯ್ಯ, ಶ್ರೀಮತಿ ಜಯದೇವಿತಾಯಿ ಲಿಗಾಡೆ ಮೊದಲಾದವರು ಶುಭ ಸಂದೇಶವನ್ನು ಕಳಿಸಿದ್ದರು. ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಡುತ್ತಾ ಸಮ್ಮೇಳನಾಧ್ಯಕ್ಷರ ಹಾಗೂ ಉದ್ಘಾಟಕರ ನಾಡುನುಡಿಗಳ ಸೇವೆಯನ್ನು ಪ್ರಶಂಸಿಸಿದರು. ರಾಜ್ಯದ ಶಿಕ್ಷಣ ಸಚಿವರಾದ ಶ್ರೀ ಅಣ್ಣಾರಾವ್‌ಗಣಮುಖಿಯವರು "ಸಾಹಿತ್ಯ ಜನಾಂಗದ ಇಚ್ಛಾಸಕ್ತಿಯ ಪ್ರತೀಕ, ವಿದ್ಯಾಮಂದಿರಗಳು ಜ್ಞಾನ ಶಕ್ತಿಯ, ಸಂಕೇತ; ಸರ್ಕಾರ ಕ್ರಿಯಾಶಕ್ತಿಯ ದ್ಯೋತಕ. ಈ ಮೂರರ ಮೇಳದಲ್ಲಿದೆ ಮೇಲ್ಮೆ. . . . . . . ಸಾಹಿತಿಗಳಿಗೆ ಸಮಾಜವು ನೀಡಿರುವ, ನಾಡು ನೀಡಿರುವ ಆಹ್ವಾನವನ್ನು ಸ್ವೀಕರಿಸಲಿ, ತಮ್ಮ ಶಕ್ತಿದಾಯಕ ಸಾಹಿತ್ಯದಿಂದ ಕನ್ನಡಕುಲ ಒಂದಾಗುವಂತೆ ಬೆಸೆಯಲಿ, ಕನ್ನಡ ಧರ್ಮ ರೂಪುಗೊಳ್ಳುವಂತೆ ಎಸಗಲಿ. . . . . . . ಈ ಎಲ್ಲರ ಸಮ್ಮೇಳನದಲ್ಲಿ ಹೊಸ ಶಕ್ತಿ ಹುಟ್ಟಲಿ. ಹೊಸ ನೋಟ ಮೂಡಲಿ. ಹೊಸಬಾಳಿನ ಕಾಣ್ಕೆ ತಲೆದೋರಲಿ" ಎಂದು ಹೃತ್ಪೂರ್ವಕವಾಗಿ ಹಾರೈಸಿ, ಸಮ್ಮೇಳನವನ್ನು ಉದ್ಘಾಟಿಸಿದರು.

ಅನಂತರ ಸಮ್ಮೇಳನಾಧ್ಯಕ್ಷರ ಆಯ್ಕೆಯು ನಡೆಯಿತು. ಹಿಂದಿನ ಸಮ್ಮೇಳನಾಧ್ಯಕ್ಷರಾದ ಶ್ರೀ ಅ. ನ. ಕೃಷ್ಣರಾಯರು ಬರೆದ ಪತ್ರವನ್ನು ಓದಿ ಮಾಜಿ ಸಮ್ಮೇಳನಾಧ್ಯಕ್ಷರುಗಳಲ್ಲೊಬ್ಬರಾದ ಡಾ|| ಎಸ್. ಸಿ. ನಂದೀಮಠರು ಅಧ್ಯಕ್ಷ ಸ್ಥಾನಕ್ಕೆ ಪ್ರೊ|| ಕುಂದಣಗಾರರ ಹೆಸರನ್ನು ಸೂಚಿಸುತ್ತಾ ಶ್ರೀ ಕುಂದಣಗಾರರ ಬಹುಮುಖವಾದ ಸಾಹಿತ್ಯಸೇವೆ ಹಾಗೂ ಅನುಪಮವಾದ ವ್ಯಕ್ತಿತ್ವವನ್ನು ಕೊಂಡಾಡಿದರು. ಪರಿಷತ್ತಿನ ಕಾರ್ಯದರ್ಶಿ ಶ್ರೀ ಅನ್ನದಾನಯ್ಯ ಪುರಾಣಿಕರು ಪ್ರೊ|| ಕುಂದಣಗಾರರ ಬಹುಮುಖ ಪ್ರತಿಭೆಯನ್ನು ಪ್ರಶಂಸಿಸಿ ಡಾ|| ನಂದೀಮಠರ ಸೂಚನೆಯನ್ನು ಅನುಮೋದಿಸಿದರು. ಅವರಿಗೆ ಬೆಂಬಲವನ್ನಿತ್ತು ಮಾಜೀ ಸಮ್ಮೇಳನಾಧ್ಯಕ್ಷರಾದ ವ್ಯಾಕರಣತೀರ್ಥ ಶ್ರೀ ಚಂದ್ರಶೇಖರ ಶಾಸ್ತ್ರಿಗಳು, ಗದಗು ಬೆಟಗೇರಿ ನಗರ ಸಭಾಧ್ಯಕ್ಷರಾದ ಶ್ರೀ ಕಣವಿಯವರು, ಕರ್ನಾಟಕ ವಣಿಕ ಸಂಘದ ಅಧ್ಯಕ್ಷರಾದ ಶ್ರೀ ಶಾಂತಪ್ಪಣ್ಣ ಎಳಮಲಿಯವರು, ವಿಧಾನಸಭೆ ಸದಸ್ಯರಾದ ಶ್ರೀ ಕೆ. ಪಿ. ಗದಗ ಅವರು ಮಾತನಾಡಿದರು.

ನಂತರ ಸಮ್ಮೇಳನಾಧ್ಯಕ್ಷರಿಗೆ ವಿವಿಧ ಸಂಘ ಸಂಸ್ಥೆಗಳಿಂದ ಮಾಲಾರ್ಪಣೆ ನಡೆಯಿತು. ತದನಂತರ ಶ್ರೀ ಕೆಂಗಲ್ ಹನುಮಂತಯ್ಯನವರು ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ 'ಪ್ರಸಾದ' ಎಂಬ ವಿಶೇಷಾಂಕವನ್ನು ಪ್ರಕಟಿಸುತ್ತಾ ಈ ಸಂಚಿಕೆಯು ಸಾಹಿತ್ಯ, ಸಂಸ್ಕೃತಿ, ಕಲೆ, ಜೀವನ ಪರಿಚಯ ಹಾಗೂ ಚಿತ್ರಗಳಿಂದ ಕೂಡಿ ಆಕರ್ಷಕವಾಗಿದೆಯೆಂದು ನುಡಿದರು. ಇದೇ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿದ್ಯಾರ್ಥಿಗಳು ಪ್ರಕಟಿಸಿದ 'ಕುಂದಣ' ಎಂಬ ಹೊತ್ತಗೆಯನ್ನು ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಸಮ್ಮೇಳನಾಧ್ಯಕ್ಷ ಶ್ರೀ ಕುಂದಣಗಾರರಿಗೆ ಅರ್ಪಿಸಿದರು. ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಡಾ|| ಆರ್. ಸಿ. ಹಿರೇಮಠರು ಗ್ರಂಥದ ಪರಿಚಯ ಮಾಡಿಕೊಟ್ಟರು. ಧಾರವಾಡದ ತಾರಾ ಪ್ರಕಾಶನದ ಶ್ರೀ

ಪಂಚಾಕ್ಷರಿ ಹಿರೇಮಠರು ತಮ್ಮ ಮೂರು ನೂತನ ಪ್ರಕಟನೆಗಳನ್ನು ಪ್ರೊ|| ಕುಂದಣಗಾರರಿಗೆ ಅರ್ಪಿಸಿದರು. ಆಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಹಾಗೂ ಸಮ್ಮೇಳನದ ಸ್ವಾಗತ ಸಮಿತಿಯ ಪರವಾಗಿ ನಾಡಕವಿ ಹುಯಿಲಗೋಳ ನಾರಾಯಣರಾಯರು ಮತ್ತು ಪಂಡಿತ ಪುಟ್ಟರಾಜ ಗವಾಯಿಗಳಿಗೆ ಶ್ರೀ ಕೆ. ಎಚ್. ಪಾಟೀಲರು ಸನ್ಮಾನ ಪತ್ರವನ್ನು ಅರ್ಪಿಸಿದರು. ತದನಂತರ ಸಮ್ಮೇಳನಾಧ್ಯಕ್ಷರಾದ ಶ್ರೀ ಕುಂದಣಗಾರರು ವಿದ್ವತ್ ಪೂರ್ಣವೂ ವಿಚಾರ ಪ್ರಚೋದಕವೂ ಆದ ಭಾಷಣವನ್ನು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯದ ಸುಮಾರು ಎರಡು ಸಹಸ್ರ ವರ್ಷಗಳ ಚರಿತ್ರೆಯ ಸಿಂಹಾವಲೋಕನ ಮಾಡಿ ಜನತೆಯಲ್ಲಿ ರಾಷ್ಟ್ರೀಯ ಭಾವನೆ ಜಾಗೃತಿಗೊಳ್ಳಬೇಕೆಂದೂ, ರಾಜ್ಯದ ಹೆಸರು ಕರ್ನಾಟಕ ಆಗಬೇಕೆಂದೂ ಗಡಿ ಸಮಸ್ಯೆಗಳು ಸಂಧಾನ ಮಾರ್ಗದಿಂದ ಬಗೆಹರಿಯಲೆಂದೂ ಗೋವಾ ಕರ್ನಾಟಕಕ್ಕೆ ಸೇರಲೆಂದೂ, ಸಂಶೋಧನೆ ಹಾಗೂ ವಿಮರ್ಶೆ, ಶುಚಿಯಾದ ಸತ್ವಪೂರ್ಣವಾದ ಮತ್ತು ಸುಚಿರವಾದ ಸಾಹಿತ್ಯಸೃಷ್ಟಿಯು ಹೆಚ್ಚು ಹೆಚ್ಚಾಗಿ ನಡೆಯಲೆಂದೂ ಮುಂತಾಗಿ ಹಾರೈಸಿದರು. (ಅವರ ಭಾಷಣವು ಇದೇ ಸಂಚಿಕೆಯಲ್ಲಿ ಅಚ್ಚಾಗಿದೆ.) ಅವರ ಭಾಷಣದ ಬಹು ಭಾಗವನ್ನು ಡಾ|| ಎಂ. ಎಸ್. ಸುಂಕಾಪೂರ್ ಅವರು ಓದಿದರು. ಆಮೇಲೆ ಶ್ರೀ ಸಿ. ಎಸ್. ಪಾಟೀಲರಿಂದ ವಂದನಾರ್ಪಣೆಯಾಯಿತು.

ಅನಂತರ ಶ್ರೀ ಅನ್ನದಾನಯ್ಯ ಪುರಾಣಿಕರು ವಿಷಯ ನಿರ್ಧಾರಕ ಮಂಡಲಿಯ ರಚನೆಯ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಈ ಕೆಳಗೆ ಕಂಡ ಮಹನೀಯರನ್ನೊಳಗೊಂಡ ವಿಷಯ ನಿರ್ಧಾರಕ ಮಂಡಲಿಯ ರಚನೆಯಾಯಿತು.

೧. ಸಮ್ಮೇಳನಕ್ಕೆ ಬಂದಿದ್ದ ಪರಿಷತ್ತಿನ ಕಾರ್ಯಸಮಿತಿಯ ಸದಸ್ಯರು.

ಶ್ರೀಗಳಾದ—

(೧) ಆಸ್ಥಾನ ವಿದ್ವಾನ್, ಪಂಡಿತರತ್ನಂ ಬಿ. ಶಿವಮೂರ್ತಿ ಶಾಸ್ತ್ರಿಗಳು.
(೨) ಅನ್ನದಾನಯ್ಯ ಪುರಾಣಿಕರು.
(೩) ಡಾ|| ಕೆ. ಎಂ. ಕೃಷ್ಣರಾಯರು.
(೪) ಜಿ. ಶ್ರೀನಿವಾಸ್ ಅವರು.
(೫) ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು (ಮಾಜಿ ಸಮ್ಮೇಳನಾಧ್ಯಕ್ಷರು.)
(೬) ವಿ. ಬಿ. ನಾಯಕರು.
(೭) ರಾ. ಗು. ಜೋಶಿಯವರು.
(೮) ಎಂ. ಎಸ್. ಅನಂತಪದ್ಮನಾಭರಾಯರು.
(೯) ಡಾ|| ಆರ್. ಸಿ. ಹಿರೇಮಠ ಅವರು
(೧೦) ಟಿ. ಮಾದಯ್ಯ ಗೌಡರು.
(೧೧) ಎಂ. ಬಿ. ಬೂದಿಹಾಳಮಠ ಅವರು.
(೧೨) ಎಚ್. ಎಸ್. ರೇಣುಕಪ್ರಸಾದ್ ಅವರು.
(೧೩) ಎ. ಎಸ್. ಹೆಗ್ಗಡೆಯವರು.
(೧೪) ಶ್ರೀಮತಿ ಬಿ. ಜಿ. ಸುಶೀಲಮ್ಮನವರು.

೨. ಸಮ್ಮೇಳನದ ಅಧ್ಯಕ್ಷರು.

(೧೫) ಪ್ರೊ|| ಕೆ. ಜಿ. ಕುಂದಣಗಾರರು.

೩. ಸಮ್ಮೇಳನಕ್ಕೆ ಬಂದಿದ್ದ ಹಿಂದಿನ ಸಮ್ಮೇಳನಾಧ್ಯಕ್ಷರು.

(೧೬) ಡಾ|| ಎಸ್. ಸಿ. ನಂದೀಮಠ ಅವರು.
(೧೭) ಶ್ರೀ ಆದ್ಯರಂಗಾಚಾರ್ಯರು.

೪. ಸ್ವಾಗತ ಮಂಡಳಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

ಶ್ರೀಗಳಾದ—

(೧೮) ಕೆ. ಎಚ್. ಪಾಟೀಲ ಅವರು (ಅಧ್ಯಕ್ಷರು.)
(೧೯) ಸಿ. ಎಸ್ ಪಾಟೀಲ ಅವರು (ಪ್ರಧಾನ ಕಾರ್ಯದರ್ಶಿಗಳು.)

(೨೦) ಕುಮಾರಿ ಪಿ. ಎಂ. ಜೋಶಿ ಅವರು.	(ಸಹ ಕಾರ್ಯದರ್ಶಿಗಳು)
(೨೧) ಡಿ. ಜಿ. ಬಾರಕೇರ ಅವರು.	
(೨೨) ಎಸ್. ಎಸ್. ಅಂಗಡಿ ಅವರು.	

೫. ಪರಿಷತ್ತಿನ ಅಧ್ಯಕ್ಷರು ನಿಯಮಿಸುವ ಪರಿಷತ್ತಿನ ಇಬ್ಬರು ಸದಸ್ಯರು.

(೨೩) ಡಾ|| ಸುಂಕಾಪೂರ್ ಅವರು.
(೨೪) ಶ್ರೀ ಇಡಗೂರು ನಂಜುಂಡಯ್ಯನವರು.

೬. ಸ್ವಾಗತ ಮಂಡಲಿಯವರು ನಿಯಮಿಸುವ ಐದು ಮಂದಿ ಸದಸ್ಯರು.

ಶ್ರೀಗಳಾದ—

(೨೫) ಕೌತಾಳ ವೀರಪ್ಪನವರು.
(೨೬) ಮಳಗಿ ಜಯರಾಮಾಚಾರ್ಯರು.
(೨೭) ಎಂ. ಜಿ. ಹುಲಗಿ ಅವರು.

(೨೮) ಶ್ರೀಮತಿ ಲಕ್ಷ್ಮವ್ವ ಮೂಗನೂರು ಅವರು.
(೨೯) ಕೆ. ಸಿ. ಟೆಂಗಿನಕಾಯಿಯವರು.

೭. ಪ್ರತಿನಿಧಿಗಳು ತಮ್ಮಲ್ಲಿ ಆರಿಸುವ ಹತ್ತು ಮಂದಿ ಸದಸ್ಯರು.

ಶ್ರೀಗಳಾದ—

(೩೦) ಎಚ್. ಆರ್. ಬಂಡಿವಡ್ಡರ್, ಹಾರುಬೆಳವಡಿ.
(೩೧) ಸಿ. ಎಂ. ಜಯದೇವ, ಚಿಕ್ಕಮಗಳೂರು.
(೩೨) ನವಲಿ ವೇದವ್ಯಾಸರಾವ್, ಗಂಗಾವತಿ.
(೩೩) ಜಿ. ಅಶ್ವತ್ಥನಾರಾಯಣ, ಬೆಂಗಳೂರು.
(೩೪) ಬಿ. ವೀರಣ್ಣನವರು, ಹೊಸಪೇಟೆ.
(೩೫) ಕಯ್ಯಾರ ಕಿಞ್ಞಣ್ಣ ರೈ ಅವರು, ಕಾಸರಗೋಡು.
(೩೬) ಎಂ. ಎ. ಕಲಬುರ್ಗಿ, ವಿಜಾಪುರ.
(೩೭) ವೃಷಭೇಂದ್ರಸ್ವಾಮಿಯವರು, ಧಾರವಾಡ.
(೩೮) ಗಣೇಶ ಜೋಶಿಯವರು, ಕೊಪ್ಪಳ
(೩೯) ಶ್ರೀನಿವಾಸ ಉಡುಪ ಅವರು, ಹೊಸನಗರ.

ಗ್ರಂಥ ಮತ್ತು ಕಲಾ ಪ್ರದರ್ಶನ

ಸಂಜೆ ೪ ಘಂಟೆಗೆ ಶ್ರೀ ಕೆಂಗಲ್ ಹನುಮಂತಯ್ಯನವರು ಗ್ರಂಥ ಮತ್ತು ಕಲಾ ಪ್ರದರ್ಶನವನ್ನು ಉದ್ಘಾಟಿಸುತ್ತಾ ಕನ್ನಡಕಲೆ, ಮತ್ತು ಗ್ರಂಥಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕುವುದು ಅಗತ್ಯವೆಂದೂ ಕಲಾವಿದರಿಗೆ ಹಾಗೂ ಗ್ರಂಥಕರ್ತರಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ರಾಜ್ಯ ಸರಕಾರ ಹಾಗೂ ಪರಿಷತ್ತು ಮುಂದೆ ಬರಬೇಕೆಂದೂ ಪರಿಷತ್ತಿನ ಗ್ರಂಥಾಲಯವು ಕೇಂದ್ರ ಗ್ರಂಥಾಲಯವಾಗಬೇಕೆಂದೂ ರಾಜ್ಯದ ಗ್ರಂಥಕರ್ತರೂ ಪ್ರಕಾಶಕರೂ ತಮ್ಮ ಗ್ರಂಥಗಳ ಎರಡೆರಡು ಪ್ರತಿಗಳನ್ನು ತಪ್ಪದೇ ಸಲ್ಲಿಸಬೇಕೆಂದೂ ಗ್ರಂಥಗಳನ್ನು ಕಡ್ಡಾಯವಾಗಿ ಸಲ್ಲಿಸಲು ರಾಜ್ಯ ಸರಕಾರವು ಒಂದು ಶಾಸನವನ್ನು ರಚಿಸಬೇಕೆಂದೂ ಮುಂತಾಗಿ ಮಾತನಾಡಿದರು.

ಕನ್ನಡದಲ್ಲಿ ಗ್ರಂಥರಚನೆ ತೃಪ್ತಿಕರವಾಗಿಲ್ಲವೆಂದೂ ಮತ್ತು ನಮ್ಮ ರಾಜ್ಯದಲ್ಲಿ ಸಾಹಿತ್ಯ ಹಾಗೂ ಕಲೆಗಳಿಗೆ ತಕ್ಕ ಪುರಸ್ಕಾರ ದೊರೆಯುತ್ತಿಲ್ಲವೆಂದೂ ಪ್ರೊ|| ಹಾಲಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು. ಶ್ರೀ ಕೆ. ಎಸ್. ಧರಣೇಂದ್ರಯ್ಯನವರು ಬಾರದಿದ್ದುದರಿಂದ ಕರ್ನಾಟಕ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಮುಖ್ಯಸ್ಥರಾದ ಪ್ರೊ|| ಗ. ಸ. ಹಾಲಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಗರ ಸಭಾಧ್ಯಕ್ಷರಾದ ಶ್ರೀ ಕೆ. ಎಂ. ಕಣವಿಯವರು ಪ್ರಾರಂಭದಲ್ಲಿ ಸ್ವಾಗತ ಭಾಷಣವನ್ನು ಮಾಡಿದರು.

ನಗರದ ವಿಜಯ ಕಲಾ ಮಂದಿರದವರು ಏರ್ಪಡಿಸಿದ ಚಿತ್ರಕಲಾ ಪ್ರದರ್ಶನವು ಸಮ್ಮೇಳನದ ವಿಶೇಷ ಆಕರ್ಷಣೆಯಾಗಿತ್ತು. ಮಂದಿರದ ಡೈರೆಕ್ಟರವರಾದ ಶ್ರೀ ಟಿ. ಪಿ. ಅಕ್ಕಿಯವರ ಮತ್ತು ಪ್ರಿನ್ಸಿಪಾಲರಾದ ಪಾಟೀಲರ ನೇತೃತ್ವದಲ್ಲಿ ಪ್ರದರ್ಶನವನ್ನು ವ್ಯವಸ್ಥೆಗೊಳಿಸಲಾಗಿತ್ತು. ಶ್ರೇಷ್ಠ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು.

ಭಾಷಾ ಬಾಂಧವ್ಯ ಗೋಷ್ಠಿ

ಸಂಜೆ ೬ ಘಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಪ್ರೊ|| ತೀ. ನಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಭಾಷಾ ಬಾಂಧವ್ಯ ಗೋಷ್ಠಿಯು ನಡೆಯಿತು. ಪ್ರಾರಂಭದಲ್ಲಿ ಶ್ರೀ ಬಿ. ಎಸ್. ಸಂಕನಗೌಡರು, ಸ್ವಾಗತ ಭಾಷಣವನ್ನು ಮಾಡಿದರು. ಗೋಷ್ಠಿಯನ್ನು ಪ್ರಾರಂಭಿಸುತ್ತಾ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ|| ಆರ್. ಸಿ. ಹಿರೇಮಠರು, "ದೇಶದಲ್ಲಿ ಈಗ ಭಾಷಾ ವ್ಯಾಮೋಹವು ಹೆಚ್ಚು ಹೆಚ್ಚಾಗಿ ಬೆಳೆದು ಬರತೊಡಗಿದೆ. ಇದು ರಾಷ್ಟ್ರದ ಪ್ರಗತಿಗೆ ಖಂಡಿತವಾಗಿಯೂ ಆತಂಕವನ್ನೊಡ್ಡುತ್ತಿದೆ. ಈ ವಿಷಮತೆಯನ್ನು ಹೋಗಲಾಡಿಸಬೇಕಾದರೆ ಜನರು ಸಾಧ್ಯವಾದಷ್ಟು ಹೆಚ್ಚು ಭಾಷೆಗಳನ್ನು ಕಲಿಯಬೇಕಾಗುತ್ತದೆ. ಅಂತೆಯೇ ಶಿಕ್ಷಣ ಸಂಸ್ಥೆಗಳಲ್ಲಾದರೂ ವಿದ್ಯಾರ್ಥಿಗಳಿಗೆ ಬೇರೆ ಭಾಷೆಗಳನ್ನು ಕಲಿಸುವ ಏರ್ಪಾಡು ಮಾಡುವುದು ಅಗತ್ಯವಾಗಿದೆ" ಎಂದು ಹೇಳಿದರು.

ಶ್ರೀ ಕಯ್ಯಾರ ಕಿಞ್ಞಣ್ಣ ರೈ ಅವರು ಕನ್ನಡ–ಮಲೆಯಾಳಿ, ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರೊ|| ಅವಳೀಕರ್ ಅವರು ಕನ್ನಡ–ಮರಾಠಿ, ಪ್ರೊ|| ವೃಷಭೇಂದ್ರಸ್ವಾಮಿಯವರು ಕನ್ನಡ–ತೆಲುಗು, ಶ್ರೀ ಎಂ. ವಾಸುದೇವ ಮೂರ್ತಿಯವರು ಕನ್ನಡ–ಹಿಂದಿ, ಶ್ರೀ ಜಿ. ಬಿ. ಜೋಶಿಯವರು ಕನ್ನಡ–ಸಂಸ್ಕೃತ ಸಂಬಂಧಗಳನ್ನು ಕುರಿತು, ಶ್ರೀ ಎಸ್. ಕೆ. ತಮ್ಮನಗೌಡರು ಕನ್ನಡ ಸಾಹಿತ್ಯವನ್ನು ಕುರಿತು ಅಮೋಘವಾದ ಭಾಷಣಗಳನ್ನು ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ|| ತೀ. ನಂ. ಶ್ರೀಕಂಠಯ್ಯನವರು ಕನ್ನಡ–ತಮಿಳು, ಕನ್ನಡ–

ಇಂಗ್ಲಿಷ್ ಸಂಬಂಧಗಳನ್ನು ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸಿ, ಸುಭದ್ರ ಹಾಗೂ ಸಮೃದ್ಧ ರಾಷ್ಟ್ರವನ್ನು ಕಟ್ಟಲು ಅಗತ್ಯವಾದ ಭಾವೈಕ್ಯತೆಯನ್ನು ಸಾಧಿಸಲು ಭಾಷಾ ಬಾಂಧವ್ಯ ಬಲಗೊಳ್ಳುವುದು ಅಗತ್ಯವೆಂದು ನುಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾಯರ ಕಾವ್ಯವಾಚನ ನಡೆಯಿತು. ಈ ಗೋಷ್ಠಿಯ ಕಾರ್ಯಕಲಾಪಗಳು ಅತ್ಯಂತ ಯಶಸ್ವಿಯಾಗಿ ಜರುಗಿದವು.

ರಾತ್ರಿ ೯ ರಿಂದ ಸಂಗೀತಸುಧಾಕರ ಶ್ರೀ ಸಿದ್ಧರಾಮ ಜಂಬಲದಿನ್ನಿ ಇವರ ಸಂಗೀತ ಸಭೆ ನಡೆದನಂತರ ನೃತ್ಯ, ಭಾವಗೀತೆ, ಜನಪದಹಾಡು ಮೊದಲಾದ ಮನರಂಜನೆಯ ಕಾರ್ಯಕ್ರಮಗಳು ಜರುಗಿದುವು.

ಕವಿಗೋಷ್ಠಿ

೨೮-೧೨-೧೯೬೧ ನೆಯ ಗುರುವಾರ ಬೆಳಗ್ಗೆ ೯-೩೦ ಘಂಟೆಗೆ ಶ್ರೀ ಚನ್ನವೀರ ಕಣವಿಯವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿಯು ಪ್ರಾರ್ಥನಾಗೀತೆಯೊಂದಿಗೆ ಆರಂಭವಾಯಿತು. 'ಪಂಚಾಮೃತ' ಪತ್ರಿಕೆಯ ಸಂಪಾದಕರಾದ ಶ್ರೀ ಪಂಡರೀನಾಥ ಗಲಗಲಿಯವರು ಎಲ್ಲ ಕವಿಗಳನ್ನು ಹಾಗೂ ಸಾಹಿತ್ಯೋಪಾಸಕರನ್ನು ಸ್ವಾಗತಿಸಿದರು. ಪ್ರೊ|| ಕೆ. ಡಿ. ಕುರ್ತುಕೋಟಿಯವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಶ್ರೀ ಸಿದ್ಧಯ್ಯ ಪುರಾಣಿಕರು ಅನಿವಾರ್ಯ ಕಾರಣದಿಂದಾಗಿ ಬಂದಿರಲಿಲ್ಲವಾದ್ದರಿಂದ ಅವರ ಉದ್ಘಾಟನಾಭಾಷಣವನ್ನು ಶ್ರೀ ಅನ್ನದಾನಯ್ಯ ಪುರಾಣಿಕರು ಓದಿದರು. "ಕನ್ನಡ ನಾಡಿನ ಕವಿಗಳು ಹಳೆಯ ಹೊಸವೆಂಬ ಪರಂಪರೆಗಳ ಕಟ್ಟಿಗೆ ಸಿಕ್ಕಿಬೀಳದೆ ವಿಶಾಲದೃಷ್ಟಿಯಿಂದ ಕಾವ್ಯವನ್ನು ರಚಿಸಿ ಶೃಂಗದಿಂದ ಶೃಂಗಕ್ಕೆ, ಅಂಬುಧಿಯಿಂದ ಅಂಬುಧಿಗೆ ಅನಾಯಾಸವಾಗಿ ಹಾರಿದ ಆಂಜನೇಯನಂತೆ ಅವರು ಪದ್ಧತಿಯಿಂದ ಪದ್ಧತಿಗೆ ಪರಂಪರೆಯಿಂದ ಪರಂಪರೆಗೆ ಲೀಲಾಜಾಲವಾಗಿ ಹಾರಿ ಎಲ್ಲೆಲ್ಲಿಯೂ ತಮ್ಮ ವಿಕ್ರಮವನ್ನು ಮೆರೆಸಲಿ, ಕನ್ನಡ ಕವಿತೆ ಮುನ್ನೀರುಗಳ ದಾಟಿ ನಾಲ್ಕೂ ನಿಟ್ಟಿನ ನಾಡುಗಳಲ್ಲಿಯೂ ತನ್ನ ತೇಜವನ್ನ ಹರಡುವ ದಿನ ಬೇಗ ಬರಲಿ" ಎಂದು ಉದ್ಘಾಟಕರಾದ ಶ್ರೀ ಸಿದ್ಧಯ್ಯ ಪುರಾಣಿಕರು ಹಾರೈಸಿದರು.

ಕವಿಗೋಷ್ಠಿಯ ಅಧ್ಯಕ್ಷರಾದ ಶ್ರೀ ಸಿ. ಎಸ್. ಕಣವಿಯವರು ನವ್ಯ ಕಾವ್ಯ ಪರಂಪರೆಯನ್ನು ಕುರಿತು ಭಾಷಣ ಮಾಡುತ್ತಾ, ಈ ದಶಕದಲ್ಲಿಯ ಹಲವಾರು ಕವಿಗಳ ಕಾವ್ಯಗಳನ್ನು ಪರಾಮರ್ಶಿಸಿದರು. ಅವರು ಹಳೆಯ ಕಾವ್ಯಗಳಿಗಿಂತ ಹೆಚ್ಚಾಗಿ ಆಧುನಿಕ ನವ್ಯ ಕಾವ್ಯಗಳನ್ನೇ ತಮ್ಮ ಭಾಷಣದಲ್ಲಿ ಸುದೀರ್ಘವಾಗಿ ವಿವೇಚಿಸಿದರು. ಕವಿಗೋಷ್ಠಿಯಲ್ಲಿ ಮೂವತ್ತಕ್ಕೂ ಮೇಲಾಗಿ ಕವಿಗಳು ತಮ್ಮ ಕವನಗಳನ್ನು ಓದಿದರು. ಈ ಕವನ ವಾಚನ ಪ್ರೊ|| ತೀ. ನಂ. ಶ್ರೀಕಂಠಯ್ಯನವರಿಂದ ಆರಂಭವಾಯಿತು. ಗೋಷ್ಠಿಯಲ್ಲಿ ಸರ್ವಶ್ರೀ ಅಕಬರ ಅಲಿ, ದೇವೇಂದ್ರಕುಮಾರ ಹಕಾರಿ, ಕಯ್ಯಾರ ಕಿಂಞ್ಞಣ್ಣ ರೈ, ಹಿರಡ್ಡಿ ಗೋವಿಂದರಾವ್, ಪಂಚಾಕ್ಷರಿ ಹಿರೇಮಠ್, ಡಾ|| ಡಿ. ಎಸ್. ಕರ್ಕಿ, ಎಸ್. ಡಿ. ಇಂಚಲ, ಪಂಡರೀನಾಥಾಚಾರ್ಯ ಗಲಗಲಿ, ಬಸು ಪಟ್ಟರ, ಸಿದ್ಧರಾಜ್, ಚಂದ್ರಶೇಖರ ಪಾಟೀಲ್, ಸಂಗಮೇಶ ಹೊಸಮನಿ, ಬಿ. ವಿ. ಆರ್. ನರೇಗಲ್, ಕೆ. ಡಿ. ಕುರ್ತುಕೋಟಿ, ಎಸ್. ಎಂ. ಚಂದ್ರಶೇಖರಯ್ಯ, ಎಂ. ಎಸ್. ಮಹಂತಯ್ಯ, ಶ್ರೀನಿವಾಸ ಉಡುಪ, ಉಳವೀಶ್, ಶ್ರೀಮತಿ ಶಾರದಾ ಜಡೆ ಮೊದಲಾದವರು ಭಾಗವಹಿಸಿದ್ದರು.

ಮಧ್ಯಾಹ್ನ ೩ ಘಂಟೆಗೆ ವಿಷಯ ನಿರ್ಧಾರಕ ಮಂಡಲಿಯ ಸಭೆಸೇರಿ ಬಹಿರಂಗಾಧಿವೇಶನಕ್ಕೆ ಬಂದ ನಿರ್ಣಯಗಳನ್ನು ಪರಿಶೀಲಿಸಿ ಅಧಿವೇಶನದಲ್ಲಿ ಮಂಡಿಸ ಬಹುದಾದ ನಿರ್ಣಯಗಳ ಆಯ್ಕೆ ಮಾಡಿತು.

ಮಹಿಳಾಗೋಷ್ಠಿ

ಸಂಜೆ ೪ ಘಂಟೆಗೆ ಶ್ರೀಮತಿ ಸರಸ್ವತೀದೇವಿ ಗೌಡರ ಅಧ್ಯಕ್ಷತೆಯಲ್ಲಿ ಮಹಿಳಾಗೋಷ್ಠಿಯು ಪ್ರಾರಂಭವಾಯಿತು. ಶ್ರೀಮತಿ ಪಿ. ಎಂ. ಜೋಶಿಯವರು ಸ್ವಾಗತಭಾಷಣ ಮಾಡಿದರು. ರಾಜ್ಯದ ಗ್ರಾಮೋದ್ಯೋಗ ಶಾಖಾ ಉಪಮಂತ್ರಿ ಶ್ರೀಮತಿ ಲೀಲಾವತಿ ಮಾಗಡಿಯವರು ಗೋಷ್ಠಿಯನ್ನು ಪ್ರಾರಂಭಿಸುತ್ತಾ, ಎಲ್ಲ ಕ್ಷೇತ್ರಗಳಲ್ಲೂ ಸಮಗ್ರದೇಶದ ಉತ್ಕರ್ಷ ಸಾಧನೆಗೆ ಮಹಿಳೆಯರು ನಿಷ್ಠೆ ಮತ್ತು ಸೇವಾಭಾವನೆಯಿಂದ ದುಡಿಯಬೇಕೆಂದು ಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಸರಸ್ವತೀದೇವಿ ಗೌಡರು ಕನ್ನಡ ಸಾಹಿತ್ಯ ಕ್ಷೇತ್ರವು ನಾಡಿನ ಜೀವನದ ಪವಿತ್ರ ಸಂಕೇತವಾಗಿ ರೂಪುಗೊಳ್ಳಲು ಮಹಿಳೆಯರು ಶ್ರಮಿಸಬೇಕೆಂದು ನಾಡಿನ ಮಹಿಳೆಯರಿಗೆ ಕರೆಯಿತ್ತರು.

ಗೋಷ್ಠಿಯಲ್ಲಿ ಕೆಲವು ಜನ ಮಹಿಳೆಯರು ಭಾಷಣ ಮಾಡಿದರು. ಬೆಂಗಳೂರಿನ ಶ್ರೀಮತಿ ಕೆ. ಟಿ. ಬನ

ಶಂಕರಮ್ಮನವರು ಮಾತನಾಡಿ ನಾಡಿನ ಮಹಿಳೆಯರ ಮುನ್ನಡೆಯನ್ನು ವಿಸ್ತಾರವಾಗಿ ಬಣ್ಣಿಸಿದರು. "ಲೋಕದ ಜನರ ಕಣ್ಣೀರನ್ನು ಒರೆಸುವ ದಿವ್ಯಶಕ್ತಿ ಸ್ತ್ರೀ" ಎಂದು ಹೇಳಿ "ಹಿಂದೆ ಸ್ತ್ರೀಗೆ ಮನೆಯೇ ಜಗತ್ತಾಗಿತ್ತು, ಇಂದು ಆಕೆಗೆ ಜಗತ್ತೇ ಮನೆಯಾಗಿದೆ", ಎಂದು ಮುಂತಾಗಿ ಮನೋಜ್ಞವಾಗಿ ಮಾತನಾಡಿದರು. ಶ್ರೀಮತಿ ಎಚ್. ಜಯಶ್ರೀ ಅವರು ಭಾವಗೀತೆಗಳನ್ನು ಹಾಡಿದರು. ನಂತರ ಶ್ರೀಮತಿಯರಾದ ವನಿತಾಕುಲಕರ್ಣಿ, ಶಕುಂತಲಾ ಬಾಯಿ ಕುಲಕರ್ಣಿ, ಶಾರದಾಜಡೆ, ಚಂಪಾತಾಯಿ ಬೆಳವಡಿ, ಕುಮಾರಿ ಸದಾನಂದಿನಿ, ಲಕ್ಷ್ಮವ್ವ ಮೂಗನೂರ ಮುಂತಾದವರು ಸ್ತ್ರೀಯರ ಸ್ಥಾನಮಾನಗಳನ್ನು ಕುರಿತು ಭಾಷಣ ಮಾಡಿದರು.

ಸಂಶೋಧನಾ ಮತ್ತು ವಿಮರ್ಶಾಗೋಷ್ಠಿ

ಸಂಜೆ ೬-೩೦ ಘಂಟೆಗೆ ಲಿಂಗರಾಜ ಕಾಲೇಜಿನ ಪ್ರೊ|| ಎಸ್. ಎಸ್. ಭೂಸನೂರು ಮಠ ಅವರ ಅಧ್ಯಕ್ಷತೆಯಲ್ಲಿ ಈ ಗೋಷ್ಠಿಯು ಪ್ರಾರಂಭವಾಯಿತು. ಪ್ರಾರಂಭದಲ್ಲಿ ಬೆಂಗಳೂರಿನ ಶ್ರೀಮತಿ ಬಿ. ಜಿ. ಸುಶೀಲಮ್ಮ ಮತ್ತು ಶ್ರೀಮತಿ ಬಿ. ಜಿ. ಸರೋಜಮ್ಮ, ಇವರಿಂದ ಕಾವ್ಯವಾಚನವಾದ ಬಳಿಕ ಪ್ರೊ|| ಕೆ. ಡಿ. ಕುರ್ತಕೋಟಿಯವರು ಸ್ವಾಗತ ಭಾಷಣವನ್ನು ಮಾಡಿ ಅಧ್ಯಕ್ಷರ ಮತ್ತು ಉದ್ಘಾಟಕರ ಪರಿಚಯ ಮಾಡಿಕೊಟ್ಟರು. ನಂತರ ಕರ್ನಾಟಕ ವಿಶ್ವವಿದ್ಯಾನಿಲಯದ ಡಾ|| ಪಾಂಡುರಂಗರಾವ್ ದೇಸಾಯಿಯವರು ಗೋಷ್ಠಿಯನ್ನು ಪ್ರಾರಂಭಿಸುತ್ತಾ, "ಸಾಹಿತ್ಯ ವಿಮರ್ಶೆಯ ಉದಾತ್ತತತ್ವಗಳನ್ನು ಅಧಿಕಾರ ವಾಣಿಯಿಂದ ಸ್ಥಾಪಿಸುವ ಗ್ರಂಥಗಳು ನಮ್ಮಲ್ಲಿ ಇನ್ನೂ ಹುಟ್ಟಬೇಕಾಗಿವೆ. ಉತ್ತಮ ವಿಮರ್ಶಾ ಧುರೀಣರು ಬಹು ಸಂಖ್ಯೆಯಿಂದ ಮುಂದೆ ಬಂದು ಸಾಹಿತ್ಯ ಕೃತಿಗಳ ಗುಣಾವಗುಣಗಳನ್ನು ನಿರ್ಭಯವಾಗಿ ಸಮದೃಷ್ಟಿಯಿಂದ ಸಾರುವ ದಿನಗಳು ಇನ್ನೂ ಸಮೀಪಿಸಿಲ್ಲ" ಎಂದು ಹೇಳಿದರು. ಅಧ್ಯಕ್ಷ ಶ್ರೀ ಭೂಸನೂರು ಮಠರು ತಮ್ಮ ಸುದೀರ್ಘ ಮುದ್ರಿತ ಭಾಷಣವನ್ನು ಓದದೇ ನಾಲ್ಕು ಮಾತುಗಳನ್ನಾಡಿದರು. ಪ್ರಾಚೀನ ಶಾಸನ ಹಾಗೂ ಗ್ರಂಥಸಂಪತ್ತನ್ನು ನಾವು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಬೇಕೆಂದೂ ಅವುಗಳ ಬಗ್ಗೆ ಹೆಚ್ಚು ಸಂಶೋಧನೆ ಅಧ್ಯಯನ ನಡೆಯಬೇಕೆಂದೂ ಈ ವಿಷಯದ ಚರ್ಚೆ ಸಮ್ಮೇಳನದ ಒಂದು ದಿನ ಮಾತ್ರ ನಡೆದು ಮುಂದೆ ನಿಂತು ಬಿಡಬಾರದೆಂದೂ ಇಡೀ ವರ್ಷ ಈ ಕಾರ್ಯ ನಡೆಯಬೇಕೆಂದೂ ನುಡಿದರು.

ಅವರು ತಮ್ಮ ವಿದ್ವತ್ ಪೂರ್ಣ ಹಾಗೂ ವಿಚಾರಪ್ರಚೋದಕ ಭಾಷಣದಲ್ಲಿ ವಿಮರ್ಶೆ ಹಾಗೂ ಸಂಶೋಧನೆಯ ಸ್ವರೂಪ ಹಾಗೂ ಸಮಸ್ಯೆಗಳನ್ನು ವಿವರಿಸಿ, ವಿಮರ್ಶಕನು ಪಂಚಸೂತಕಗಳಿಂದ ಮುಕ್ತನಾಗಿರಬೇಕೆಂದು ಹೇಳಿದರು. ಗೋಷ್ಠಿಯಲ್ಲಿ ಭಾಗವಹಿಸಿದ ಪ್ರೊ|| ಬಿ. ಜಿ. ಕುಲಕರ್ಣಿಯವರು ವಿಮರ್ಶಕನು ಯಾವಾಗಲೂ ಅರ್ಥಗ್ರಹಣ, ರಸಗ್ರಹಣ, ಗುಣದೋಷನಿರ್ಣಯ, ಭಾಷಾಕರಣ ಮತ್ತು ಪ್ರತಿಪಾದನ ಎಂಬ ಪಂಚ ಸೂತ್ರಗಳನ್ನು ಪಾಲಿಸಬೇಕೆಂದು ಹೇಳಿದರು. ನಂತರ ಬೆಳಗಾವಿಯ ಪ್ರೊ|| ಪಿ. ಕೆ. ಬಾಗೋಜಿ, ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯ, ಶ್ರೀ ಭುಜೇಂದ್ರ ಮಹಿಷವಾಡಿ ಇವರು ಸಂಶೋಧನೆ ಹಾಗೂ ವಿಮರ್ಶೆಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ತರುವಾಯ ಶ್ರೀ ಆದ್ಯರಂಗಾಚಾರ್ಯರು (ಶ್ರೀರಂಗರು) ಮಾತನಾಡಿ ವಿಮರ್ಶೆ ಏಕೆ ಬೇಕು ಎಂದು ಪ್ರಶ್ನಿಸುತ್ತಾ, ಮನುಷ್ಯರ ಬೆಳವಣಿಗೆಗೆ ಆಹಾರವು ಹೇಗೆ ಅತ್ಯಾವಶ್ಯಕವೋ ಹಾಗೆ ಸಾಹಿತ್ಯದ ಬೆಳವಣಿಗೆಗೆ ವಿಮರ್ಶೆ ಅತ್ಯಗತ್ಯವೆಂದು ಹೇಳಿದರು. ಕೊನೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ ಭೂಸನೂರಮಠ ಅವರು ತಮ್ಮ ಸಮಾರೋಪ ಭಾಷಣದಲ್ಲಿ ವಿಮರ್ಶಕನು ಜಾತಿ, ಕಾಲ, ದೇಶ, ಭಾಷೆ, ಅವಿದ್ಯೆ ಎಂಬ ಪಂಚಸೂತಕಗಳನ್ನು ಮೀರಿದವನಾಗಿರಬೇಕು ಎಂದು ಹೇಳಿದರು. ಈ ಗೋಷ್ಠಿಯು ಅತ್ಯಂತ ಯಶಸ್ವಿಯಾಗಿ ನಡೆಯಿತಲ್ಲದೆ ಪಂಚಸೂತಕ ಹಾಗೂ ಪಂಚಸೂತ್ರಗಳೆಂಬ ಸಲಹೆಗಳು ಇದರಲ್ಲಿ ಪ್ರತಿಪಾದಿಸಲ್ಪಟ್ಟವು. ಈ ಎರಡೂ ಸಲಹೆಗಳು ಒಂದೇ ಕಾಲೇಜಿನ ಇಬ್ಬರು ಪ್ರಾಧ್ಯಾಪಕರಿಂದ ಬಂದದ್ದು ಗಮನಾರ್ಹವಾಗಿದೆ.

ರಾತ್ರಿ ೯-೩೦ ಘಂಟೆಯನಂತರ ನಾಟಕ, ನೃತ್ಯ, ಸಂಗೀತ ಮೊದಲಾದ ಮನರಂಜನೆಯ ಕಾರ್ಯಕ್ರಮಗಳು ನಡೆದವು.

ನಾಟಕಗೋಷ್ಠಿ

೨೯-೧೨-೧೯೬೧ ನೆಯ ಶುಕ್ರವಾರ ಬೆಳಗ್ಗೆ ೯-೩೦ ಘಂಟೆಗೆ ಬಿಜಾಪುರದ "ಸಂದರ್ಶನ" ಪತ್ರಿಕೆಯ ಸಂಪಾದಕರೂ ಮತ್ತು ಪರಿಷತ್ತಿನ ಕಾರ್ಯಸಮಿತಿಯ ಸದಸ್ಯರೂ ಆದ ಶ್ರೀ ವಿ. ಬಿ. ನಾಯಕರ ಅಧ್ಯಕ್ಷತೆಯಲ್ಲಿ ನಾಟಕಗೋಷ್ಠಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಶ್ರೀ ಬಾಳಪ್ಪ ಹುಕ್ಕೇರಿಯವರಿಂದ ಪ್ರಾರ್ಥನೆಯಾದನಂತರ ಶ್ರೀ ನಲವಡಿ ಶ್ರೀಕಂಠಶಾಸ್ತ್ರಿಗಳು ಸ್ವಾಗತ ಭಾಷಣ

ಮಾಡುತ್ತಾ ನಾಟಕವೆಂದರೆ ನೃತ್ಯ, ವಾದ್ಯ ಹಾಗೂ ಗೀತೆಗಳ ಸಂಕಲನವಾಗಿದೆಯೆಂದರು. ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ಅನ್ನದಾನಯ್ಯ ಪುರಾಣಿಕರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಆದ್ಯ ರಂಗಾಚಾರ್ಯರು ಗೋಷ್ಠಿಯನ್ನು ಪ್ರಾರಂಭಿಸುತ್ತಾ, 'ಸಾಹಿತ್ಯಕ್ಕೆ ಸಂಬಂಧಿಸಿದ ಸಾಹಿತ್ಯ ಪರಿಷತ್ತಿನವರು ನಾಟಕದ ಸಲುವಾಗಿ ಅವಕಾಶ ಕೊಟ್ಟದು ಸಂತೋಷವೆಂದು ಹೇಳಿದರು. "ಹೊರಗಿನ ಭಾಷೆಗಳಲ್ಲಿ ನಡೆದಿರುವ ರಂಗಭೂಮಿಯ ಚಟುವಟಿಕೆಗಳನ್ನು ನೋಡಿದರೆ ನಾವು ಇನ್ನೂ ಬಹಳ ಹಿಂದೆ ಉಳಿದಿದ್ದೇವೆ. ಇದು ಬಹಳ ವಿಷಾದಕರದ ಸಂಗತಿ.... ನಾಟಕದ ದುರವಸ್ಥೆಯನ್ನು ದೂರ ಮಾಡಲು ಶ್ರೇಷ್ಠ ಸಂಘಟನೆ ಅಗತ್ಯ. ಸಾಹಿತ್ಯ ಪರಿಷತ್ತಿನವರು ಈ ರೀತಿಯಲ್ಲಿ ಗೋಷ್ಠಿಯನ್ನು ಏರ್ಪಡಿಸಿದಂತೆ ನಾಟಕಕ್ಕಾಗಿ ಪ್ರತ್ಯೇಕ ಶಾಖೆಯೊಂದನ್ನು ಪ್ರಾರಂಭಿಸಬೇಕು. ಅಂದರೆ ನಾಟಕ ಕಲೆ ಕೆಲ ಮಟ್ಟಿಗಾದರೂ ಅಭಿವೃದ್ಧಿ ಹೊಂದಬಲ್ಲದು" ಎಂದು ಮೊದಲಾಗಿ ಹೇಳಿದರು. ಗೋಷ್ಠಿಯಲ್ಲಿ ಪ್ರೊ|| ಕೆ. ಡಿ. ಕುರ್ತುಕೋಟಿ, ಪ್ರೊ|| ಪಾಂಡುರಂಗಾಚಾರ್ಯ ವೈದ್ಯ, ಶ್ರೀಗಳಾದ ಎಂ. ಎಸ್. ಮಾಧವರಾವ್, ಆರ್. ಕೆ. ನಾಯಕ್, ಜೋರಾಪುರ ಗುರುರಾಯರು ಮತ್ತು ಗಂಗಾಧರ ಶಾಸ್ತ್ರಿಗಳು ಚಿತ್ತರಗಿ ಇವರೆಲ್ಲರೂ ಕನ್ನಡ ರಂಗಭೂಮಿಯ ಇಂದಿನ ಸಮಸ್ಯೆಗಳು ಇವುಗಳನ್ನು ಪರಿಹರಿಸುವ ಬಗೆಯನ್ನು ಕುರಿತು ಮನೋಜ್ಞವಾಗಿ ಮಾತನಾಡಿದರು. ಶ್ರೀ ಚಿತ್ತರಗಿ ಗಂಗಾಧರ ಶಾಸ್ತ್ರಿಗಳು ತಮ್ಮ ನಾಟಕ ಜೀವನದ ಕೆಲವು ಸಿಹಿ-ಕಹಿ ಅನುಭವಗಳನ್ನು ಸ್ವಾರಸ್ಯವಾಗಿ ವಿವರಿಸಿ ರಂಗಭೂಮಿಯ ಶ್ರೇಯಸ್ಸಿಗೆ ಕಾರಣರಾದ ನಾಟಕಕಾರ, ನಟ, ಕಂಪೆನಿಯ ಮಾಲೀಕ ಮತ್ತು ಪ್ರೇಕ್ಷಕರು— ಇವರಲ್ಲಿ ಪರಸ್ಪರ ಸಹಕಾರ ಸಂಘಟನೆಗಳು ಅಗತ್ಯವೆಂದು ಹೇಳಿದರು. ನಂತರ ಗಮಕಿ ಶ್ರೀ ಎಂ. ರಾಘವೇಂದ್ರ ರಾಯರಿಂದ ಕಾವ್ಯವಾಚನ ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಶ್ರೀ ವಿ. ಬಿ. ನಾಯಕರು ಮಾತನಾಡುತ್ತಾ "ನಮ್ಮ ಜೀವನವೇ ರಂಗಭೂಮಿ, ನಮ್ಮ ಅಂತರಂಗದಲ್ಲಿ ನಡೆಯುವ ಒಂದು ಆಂದೋಲನವೇ ನಾಟಕ" ಎಂದು ಹೇಳಿ ಈ ಚಿತ್ರಣವನ್ನು ಜನರ ಮುಂದಿಡುವುದೇ ನಾಟಕಕಾರನ ಕೆಲಸ ಎಂದು ಹೇಳಿದರು. ಸಾಹಿತಿಗಳು ಕ್ರಾಂತಿಕಾರರು, ಅವರು ಯಾರ ಭಿಡೆ ಮುರವತ್ತುಗಳಿಗೆ ಒಳಗಾಗರು. ನಾಟಕದ ಅಭಿವೃದ್ಧಿ ಸರಕಾರದ ಸಹಾಯವನ್ನು ಅವಲಂಬಿಸಕೂಡದು ಎಂದು ಮುಂತಾಗಿ ಹೇಳಿದರು. ಕಡೆಯಲ್ಲಿ ಶ್ರೀ ಕೆ. ಎಚ್. ಪಾಟೀಲರಿಂದ ವಂದನಾರ್ಪಣೆಯಾಯಿತು.

ಬಹಿರಂಗಾಧಿವೇಶನ

ಸಾಯಂಕಾಲ ನಡೆಯಬೇಕಾಗಿದ್ದ ಬಹಿರಂಗಾಧಿವೇಶನವು ಕೆಲವು ಕಾರಣಗಳಿಂದ ಮಧ್ಯಾಹ್ನ ೧೨ ಘಂಟೆಗೆ ಪ್ರಾರಂಭವಾಯಿತು. ನಾಡು, ಭಾಷೆ, ಸಾಹಿತ್ಯ ಹಾಗೂ ಕಲೆಗಳಿಗೆ ಸಂಬಂಧಿಸಿದ ಮಹತ್ವಪೂರ್ಣ ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದವು. (ಸ್ವೀಕೃತವಾದ ನಿರ್ಣಯಗಳು ಇದೇ ಸಂಚಿಕೆಯಲ್ಲಿ ಬೇರೆಡೆ ಪ್ರಕಟವಾಗಿವೆ.) ನಂತರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪರಿಷತ್ತಿನ ಪರವಾಗಿ ಸಮ್ಮೇಳನಾಧ್ಯಕ್ಷರಿಗೂ, ಉದ್ಘಾಟಕರಿಗೂ, ಗೋಷ್ಠಿಗಳ ಅಧ್ಯಕ್ಷರುಗಳಿಗೂ, ಅವುಗಳಲ್ಲಿ ಭಾಗವಹಿಸಿದವರಿಗೂ, ಸ್ವಾಗತ ಸಮಿತಿಯವರಿಗೂ, ಸಮ್ಮೇಳನದ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ "ನಮ್ಮ ಭಾಷೆಯ ಮಟ್ಟವನ್ನು ಮತ್ತು ಸಾಹಿತ್ಯವನ್ನು ವಿಮರ್ಶಕವಾಗಿ ಚರ್ಚಿಸಲು ಪ್ರತಿವರ್ಷ ಇಲ್ಲಿ ಸೇರುತ್ತೇವೆ. ಈ ಎಲ್ಲ ಕಾರ್ಯಕ್ರಮದಲ್ಲಿ ಹೆಣ್ಣುಮಕ್ಕಳು ಭಾಗವಹಿಸಬೇಕು" ಎಂದು ಹೇಳಿ ಕಳೆದ ಮೂರು ದಿನಗಳಿಂದ ನಡೆದ ಕಾರ್ಯಕ್ರಮಗಳ ಸಿಂಹಾವಲೋಕನ ಮಾಡಿದರು.

೪೪ನೆಯ ಸಮ್ಮೇಳನಕ್ಕೆ ಆಮಂತ್ರಣ

೪೪ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಕನ್ನಡ ಸಾಹಿತ್ಯ ಪರಿಷತ್ತಿಗೆ ಬೆಂಗಳೂರು, ಶಿರಸಿ, ಸಾಗರ, ಮತ್ತು ತುಮಕೂರುಗಳಿಂದ ಆಮಂತ್ರಣಗಳು ಬಂದಿವೆಯೆಂದು ಪರಿಷತ್ತಿನ ಕಾರ್ಯದರ್ಶಿ ಶ್ರೀ ಅನ್ನದಾನಯ್ಯ ಪುರಾಣಿಕರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಮುಂದೆ ಪರಿಷತ್ತಿನ ಕಾರ್ಯಸಮಿತಿಯವರು ನಿರ್ಣಯ ಮಾಡುವರೆಂದೂ ಶ್ರೀ ಪುರಾಣಿಕರು ಹೇಳಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಎಚ್. ಪಾಟೀಲರು ಸಮಿತಿಯ ಪರವಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನೂ ಮಹಾಜನಗಳನ್ನೂ ಇತರ ಪ್ರಮುಖ ಸಾಹಿತಿವರ್ಗದವರನ್ನೂ ಅಭಿನಂದಿಸಿ ಸಮ್ಮೇಳನದ ಹಿನ್ನೆಲೆಯನ್ನು ವಿವರಿಸಿ ಹೇಳಿದರು. ಸಮ್ಮೇಳನಾಧ್ಯಕ್ಷರಾದ ಪ್ರೊ|| ಕೆ. ಜಿ. ಕುಂದಣಗಾರರು ಸಮಯೋಚಿತವಾಗಿ ಮಾತನಾಡಿ "ಕಳೆದ ಮೂರು ದಿನಗಳಿಂದ ನಡೆದ

ಕಾರ್ಯ ಕಲಾಪಗಳು ಯಶಸ್ವಿಯಾಗಿ ಜರುಗಿವೆ. ಕನ್ನಡಿಗರು ಆದರಾತಿಥ್ಯಕ್ಕೆ ಹೆಸರಾಗಿದ್ದಾರೆ. ಅದರಂತೆ ಹೀಗೆಯೇ ಎಲ್ಲರೂ ನಡೆಯಬೇಕು" ಎಂದು ಹೇಳಿ ಕಳೆದ ಮೂರು ದಿನಗಳಿಂದ ನಡೆದ ೪೩ನೆಯ ಸಾಹಿತ್ಯ ಸಮ್ಮೇಳನವನ್ನು ಮುಕ್ತಾಯಗೊಳಿಸಿದರು. ಅನಂತರ ಪರಿಷತ್ತಿನ ಪರವಾಗಿ ಕಾರ್ಯದರ್ಶಿಗಳಾದ ಡಾ|| ಕೆ. ಎಂ. ಕೃಷ್ಣರಾಯರು ಮತ್ತು ಸ್ವಾಗತ ಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ. ಎಸ್. ಪಾಟೀಲರು ಎಲ್ಲರನ್ನೂ ವಂದಿಸಿದರು. ಶ್ರೀ ಬಾಳಪ್ಪ ಹುಕ್ಕೇರಿಯವರ ರಾಷ್ಟ್ರಗೀತೆಯೊಂದಿಗೆ ಸಭಾಕಾರ್ಯವು ಯಶಸ್ವಿಯಾಗಿ ಮಧ್ಯಾಹ್ನ ೨ ಘಂಟೆಗೆ ಮುಕ್ತಾಯಗೊಂಡಿತು.

(ಅ. ಪು.)

ಬಿ. ಎಂ. ಶ್ರೀ ಗ್ರಂಥಾಲಯ ಬೆಂಗಳೂರು-19

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳು

ಮಾರಾಟಕ್ಕೆ ಸಿದ್ಧವಾಗಿವೆ.

೧. ಕನ್ನಡದ ಬಾವುಟ	(ಐದನೆಯ ಮುದ್ರಣ)	....	೨-೦೦
೨. ಸೀತಾಪರಿತ್ಯಾಗ	(ಜೈಮಿನಿ ಭಾರತದಿಂದ)	....	೦-೬೫
೩. ಸೋಮೇಶ್ವರ ಶತಕ	(ಮೂರನೆಯ ಮುದ್ರಣ)	....	೧-೫೦
೪. ಆಧುನಿಕ ಗದ್ಯ ಸಾಹಿತ್ಯ	(ಎರಡನೆಯ ಮುದ್ರಣ)	....	೨-೫೦
೫. ಗಮಕ ಕಾವ್ಯ ಮಂಜರಿ	(ಎರಡನೆಯ ಮುದ್ರಣ)	....	೧-೦೦
೬. ಕನ್ನಡದ ಅತ್ಯುತ್ತಮ ಸಣ್ಣ ಕತೆಗಳು	(ಮೂರನೆಯ ಸಂಪುಟ)	....	೪-೦೦
೭. ಕಾದಂಬರಿ ಸಾಮಾನ್ಯ ಮನುಷ್ಯ		....	೧-೦೦
೮. ಮೂರು ಸ್ಪರ್ಧಾ ನಾಟಕಗಳು		....	೨-೭೫
೯. ಕರ್ಣಾಟಕ ಕವಿ ಚರಿತೆ (ಭಾಗ: ೧)	(ಪರಿಶೋಧಿತ ಮುದ್ರಣ)	....	೧೨-೦೦
,, ಲೈಬ್ರರಿ ಪ್ರತಿ		....	೧೫-೦೦

ವಿ. ಸೂ :— ಪುಸ್ತಕ ವ್ಯಾಪಾರಿಗಳಿಗೆ ಕರ್ಣಾಟಕ ಕವಿಚರಿತೆಗೆ ಶೇ. ೧೫ ರಂತೆಯೂ, ಉಳಿದ ಪುಸ್ತಕಗಳಿಗೆ ಶೇ. ೨೫ ರಂತೆಯೂ ರಿಯಾಯಿತಿ (ಕಮಿಷನ್) ಕೊಡಲಾಗುವುದು.

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೪೩ನೆಯ ಸಾಹಿತ್ಯ ಸಮ್ಮೇಳನದಲ್ಲಾದ ನಿರ್ಣಯಗಳು

[೧೯೬೧ನೇ ಡಿಶೆಂಬರ್ ದಿನಾಂಕ ೨೯ರಂದು ನಡೆದ ಗದಗು ಸಾಹಿತ್ಯ ಸಮ್ಮೇಳನದ ಬಹಿರಂಗಾಧಿವೇಶನದಲ್ಲಿ ಅಂಗೀಕಾರವಾದ ನಿರ್ಣಯಗಳಿವು.]

ಸಂತಾಪ ಸೂಚನೆ

೧. ಪರಿಷತ್ತಿನ ಸದಸ್ಯರೂ ಹಿತಚಿಂತಕರೂ ಆದ ಈ ಕೆಳಗೆ ಕಾಣಿಸಿರುವ ಮಹನೀಯರು ದೈವಾಧೀನರಾದುದಕ್ಕಾಗಿ ಈ ಸಮ್ಮೇಳನವು ದುಃಖವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಸಂಬಂಧಿಕರಿಗೆ ತನ್ನ ಅನುತಾಪವನ್ನು ಸೂಚಿಸುತ್ತದೆ.

ಸರ್ವಶ್ರೀ

೧. ಆಸ್ಥಾನವಿದ್ವಾನ್ ಬೆಳ್ಳಾವೆ ನರಹರಿಶಾಸ್ತ್ರಿಗಳು
೨. ಆಸ್ಥಾನವಿದ್ವಾನ್ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಗಳು.
೩. ಕೆ. ಎಸ್. ಗಂಗಾಧರ ಅವರು
೪. ಬೆಂಗಳೂರಿನ ಸರ್ಪಭೂಷಣ ಮಠದ ಶ್ರೀ ಮಹದೇವ ಸ್ವಾಮಿಗಳು.
೫. ಡಾ|| ಯು. ಕೃಷ್ಣರಾಯರು, ಮದ್ರಾಸು
೬. ಪಂಡಿತ ಗೋವಿಂದವಲ್ಲಭ ಪಂತರು
೭. ನಟಭಯಂಕರ ಗಂಗಾಧರರಾಯರು
೮. ಸಂಗೀತರತ್ನ ಕೆ. ವಾಸುದೇವಾಚಾರ್ಯರು
೯. ಡಾ|| ಎಂ. ವಿ. ಗೋವಿಂದಸ್ವಾಮಿಯವರು
೧೦. ಸಿ. ಸೂರ್ಯನಾರಾಯಣರಾಯರು
೧೧. ಆದವಾನಿ ಎಲೆ ಮಲ್ಲೇಶಪ್ಪನವರು
೧೨. ತಿರುಮಲಾಚಾರ್ಯರು, ಹೊಸಪೇಟೆ.
೧೩. ಶ್ರೀಮತಿ ಪದ್ಮಾವತಿದೇವಿ ಅಂಗಡಿ

ಸಮ್ಮೇಳನಾಧ್ಯಕ್ಷರಿಂದ.

ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಸ್ಥಾನ

೨. ಮೈಸೂರು ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಗಳಲ್ಲಿ ಪಿ.ಯು.ಸಿ., ಬಿ.ಎ., ಬಿ.ಎಸ್.ಸಿ., ಮತ್ತು ಬಿ.ಕಾಮ್. ಡಿಗ್ರಿ ತರಗತಿಗಳ ಪಠ್ಯ ವಿಷಯಗಳನ್ನು ಸಮಾನರೂಪಕ್ಕೆ ತರಲು ನಡೆಸುತ್ತಿರುವ ಏರ್ಪಾಡಿನಲ್ಲಿ ಆರ್ಟ್ಸ್, ಮತ್ತು ಸಾಯಿನ್ಸ್ ವಿಭಾಗಗಳಲ್ಲಿ ಪ್ರಾದೇಶಿಕ ಭಾಷೆಗಳ ಅಂದರೆ ಮುಖ್ಯವಾಗಿ ಕನ್ನಡದ ಸ್ಥಾನ-ಮಾನಗಳು ಕುಗ್ಗದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಪಿ.ಯು.ಸಿ., ಮತ್ತು ಡಿಗ್ರಿ ತರಗತಿಗಳ ವ್ಯಾಸಂಗದ ಎರಡನೆಯ ಭಾಗದಲ್ಲಿ ಕನ್ನಡದ ಸ್ಥಾನವು ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇರುವಷ್ಟು ಮಟ್ಟಿಗಾದರೂ ಎರಡೂ ವಿಶ್ವವಿದ್ಯಾನಿಲಯಗಳಲ್ಲೂ ಇರಬೇಕೆಂದೂ, ಆರ್ಟ್ಸ್ ಮತ್ತು ಸಾಯಿನ್ಸ್ ವಿಭಾಗಗಳಲ್ಲಿ ಯಾವ ವಿಷಯದಲ್ಲೂ ಭೇದವನ್ನು ಮಾಡಕೂಡದೆಂದೂ ಕನ್ನಡದ ಸ್ಥಾನವನ್ನು ಕುಗ್ಗಿಸುವ ಯಾವ ಪ್ರಯತ್ನವನ್ನೂ ಈ ಎರಡೂ ವಿಶ್ವವಿದ್ಯಾನಿಲಯಗಳಲ್ಲಿ ಸರ್ವಥಾ ಕೈಗೊಳ್ಳಬಾರದೆಂದೂ ಈ ಸಮ್ಮೇಳನವು ಸೂಚಿಸುತ್ತದೆ.

ಸಮ್ಮೇಳನಾಧ್ಯಕ್ಷರಿಂದ.

೩. ಕರ್ಣಾಟಕ ವಿಶ್ವವಿದ್ಯಾನಿಲಯದಲ್ಲಿ ಈಗಿನ ಪದ್ಧತಿಯಂತೆ ಒಬ್ಬ ವಿದ್ಯಾರ್ಥಿ ಎಸ್. ಎಸ್. ಸಿ. ಪರೀಕ್ಷೆಗೆ ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ಅಭ್ಯಾಸ ಮಾಡಿ ಆ ಬಳಿಕ ಮುಂದಿನ ಪರೀಕ್ಷೆಗಳಿಗೆ ಅದನ್ನು ಬದಲಾಯಿಸುವ ಅವಕಾಶವಿರುವದರಿಂದ, ಕನ್ನಡದ ಸ್ಥಾನಮಾನಗಳಿಗೆ ಕುಂದುಂಟಾಗಿದೆ. ಇದನ್ನು ತಪ್ಪಿಸಿ ಒಮ್ಮೆ ಕನ್ನಡವನ್ನು ತೆಗೆದುಕೊಂಡವರು ಮುಂದೆಯೂ ಅದನ್ನು ಮುಂದುವರಿಸಲೇಬೇಕೆಂಬ ನಿಯಮವನ್ನು ಏರ್ಪಡಿಸುವದು ಅಗತ್ಯವೆಂದೂ, ಡಿಗ್ರಿ ತರಗತಿಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಮೂರು ವರ್ಷಗಳೂ ವ್ಯಾಸಂಗ ಮಾಡುವದರೊಂದಿಗೆ, ಕನ್ನಡವನ್ನೂ ಅಭ್ಯಾಸ ಮಾಡುವಂತೆ ಏರ್ಪಡಿಸಬೇಕೆಂದೂ, ಬಿ.ಕಾಮ್ ಡಿಗ್ರಿ ಪರೀಕ್ಷೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ನಿಬಂಧನೆಯಂತೆ ಕನ್ನಡಕ್ಕೆ ಸ್ಥಾನವನ್ನು ಕಲ್ಪಿಸಬೇಕೆಂದೂ ಈ ಸಮ್ಮೇಳನವು ವಿಶ್ವವಿದ್ಯಾನಿಲಯದವರನ್ನು ಒತ್ತಾಯಪಡಿಸುತ್ತದೆ.

ಸಮ್ಮೇಳನಾಧ್ಯಕ್ಷರಿಂದ.

ಸರ್ಕಾರಕ್ಕೆ ಅಭಿನಂದನೆ

೪. ಕನ್ನಡ ಸಾಹಿತ್ಯ ಪರಿಷತ್ತು ಹಲವಾರು ವರ್ಷಗಳಿಂದ ಅತಿಶ್ರಮಪಟ್ಟು ಸಿದ್ಧಗೊಳಿಸುತ್ತಿರುವ ಕನ್ನಡ-ಕನ್ನಡ ನಿಘಂಟು ಮುದ್ರಣದ ಬಗೆಗೆ ಮೈಸೂರು ಸರಕಾರದವರು ಪರಿಷತ್ತಿನ ಕೂಡ ಯೋಗ್ಯ ಒಪ್ಪಂದವನ್ನು ಮಾಡಿಕೊಂಡು ಕನ್ನಡ ನಿಘಂಟು ಬೇಗನೆ ಹೊರಬರಲು ಅವಕಾಶವನ್ನು ಕಲ್ಪಿಸಿರುವುದಕ್ಕಾಗಿ ಮೈಸೂರು ಸರಕಾರವನ್ನು ಈ ಸಮ್ಮೇಳನವು ಅಂತಃಕರಣಪೂರ್ವಕವಾಗಿ ಅಭಿನಂದಿಸುತ್ತದೆ.

ಸಮ್ಮೇಳನಾಧ್ಯಕ್ಷರಿಂದ.

ಗೋವಾ ವಿಮೋಚನೆ

೫. ಭೌಗೋಲಿಕ ಮತ್ತು ಐತಿಹಾಸಿಕ ಹಾಗೂ ಆಡಳಿತಗಳ ಸೌಕರ್ಯದೃಷ್ಟಿಯಿಂದ ಕರ್ನಾಟಕದ ಒಂದು ಭಾಗವೇ ಎನಿಸಿರುವ ಗೋವಾ ಪ್ರಾಂತ್ಯವನ್ನು, ೪೫೦ ವರ್ಷಗಳ ಪಾರತಂತ್ರ್ಯದಿಂದ ರಾಷ್ಟ್ರನಾಯಕರು ತಮ್ಮ ಮುತ್ಸದ್ದಿತನದಿಂದ ಮತ್ತು ಭಾರತೀಯ ಸೈನಿಕರ ಸಾಹಸ ಪರಾಕ್ರಮಗಳಿಂದ ವಿಮೋಚನೆಗೊಳಿಸಿದ್ದಕ್ಕಾಗಿ ಈ ಸಮ್ಮೇಳನವು ಭಾರತ ಸರಕಾರವನ್ನು ವಿಶೇಷವಾಗಿ ಮಹಾಪ್ರಧಾನಿ ಪಂಡಿತ ನೆಹರೂ ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ.

ಇದೇ ಸಂದರ್ಭದಲ್ಲಿ ಗೋಮಾಂತಕ ವಿಮೋಚನೆಯ ಆಂದೋಲನದಲ್ಲಿ ಭಾಗವಹಿಸಿ ಅನೇಕ ಕಷ್ಟನಷ್ಟಗಳನ್ನು ಸಹಿಸಿ ತಮ್ಮ ಸ್ವಾಭಿಮಾನ ದೇಶಾಭಿಮಾನಗಳ ಜ್ಯೋತಿಯನ್ನು ಪ್ರಕಾಶಮಯವಾಗಿಟ್ಟುಕೊಂಡ ತ್ಯಾಗವೀರ ಗೋಮಾಂತಕೀಯರನ್ನೂ ಹಾಗೂ ಭಾರತೀಯ ಸೈನಿಕರನ್ನೂ ಅಂತಃಕರಣಪೂರ್ವಕವಾಗಿ ಅಭಿನಂದಿಸುತ್ತದೆ.

ಸೂಚಕರು: ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು.
ಅನುಮೋದಕರು: (೧) ಶ್ರೀ ಕೆ. ಎಚ್. ಪಾಟೀಲರು.
(೨) ಶ್ರೀ ಶರಣಯ್ಯನವರು, ಮುಹಗಾವ.
(೩) ಶ್ರೀಮತಿ ಲಕ್ಷ್ಮವ್ವ, ಮೂಗನೂರು.

ರಾಜ್ಯದ ಹೆಸರು 'ಕರ್ನಾಟಕ'ವಾಗಲಿ

೬. ಕನ್ನಡ ನುಡಿಯನ್ನಾಡುವ ಪ್ರದೇಶವೆಲ್ಲಾ ಒಂದೇ ಆಡಳಿತಕ್ಕೆ ಒಳಪಟ್ಟು "ಏಕೀಕೃತ ಕರ್ನಾಟಕ" ರಾಜ್ಯವಾಗಬೇಕೆಂದೇ ಅನೇಕ ವರ್ಷಗಳಿಂದ ಕನ್ನಡಿಗರು ದುಡಿದು, ತಮ್ಮದೇ ಆದ ರಾಜ್ಯವನ್ನು ಪಡೆದಿದ್ದರೂ, ಎಲ್ಲ ಕನ್ನಡಿಗರ ಆಕಾಂಕ್ಷೆಗಳಿಗೆ ಅನುಗುಣವಾಗುವಂತಹ ಹಾಗೂ ಭೌಗೋಳಿಕ, ಚಾರಿತ್ರಿಕ ಸಂಪ್ರದಾಯ ಪರಂಪರೆಗಳಲ್ಲಿಯ ಸತ್ವಯುಕ್ತವಾದ ಅಂಶಗಳಿಗೆ ಪೋಷಕವಾಗುವ 'ಕರ್ನಾಟಕ' ಎಂಬ ಹೆಸರನ್ನು ರಾಜ್ಯಕ್ಕೆ ಇಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳೇ ಮೊದಲಾದ ಸಂಸ್ಥೆಗಳು ಒಕ್ಕೊರಲಿನಿಂದ ಕೇಳಿಕೊಳ್ಳುತ್ತಿದ್ದರೂ, ಮೈಸೂರು ರಾಜ್ಯ ಸರಕಾರವು ಕನ್ನಡಿಗರ ಈ ಜೀವಾಳದ ಬೇಡಿಕೆಯನ್ನು ಇದುವರೆಗೆ ಮನ್ನಿಸದಿದ್ದುದು ಅತ್ಯಂತ ಅಸಮಾಧಾನವನ್ನುಂಟುಮಾಡಿದೆ. ಈ ವಿಷಯದಲ್ಲಿ ಕಂಡುಬರುತ್ತಿರುವ ವಿಲಂಬ ಧೋರಣದಿಂದ ಕನ್ನಡಿಗರಲ್ಲಿ ಅಸಂತೋಷವು ಹೆಚ್ಚುತ್ತಿದೆ. ಇದನ್ನು ರಾಜ್ಯ ಸರಕಾರವು ಬೇಗ ಗಮನಿಸಿ ರಾಜ್ಯದ ಹೆಸರನ್ನು 'ಕರ್ನಾಟಕ'ವೆಂದು ಸಾರಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

ಸೂಚಕರು: ಶ್ರೀ ವ್ಹಿ. ಬಿ. ನಾಯಕರು.
ಅನುಮೋದಕರು: ಶ್ರೀ ರಾ. ಗು. ಜೋಶಿಯವರು.
ಬೆಂಬಲಿಗರು: (೧) ಶ್ರೀ ಎಚ್. ನಂಜುಂಡಯ್ಯನವರು.
(೨) ಶ್ರೀಮತಿ ಕೆ. ಟಿ. ಬನಶಂಕರಮ್ಮನವರು.
(೩) ಶ್ರೀ ಶ್ರೀನಿವಾಸ ಉಡುಪ ಅವರು.
(೪) ಶ್ರೀ ನ. ವೇದವ್ಯಾಸ ಅವರು.

ಕನ್ನಡ ಅಧಿಕೃತ ಭಾಷೆ ಆಗಲಿ

೭. ಭಾರತದ ರಾಜ್ಯಾಂಗಕ್ಕೆ ಅನುಗುಣವಾಗಿ ಅಧಿಕೃತ ರಾಷ್ಟ್ರಭಾಷೆಗಳೆಂದು ಪರಿಗಣಿಸಲ್ಪಟ್ಟಿರುವ ಹದಿನಾಲ್ಕು ಭಾಷೆಗಳಲ್ಲಿ ಒಂದಾದ ಹಾಗು ಎರಡು ಕೋಟಿಗಿಂತಲೂ ಹೆಚ್ಚಾದ ಜನತೆಗೆ ತಾಯ್ನುಡಿಯಾದ ಸುಮಾರು ಎರಡು ಸಾವಿರ ವರ್ಷಗಳಿಂದ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಹೊಯ್ಸಳ, ವಿಜಯನಗರ, ಕಾಕತೀಯ, ಮೈಸೂರು, ಕೆಳದಿ ಮೊದಲಾದ ರಾಜ್ಯ-ಸಾಮ್ರಾಜ್ಯಗಳ ಆಡಳಿತ ಭಾಷೆಯೆನಿಸಿಕೊಂಡಿರುವ ಕನ್ನಡವನ್ನು ಮೈಸೂರು ಸರಕಾರವು ಅಧಿಕೃತ ರಾಜ್ಯಭಾಷೆಯೆಂದು ಕೂಡಲೇ ಘೋಷಿಸಬೇಕೆಂದೂ ರಾಜ್ಯದ ಎಲ್ಲ ಆಡಳಿತ ವ್ಯವಹಾರವನ್ನು ಕನ್ನಡದಲ್ಲಿಯೇ ಮಾಡಲು ಒಡನೆಯೇ ಆರಂಭಿಸಬೇಕೆಂದೂ ಬಳ್ಳಾರಿ, ಬೀದರ, ಮಣಿಪಾಲ, ಸಮ್ಮೇಳನಗಳಲ್ಲಿ ಅಂಗೀಕೃತವಾದ ನಿರ್ಣಯಗಳನ್ನು ದೃಢೀಕರಿಸಿ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯೆಂದು ಕೂಡಲೇ ಘೋಷಿಸ

ಬೇಕೆಂದು ರಾಜ್ಯ ಸರ್ಕಾರವನ್ನು ಈ ಸಮ್ಮೇಳನವು ಆಗ್ರಹಪಡಿಸುತ್ತದೆ.

ಸೂಚಕರು: ಶ್ರೀ ಆದ್ಯ ರಂಗಾಚಾರ್ಯರು.

ಅನುಮೋದಕರು: (೧) ಶ್ರೀ ವೀರಪ್ಪ ಕೌತಾಳ ಅವರು.
(೨) ಕುಮಾರಿ ಪಿ. ಎವರ್. ಜೋಶಿ ಅವರು.

ಗ್ರಂಥಾಲಯಗಳ ಸ್ಥಾಪನೆ

೮. ಕನ್ನಡ ಸಾಹಿತ್ಯಾಭಿವೃದ್ಧಿಯ ದೃಷ್ಟಿಯಿಂದಲೂ ಜನಸಾಮಾನ್ಯರ ಸಾಮಾಜಿಕ, ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದಲೂ ನಮ್ಮ ರಾಜ್ಯದ ಮುಖ್ಯ ಸ್ಥಳಗಳಲ್ಲಿ ಸುಸಜ್ಜಿತವಾದ ಗ್ರಂಥಾಲಯಗಳನ್ನು ಸ್ಥಾಪಿಸುವುದು, ಇಂಥ ಗ್ರಂಥಾಲಯಗಳ ಕಟ್ಟಡ ಹಾಗೂ ಗ್ರಂಥಗಳ ಬಗ್ಗೆ ತಗಲುವ ವೆಚ್ಚದಲ್ಲಿ ಕನಿಷ್ಟ ೨/೩ ಭಾಗದಷ್ಟು ಸಹಾಯ ಧನವನ್ನು ಕೊಡಬೇಕೆಂದೂ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಮತ್ತು ೧೯೬೭ನೆಯ ಸಾಲಿನ ಬಡ್ಜೆಟ್ಟಿನಲ್ಲಿಯೂ (ಮುಂಗಡಪತ್ರ) ಇದಕ್ಕಾಗಿ ಸೂಕ್ತ ಹಣ ಒದಗಿಸಬೇಕೆಂದೂ ಈ ಸಮ್ಮೇಳನವು ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಪ್ರಾರ್ಥಿಸುತ್ತದೆ.

ಸೂಚಕರು: ಶ್ರೀ ಕೆ. ಎಚ್. ಪಾಟೀಲರು.

ಅನುಮೋದಕರು: ಶ್ರೀ ವ್ಹಿ. ಬಿ. ನಾಯಕರು.

ಗಡಿ ಪ್ರದೇಶಗಳ ಸಮಸ್ಯೆ

೯. ಕರ್ನಾಟಕದ ಗಡಿಗಳೆನಿಸಿರುವ ಕಾಸರಗೋಡು, ತಾಳವಾಡಿ, ಹೊಸೂರು, ಮಡಕಶಿರಾ, ಆದವಾನಿ, ಆಲೂರು, ಅಕ್ಕಲಕೋಟೆ, ಜತ್ತ, ಸೊಲ್ಲಾಪುರ, ಮೊದಲಾದ ಕನ್ನಡ ಭಾಗಗಳನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳುವ ಬಗೆಗೆ ನಮ್ಮ ಸರಕಾರದವರು ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹಲವಾರು ಬಾರಿ ಸಮ್ಮೇಳನದಲ್ಲಿ ನಿರ್ಣಯಗಳಾಗಿದ್ದರೂ ಸರಕಾರದವರು ಅವುಗಳೆಡೆಗೆ ಲಕ್ಷ್ಯ ಕೊಡದಿದ್ದುದನ್ನು ಕಂಡು ಕನ್ನಡ ಜನತೆಗೆ ಅತೀವ ಸಂತಾಪವುಂಟಾಗಿದೆ. ಈಗಲಾದರೂ ಸರಕಾರದವರು ಈ ವಿಷಯವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಆದಷ್ಟು ಬೇಗ ಈ ಸಮಸ್ಯೆಯನ್ನು ಬಿಡಿಸಬೇಕೆಂದು ಈ ಸಮ್ಮೇಳನವು ಆಗ್ರಹಪೂರ್ವಕವಾಗಿ ಒತ್ತಾಯಪಡಿಸುತ್ತದೆ.

ಸೂಚಕರು: ಶ್ರೀ ಕಯ್ಯಾರ ಕಿಞ್ಞಣ್ಣರೈ ಅವರು.

ಅನುಮೋದಕರು: (೧) ಶ್ರೀ ಎಸ್. ಎಂ. ವೃಷಭೇಂದ್ರಸ್ವಾಮಿ ಅವರು.
(೨) ಶ್ರೀ ಶಂಕರಶೆಟ್ಟರು ಪಾಟೀಲ, ಕಲಬುರ್ಗಿ ಅವರು.
(೩) ಶ್ರೀ ಎಂ. ಎಂ. ಕಲಬುರ್ಗಿ ಅವರು.

ಸಾಹಿತ್ಯ ಪರೀಕ್ಷೆಗಳಿಗೆ ಮನ್ನಣೆ

೧೦. ಕನ್ನಡ ಸಾಹಿತ್ಯ ಪರಿಷತ್ತು ಬಹುದಿನಗಳಿಂದಲೂ ನಡಸುತ್ತ ಬಂದಿರುವ ಕನ್ನಡ 'ಜಾಣ' ಹಾಗೂ 'ಕಾವ' ಪರೀಕ್ಷೆಗಳನ್ನು ಹಿಂದಿನ ಹೈದರಾಬಾದು ಸರ್ಕಾರವು ಮಾನ್ಯತೆಯನ್ನಿತ್ತಿದ್ದುದನ್ನು ಮೈಸೂರು ರಾಜ್ಯ ಸರ್ಕಾರವು ಮನ್ನಿಸಿ ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಜಾರಿಯಲ್ಲಿ ತಂದಿತ್ತು. ಆದರೆ ಸರ್ಕಾರವು ಇತ್ತೀಚೆಗೆ ತಾನಿತ್ತ ಮನ್ನಣೆಯನ್ನು ವಾಪಸ್ಸು ತೆಗೆದುಕೊಂಡಿದ್ದುದು ವಿಷಾದದ ಸಂಗತಿಯಾಗಿದೆ. ಸರ್ಕಾರದ ಈ ಕ್ರಮವು ಅಕಾಲಿಕವೂ ನ್ಯಾಯಬಾಹಿರವೂ ಆಗಿದೆ ಎಂದು ಈ ಸಮ್ಮೇಳನವು ಅಭಿಪ್ರಾಯ ಪಡುತ್ತದೆ. ಹಿಂದೆ ನೀಡಿದ ಮನ್ನಣೆಯನ್ನು ಪುನಃ ಕೂಡಲೇ ಜಾರಿಗೆ ತರಬೇಕೆಂದು ಈ ಸಮ್ಮೇಳನವು ರಾಜ್ಯಸರ್ಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು: ಶ್ರೀ ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು.

ಅನುಮೋದಕರು: (೧) ಶ್ರೀ ಸಿ. ಎಸ್. ಪಾಟೀಲ ಅವರು.
(೨) ಶ್ರೀ ವೇದವ್ಯಾಸರಾವ್‌ನವಲಿ ಅವರು.

ಸಾಹಿತಿಗಳಿಗೆ ಸಹಾಯ

೧೧. ಕನ್ನಡ ಸಾಹಿತ್ಯ ರಂಗದಲ್ಲಿ ಸಾಹಿತಿಗಳಿಗೆ ಹಣದ ಕೊರತೆಯಿಂದ ತಾವು ರಚಿಸಿರುವ ಉತ್ಕೃಷ್ಟಕೃತಿಗಳನ್ನು ಪ್ರಕಟಿಸಿ ಜನತೆಗೆ ಒದಗಿಸಲು ಸಾಧ್ಯವಾಗದಿರುವುದು ಶೋಚನೀಯ ಸಂಗತಿಯಾಗಿದೆ. ಇಂತಹ ಸಾಹಿತಿಗಳಿಗೆ ಯೋಗ್ಯ ಧನ ಸಹಾಯ—ಸಾಲ ಮತ್ತು ಸಹಾಯ ಧನ ಒದಗಿಸಲು ಒಕ್ಕಲುತನಾಭಿವೃದ್ಧಿ ಸಂಸ್ಥೆಗಳ ಮಾದರಿಯಲ್ಲಿ ಸಹಕಾರಿ ಸಂಸ್ಕೃತಿಕ ಅಭಿವೃದ್ಧಿ ಸಂಘಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ಒಂದು ಯೋಜನೆಯನ್ನು ಕೂಡಲೇ ಸಿದ್ಧಪಡಿಸಬೇಕೆಂದು ಈ ಸಮ್ಮೇಳನವು ಕೇಂದ್ರ ಮತ್ತು ರಾಜ್ಯಸರಕಾರಗಳನ್ನು ಒತ್ತಾಯಪಡಿಸುತ್ತದೆ.

ಸೂಚಕರು: ಶ್ರೀ ಕೆ. ಎಚ್. ಪಾಟೀಲರು.

ಅನುಮೋದಕರು: ಶ್ರೀ ಎಚ್. ಎಸ್. ರೇಣುಕಪ್ರಸಾದ್ ಅವರು.

ಪಠ್ಯ ಪುಸ್ತಕಗಳ ರಾಷ್ಟ್ರೀಕರಣಕ್ಕೆ ವಿರೋಧ

೧೨. ಭಾವೈಕ್ಯತೆಯ ದೃಷ್ಟಿಯಿಂದ ಭಾರತದ

ಎಲ್ಲಾ ರಾಜ್ಯಗಳಲ್ಲಿ ಒಂದೇ ರೂಪದ ಪಠ್ಯಪುಸ್ತಕಗಳನ್ನು ಒಂದು ಭಾಷೆಯಲ್ಲಿ ಮೊದಲು ಸಿದ್ಧಪಡಿಸಿ ಅವುಗಳನ್ನು ರಾಷ್ಟ್ರದ ಇತರ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಬೇಕೆಂಬ ಕೇಂದ್ರದ ಪಠ್ಯಪುಸ್ತಕಗಳ ರಾಷ್ಟ್ರೀಕರಣ ನೀತಿಯನ್ನು ಈ ಸಮ್ಮೇಳನವು ವಿರೋಧಿಸುತ್ತದೆ. ಈ ನೀತಿಯು ಅವ್ಯವಹಾರಿಕವೂ, ಅಕಾಲಿಕವೂ, ಅನವಶ್ಯಕವೂ ಆಗಿದೆ ಎಂದು ಅಭಿಪ್ರಾಯಪಡುತ್ತದೆ.

ಸೂಚಕರು: ಶ್ರೀ ಅನ್ನದಾನಯ್ಯ ಪುರಾಣಿಕ ಅವರು.
ಅನುಮೋದಕರು: ಶ್ರೀ ಎಂ. ವಾಸುದೇವಮೂರ್ತಿ ಅವರು.

ಕನ್ನಡ ತಾಳೆಯೋಲೆಯ ಭಂಡಾರ

೧೩. ಮದ್ರಾಸ್ ಸರಕಾರವು ತನ್ನ ಆಧಿಪತ್ಯದಲ್ಲಿದ್ದ ಕನ್ನಡ ತಾಳೆಯೋಲೆಯ ಗ್ರಂಥ ಭಂಡಾರವನ್ನು ಮೈಸೂರು ಸರಕಾರಕ್ಕೆ ಸ್ಥಳಾಂತರಿಸಿ ಕೊಟ್ಟಂತೆ ಆಂಧ್ರ, ಮಹಾರಾಷ್ಟ್ರ, ಹಾಗೂ ಬಿಹಾರ ಸರಕಾರಗಳು ತಮ್ಮ ಆಡಳಿತಕ್ಕೊಳಪಟ್ಟ ಕನ್ನಡ ಪ್ರಾಚೀನ ಗ್ರಂಥ ಭಂಡಾರವನ್ನು, ಇತರ ಕನ್ನಡ ಐತಿಹಾಸಿಕ ಸ್ಮಾರಕಗಳನ್ನು ಕೊಡಬೇಕೆಂದು ಈ ಸಮ್ಮೇಳನವು ಬಿನ್ನವಿಸುತ್ತದೆ. ರಾಜ್ಯ ಸರಕಾರವು ಈ ದೆಸೆಯಲ್ಲಿ ಆವಶ್ಯಕ ಕ್ರಮ ಕೈಕೊಳ್ಳಬೇಕೆಂದು ಸೂಚಿಸುತ್ತದೆ.

ಸೂಚಕರು: ಡಾ॥ ಆರ್. ಸಿ. ಹಿರೇಮಠ
ಅನುಮೋದಕರು: ಡಾ॥ ಎಮ್. ಎಸ್. ಸುಂಕಾಪೂರ.

ಕನ್ನಡಿಗರಿಗೆ ಪ್ರಾತಿನಿಧ್ಯತೆ

೧೪. ಕರ್ನಾಟಕ ರಾಜ್ಯದಲ್ಲಿರುವ ಅಂಚೆ, ತಂತಿ ಮತ್ತು ರೇಲ್ವೆ ಇಲಾಖೆಗಳಲ್ಲಿ ಮತ್ತು ಕೇಂದ್ರದ ಆಡಳಿತಕ್ಕೆ ಒಳಪಟ್ಟ ಕಾರ್ಖಾನೆಗಳಲ್ಲಿಯೂ ಕನ್ನಡಿಗರಿಗೆ ಪ್ರಾತಿನಿಧ್ಯವಿಲ್ಲದಿರುವುದು ದುಃಖದ ಸಂಗತಿಯಾಗಿದೆ. ಕಾರಣ ಕನ್ನಡಿಗರಿಗೆ ಸಾಕಷ್ಟು ಪ್ರಾತಿನಿಧ್ಯ ನೀಡಬೇಕೆಂದು ಕೇಂದ್ರ ಸರಕಾರವನ್ನು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು: ಶ್ರೀ ಎಮ್. ಎಸ್. ಅನಂತಪದ್ಮನಾಭರಾಯರು.
ಅನುಮೋದಕರು: ಶ್ರೀ ಎಚ್. ನಂಜುಂಡಯ್ಯನವರು.

ಲೈಬ್ರರಿ ಕಾನೂನು

೧೫. ಹಿಂದಿನ ಹೈದರಾಬಾದ್ ರಾಜ್ಯದಲ್ಲಿ ರಚಿತವಾದ "ಲಾಯಬ್ರರಿ ಆ್ಯಕ್ಟ" ಈಗ ಮೈಸೂರು ರಾಜ್ಯಕ್ಕೆ ಸೇರಿದ ಹಿಂದಿನ ಹೈದರಾಬಾದ್ ಕನ್ನಡ ಭಾಗದಲ್ಲಿ ಪ್ರಚಲಿತವಿದ್ದು, ಈ ಶಾಸನದಂತೆ ಜಿಲ್ಲೆಗಳಲ್ಲಿ ಹಿಂದೆ ರಚಿತವಾದ "ಲಾಯಬ್ರರಿ" ಅಥಾರಿಟಿಗಳನ್ನು ಸರಕಾರವು ಪುನರ್ರಚಿಸಿ, ಕೂಡಲೇ ಅವು ಕಾರ್ಯಗತವಾಗುವಂತೆ ಮಾಡಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು: ಶ್ರೀ ರಾ. ಗು. ಜೋಶಿಯವರು.
ಅನುಮೋದಕರು: ಶ್ರೀ ಗಣೇಶ ಜೋಶಿಯವರು.

ಕನ್ನಡದಲ್ಲಿ ಹೆಚ್ಚು ಗುಣ ಪಡೆದವರಿಗೆ ಪ್ರಾಶಸ್ತ್ಯ

೧೬. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕ ಶಿಕ್ಷಕಿಯರನ್ನು ನೇಮಿಸುವಾಗ್ಗೆ ಪಿ. ಎಸ್. ಸಿ. ಟ್ರೇಂಡ ಪರೀಕ್ಷೆ ಪಾಸಾದವರಿಗೇ ಮೊದಲು ಪ್ರಾಶಸ್ತ್ಯ ಕೊಡಬೇಕೆಂದೂ ಎಸ್. ಎಸ್. ಸಿ. ಪರೀಕ್ಷೆಯಾದವರನ್ನು ಶಿಕ್ಷಕ ಶಿಕ್ಷಕಿಯರನ್ನಾಗಿ ನೇಮಿಸಿಕೊಳ್ಳುವುದಾದರೆ ಕನ್ನಡ ಭಾಷಾ ವಿಷಯದಲ್ಲಿ ಹೆಚ್ಚು ಗುಣಗಳನ್ನು ಪಡೆದವರಿಗೇ ಪ್ರಾಶಸ್ತ್ಯವನ್ನು ಕೊಡಬೇಕೆಂದೂ ಈ ಸಮ್ಮೇಳನವು ಸಂಬಂಧಿಸಿದ ಅಧಿಕಾರಿಗಳನ್ನೂ ಸರಕಾರವನ್ನೂ ಒತ್ತಾಯಪಡಿಸುತ್ತದೆ.

ಸೂಚಕರು: ಶ್ರೀ ಸಿ. ಎಸ್. ಪಾಟೀಲರು.
ಅನುಮೋದಕರು: ಶ್ರೀ ಕೆ. ಸಿ. ಟೆಂಗಿನಕಾಯಿಯವರು

ಚಲಚಿತ್ರೋದ್ಯಮಕ್ಕೆ ಪ್ರೋತ್ಸಾಹ

೧೭. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಅಭಿವೃದ್ಧಿಯಲ್ಲಿ ಚಲಚ್ಚಿತ್ರೋದ್ಯಮಕ್ಕೆ ಇರುವ ಮಹತಿಯನ್ನು ಈ ಸಮ್ಮೇಳನವು ಚೆನ್ನಾಗಿ ಗಮನಿಸಿದೆ. ಅದಕ್ಕಾಗಿ ಕನ್ನಡ ನಾಡಿನಲ್ಲಿ ಒಂದು ಸುಸಜ್ಜಿತ ಸ್ಟುಡಿಯೋವನ್ನು ನಿರ್ಮಿಸಬೇಕೆಂದೂ ಕನ್ನಡ ಚಿತ್ರಗಳನ್ನು ರಾಜ್ಯದಲ್ಲಿಯ ಸಿನೇಮಾ ಗೃಹಗಳು ಕಡ್ಡಾಯವಾಗಿ ನಿರ್ದಿಷ್ಟ ಕಾಲ ಪ್ರದರ್ಶಿಸುವಂತೆ ಅವುಗಳ ಸಂಚಾಲಕರಿಗೆ ಆದೇಶವನ್ನೀಯಲು ರಾಜ್ಯಸರಕಾರವು ಅವಶ್ಯಕವಾದ ಕ್ರಮಗಳನ್ನು ಕೈಕೊಳ್ಳಬೇಕೆಂದೂ ಈ ಸಮ್ಮೇಳನವು ರಾಜ್ಯ ಸರಕಾರವನ್ನು ಕೇಳಿಕೊಳ್ಳುತ್ತದೆ.

ಸೂಚಕರು: ಶ್ರೀ ಎಚ್. ಎಸ್. ರೇಣುಕಪ್ರಸಾದ್ ಅವರು
ಅನುಮೋದಕರು: ಶ್ರೀ ಎಂ. ಎಂ. ಪಾಟೀಲ ಅವರು

ಪ್ರಾಚ್ಯ ಸಂಶೋಧನೆ ಇಲಾಖೆಗೆ ಕರೆ

೧೮. ಕೇಂದ್ರ ಪ್ರಾಚ್ಯ ಸಂಶೋಧನೆಯ ಇಲಾಖೆಯ ಆಡಳಿತದಲ್ಲಿ ಕರ್ನಾಟಕ ಭಾಗಗಳ ಪ್ರಾಚೀನ ಅವಶೇಷಗಳು ಮತ್ತು ಪ್ರವಾಸಿ ಕೇಂದ್ರಗಳಿಗೆ ಸಾಕಷ್ಟು

ಗಮನವಿತ್ತಿಲ್ಲವೆಂಬುದನ್ನು ಮನಗಂಡು ಈ ವಿಚಾರದಲ್ಲಿ ಹೆಚ್ಚು ಆಸಕ್ತಿಯನ್ನು ಆ ಇಲಾಖೆ ತೋರಿಸಬೇಕೆಂದು ಈ ಸಮ್ಮೇಳನವು ಒತ್ತಾಯ ಪೂರ್ವಕವಾಗಿ ಸೂಚಿಸುತ್ತದೆ.

ಸೂಚಕರು: ಡಾ|| ಆರ್. ಸಿ. ಹಿರೇಮಠ ಅವರು
ಅನುಮೋದಕರು: ಡಾ|| ಎಂ. ಎಸ್. ಸುಂಕಾಪೂರ ಅವರು

ಕನ್ನಡ ಉದ್ಯೋಗಸ್ಥರಿಗೆ ಅವಕಾಶ

೧೯. ಹೊರನಾಡಿನಲ್ಲಿ ಸರ್ಕಾರಿ ಉದ್ಯೋಗದಲ್ಲಿರುವ ಕನ್ನಡಿಗರು ತಮ್ಮ ತವರು ನಾಡಿಗೆ ಬರಲಿಚ್ಛಿಸಿದಲ್ಲಿ, ಹಾಗೂ ಅಲ್ಲಿ ಜಾಗೆಗಳು ತೆರವಿದ್ದಲ್ಲಿ, ಮೈಸೂರು ಸರ್ಕಾರ ಅವರನ್ನು ಬರಲವಕಾಶವಾಗುವಂತಹ ಅವಕಾಶವನ್ನು ಒದಗಿಸಿಕೊಡಬೇಕೆಂದು ಈ ಸಮ್ಮೇಳನ ಕೇಳಿಕೊಳ್ಳುತ್ತದೆ.

ಸೂಚಕರು: ಶ್ರೀ ವ್ಹಿ. ಬಿ. ನಾಯಕರು.
ಅನುಮೋದಕರು: ಶ್ರೀ ಸಿ. ಎಸ್. ಪಾಟೀಲ ಅವರು.

ವಿಕೃತ ಪ್ರಕಟನೆಗಳ ನಿಯಂತ್ರಣ

೨೦. ಇತ್ತೀಚೆಗೆ ಪ್ರಕಟವಾಗುತ್ತಿರುವ ಹಲಕೆಲವು ಗ್ರಂಥಗಳಿಂದ ಜನತೆಯ ಮೇಲೆ ವಿಕೃತ ಪರಿಣಾಮವುಂಟಾಗುತ್ತಿರುವದನ್ನು ಈ ಸಮ್ಮೇಳನವು ವಿಷಾದದಿಂದ ಗಮನಿಸುತ್ತದೆ. ಇಂಥ ಪ್ರಕಟಣೆ ಪ್ರದರ್ಶನಗಳನ್ನು ನಿಯಂತ್ರಣಗೊಳಿಸಲು ಕನ್ನಡ ಸಾಹಿತ್ಯ ಪರಿಷತ್ತಿನವರು, ಸಾಹಿತಿಗಳು, ವಿಮರ್ಶಕರೊಡನೆ ದೀರ್ಘಾಲೋಚನೆ ನಡೆಯಿಸಿ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಈ ಸಮ್ಮೇಳನವು ನಿರ್ಣಯಿಸುತ್ತದೆ.

ಸೂಚಕರು: ಶ್ರೀ ಕುಮಾರಿ ಪಿ. ಎಮ್. ಜೋಶಿ ಅವರು
ಅನುಮೋದಕರು: ಶ್ರೀ ಕೆ. ಎಚ್. ಪಾಟೀಲ ಅವರು

ಮಹಿಳಾ ಸಾಹಿತಿಗಳಿಗೆ ಪ್ರಾತಿನಿಧ್ಯತೆ

೨೧. ಕೇಂದ್ರ ಸಾಹಿತ್ಯ ಅಕ್ಯಾಡೆಮಿಯಲ್ಲಿಯೂ, ಪಾರಿತೋಷಕ ಪರಿಶೀಲನಾ ಸಮಿತಿಯಲ್ಲಿಯೂ ಹಾಗೂ ಆಕಾಶವಾಣಿಯ ಸಲಹಾ ಸಮಿತಿಗಳಲ್ಲಿಯೂ ಮಹಿಳಾ ಸಾಹಿತಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯುವಂತೆ ಮಾಡುವುದು ನ್ಯಾಯಸಮ್ಮತವೂ ಸೂಕ್ತವೂ ಆಗಿದೆಯೆಂದು ಈ ಸಭೆಯು ಅಭಿಪ್ರಾಯ ಪಡುತ್ತಲ್ಲದೆ, ಆ ಬಗ್ಗೆ ತೀವ್ರ ಕ್ರಮ ಕೈಕೊಳ್ಳಲು ಸಮ್ಬಂಧಿಸಿದವರನ್ನು ಬಿನ್ನವಿಸುತ್ತದೆ.

ಸೂಚಕ: ಶ್ರೀ ಕುಮಾರಿ ಪಿ. ಎಂ. ಜೋಶಿ ಅವರು
ಅನುಮೋದಕರು: ಶ್ರೀಮತಿ ಲಕ್ಷ್ಮವ್ವ ಮೂಗನೂರು.

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು -೧೮

ಅನ್ನದಾನಯ್ಯ ಪುರಾಣಿಕ
ಕೆ. ಎಂ. ಕೃಷ್ಣರಾವ್.
ಗೌ|| ಕಾರ್ಯದರ್ಶಿಗಳು

ಶಾಲೆಗಳಿಗೆ 'ಕನ್ನಡ ನುಡಿ' ತರಿಸಿಕೊಳ್ಳಲು ಸೂಚನೆ.

'ಕನ್ನಡ ನುಡಿ'ಯನ್ನು ರಾಜ್ಯದ ಎಲ್ಲ ಮಾಧ್ಯಮಿಕ, ಪ್ರೌಢ ಮತ್ತು ತರಪೇತು ಶಾಲೆಗಳ ವಾಚನಾಲಯಗಳಿಗೆ ಆಯಾ ಶಾಲೆಯ ಪುಸ್ತಕ ಭಂಡಾರ ಮತ್ತು ವಾಚನಾಲಯ ಹಣದಿಂದ ತರಿಸಿಕೊಳ್ಳಬಹುದೆಂದು ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳು ತಮ್ಮ **ಟಿ. ೩, ೪೨೫೭-೧೬೮/೫೭-೫೮, ತಾ|| ೨೮-೮-೧೯೫೮** ರ ನಿರೂಪದ ರೀತ್ಯಾ ಸೂಚಿಸಿದ್ದಾರೆ. ಈ ವಿಚಾರವನ್ನು ಎಲ್ಲ ಶಾಲಾಧಿಕಾರಿಗಳ ಗಮನಕ್ಕೆ ತಂದು, ನಿರೂಪದಂತೆ 'ನುಡಿ'ಯನ್ನು ತರಿಸಿಕೊಳ್ಳಬೇಕೆಂದು ಕೋರಲಾಗಿದೆ.

ವಾರ್ಷಿಕ ಚಂದಾ ರೂ. ೬ **ಸಂಪಾದಕ.**

2434

ಹೊಸದಿಲ್ಲಿ ಮತ್ತು ಮದ್ರಾಸ್ ಕರ್ಣಾಟಕ ಸಂಘಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರಿಂದ.

ಸ್ವತಂತ್ರ ಭಾರತದ ರಾಜಕೀಯ ವ್ಯವಸ್ಥೆಯ ಪರಿಣಾಮವಾಗಿ ಕನ್ನಡ ಜನರು ಇಂದು ಭಾರತದ ಇತರ ಕಡೆಗಳಲ್ಲಿಯೂ ವಾಸಿಸಬೇಕಾದ ಪರಿಸ್ಥಿತಿ ಪ್ರಾಪ್ತವಾಗಿದೆ. ಭಾರತದ ಪ್ರಮುಖ ಪಟ್ಟಣಗಳಾದ ಹೊಸದಿಲ್ಲಿ, ಮುಂಬಯಿ, ಮದ್ರಾಸ್, ಕಲ್ಕತ್ತ, ಹೈದ್ರಾಬಾದ್, ಭೂಪಾಲ್, ನಾಗಪುರ, ಗ್ವಾಲಿಯರ್, ವಾರಣಾಸಿ, ಹರಿದ್ವಾರ, ಪ್ರಯಾಗ, ಅಹಮದಾಬಾದ್, ಪುಣೆ, ಭಿಲಾಯಿ, ತಿರುಚನಾಪಲ್ಲಿ ಮೊದಲಾದ ಕಡೆಗಳಲ್ಲಿ ಕನ್ನಡ ಜನರು ತಕ್ಕಷ್ಟು ಪ್ರಮಾಣದಿಂದ ವಾಸಿಸುತ್ತಿದ್ದಾರೆ. ಹೀಗೆ ಹೊರನಾಡಿನಲ್ಲಿ ವಾಸಿಸುತ್ತಿರುವ ಜನರು ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ರಕ್ಷಣೆಗಾಗಿ 'ಕರ್ಣಾಟಕ ಸಂಘ' ಮತ್ತು 'ಕನ್ನಡ ' ಸಂಘ 'ಗಳನ್ನು ಸ್ಥಾಪಿಸಿಕೊಂಡು ಚಟುವಟಿಕೆಗಳನ್ನು ನಡೆಸುತ್ತಿರುವುದು ಗಮನಾರ್ಹವಾಗಿದೆ.

ಹೀಗೆ ಹೊರನಾಡಿನಲ್ಲಿರುವ ಕನ್ನಡ ಬಂಧುಗಳು ಹಲವಾರು ವರ್ಷಗಳಿಂದ ವರ್ಷಕ್ಕೊಮ್ಮೆ ಭಾರತದ ಯಾವುದಾದರೊಂದು ನಗರದಲ್ಲಿ ಹೊರನಾಡು ಕನ್ನಡಿಗರ ಸಮ್ಮೇಳನವನ್ನು ನಡೆಸುತ್ತಿರುವುದು ಶ್ಲಾಘ್ಯವೆನಿಸಿದೆ. ಕಳೆದ ತಿಂಗಳು ನಾನು ದಿಲ್ಲಿಗೆ ಹೋಗಿದ್ದಾಗ ಅಲ್ಲಿನ ಕನ್ನಡ ಬಂಧುಗಳು ಕರ್ಣಾಟಕ ಸಂಘದ ಆಶ್ರಯದಲ್ಲಿ ಕನ್ನಡ ಮಕ್ಕಳ ಸೌಕರ್ಯಕ್ಕಾಗಿ ಕನ್ನಡ ದ್ವಿತೀಯ ಭಾಷೆಯಾಗಿ ಉಳ್ಳ ಒಂದು ಪ್ರೌಢಶಾಲೆಯನ್ನು ನಡೆಸುತ್ತಿರುವುದನ್ನು ಕಣ್ಣಾರ ನೋಡಿ ಬಂದಿದ್ದೇನೆ. ಸುಮಾರು ೧,೫೦,೦೦೦ ರೂ.ಗಳ ವೆಚ್ಚದಲ್ಲಿ ಅಲ್ಲಿ ಒಂದು ಕಟ್ಟಡ ತಯಾರಾಗಿದೆ. ಸುಮಾರು ೫,೦೦,೦೦೦ ರೂ.ಗಳ ವೆಚ್ಚದಲ್ಲಿ ಅಲ್ಲಿ ಇನ್ನೂ ಹಲವಾರು ಚಟುವಟಿಕೆಗಳನ್ನು ಕೈಗೊಂಡಿರುತ್ತಾರೆ. ರಾಜ್ಯಸಭೆಯ ಉಪಾಧ್ಯಕ್ಷರಾದ ಮಾನ್ಯ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರ ನೇತೃತ್ವದಲ್ಲಿ ಈ ಸಂಘವು ಉತ್ಸಾಹದಿಂದ ಕೆಲಸ ಮಾಡುತ್ತಿದೆ. ಶ್ರೀ ಸಿ. ಕೆ. ತಿರುಮಲೇಶಭಟ್ಟರು ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿ, ಶ್ರೀ ಬಿ. ಎನ್. ದಾತಾರ್, ಶ್ರೀ ಡಿ. ಪಿ. ಕರಮರಕರ್ ಮೊದಲಾದವರೂ, ಲೋಕಸಭಾ ಸದಸ್ಯರಾದ ಶ್ರೀ ಸಿ. ಆರ್. ಬಸಪ್ಪ, ಶ್ರೀ ಎಚ್. ಸಿದ್ಧನಂಜಪ್ಪ, ಶ್ರೀ ಎನ್. ಕೇಶವಯ್ಯಂಗಾರ್, ಶ್ರೀ ಬಿ. ಪಿ. ಬಸಪ್ಪ ಶೆಟ್ಟಿ, ಶ್ರೀ ಎಚ್. ಸಿ. ದಾಸಪ್ಪ ಮೊದಲಾದವರೂ ಈ ಸಂಘದ ಬಗೆಗೆ ತಕ್ಕಷ್ಟು ಆಸಕ್ತಿ ವಹಿಸಿರುವುದು ಮೆಚ್ಚತಕ್ಕ ವಿಷಯವಾಗಿದೆ. ಗ್ರಂಥಕರ್ತೃಗಳೆನಿಸಿರುವ ಶ್ರೀಮತಿ ಉಮಾರಾವ್ ಎಂಬ ಸೋದರಿಯೊಬ್ಬರು ದಿಲ್ಲಿ ಕರ್ಣಾಟಕ ಸಂಘದ ಕಾರ್ಯದರ್ಶಿನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆಂಬುದು ಹೆಮ್ಮೆಯ ವಿಷಯ. ಈ ದಿಲ್ಲಿ ಕರ್ಣಾಟಕ ಸಂಘಕ್ಕೆ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರು ೫೦,೦೦೦ ರೂ.ಗಳ ಉದಾರ ಸಹಾಯವಿತ್ತಿದ್ದಾರೆಂದು ಕೇಳಿ ಹರ್ಷಿಸದವರಾರು?

ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರ ಪ್ರಯತ್ನದ ಫಲವಾಗಿಯೇ ಹರಿದ್ವಾರದಲ್ಲಿ ಕೂಡ ಒಂದು ಕರ್ಣಾಟಕ ಸಂಘ ಸ್ಥಾಪನೆಯಾಗಿದೆ ಎಂಬುದು ಸಂತೋಷದ ಸಂಗತಿಯಾಗಿದೆ. ಭಾರತದ ರಾಜಧಾನಿಯೆನಿಸಿ, ಲೋಕಸಭೆ, ರಾಜ್ಯಸಭೆಗಳ ನೆಲಮನೆಯೆನಿಸಿ, ಪುರಾಣ ಪ್ರಸಿದ್ಧವೆನಿಸಿರುವ ದಿಲ್ಲಿ ನಗರದಲ್ಲಿ ಈ ರೀತಿ ಕನ್ನಡ ಸಂಸ್ಕೃತಿಯ ರಕ್ಷಣೆಗಾಗಿ ಪ್ರಯತ್ನಿಸುತ್ತಿರುವವರೆಲ್ಲರೂ ವಂದನಾರ್ಹರಾಗಿದ್ದಾರೆ.

ದಕ್ಷಿಣ ಭಾರತದ ಪ್ರಮುಖ ಪಟ್ಟಣವಾದ ಮದ್ರಾಸಿನಲ್ಲಿ ಒಂದು ಕರ್ಣಾಟಕ ಸಂಘವಿದ್ದು ತನ್ನದೇ ಆದ ಒಂದು ಹಿರಿಯ ಸಭಾನಿಲಯವನ್ನು ಹೊಂದಿದೆಯಲ್ಲದೆ ಒಂದು ಪುಸ್ತಕಾಲಯವನ್ನು ಕೂಡ ನಡೆಸುತ್ತಿದೆ ಎಂಬುದು ಹೆಮ್ಮೆಯ ಸಂಗತಿ. ದಿವಂಗತರಾದ ಡಾ|| ಯು. ರಾಮರಾಯರು, ಡಾ|| ಯು. ಕೃಷ್ಣರಾಯರು, ವಿ. ಎನ್. ಕುಡ್ವರವರು ಈ ಸಂಘದ ಉನ್ನತಿಗಾಗಿ ಶ್ರಮಿಸಿದ್ದಾರೆ. ಈಗ ಪ್ರೊ|| ಎಂ. ಮರಿಯಪ್ಪ ಭಟ್, ಪ್ರೊ|| ಜಿ. ಆರ್. ಭಟ್ ಮೊದಲಾದವರು ಈ ಸಂಘದ ಏಳಿಗೆಗಾಗಿ ಶ್ರಮಿಸು

ತ್ತಿದ್ದಾರೆ. ಮದ್ರಾಸಿನ ಹಬೀಬುಲ್ಲಾ ರಸ್ತೆಯಲ್ಲಿ ಈ ಕರ್ನಾಟಕ ಸಂಘದ ಕಟ್ಟಡವು ಕಂಗೊಳಿಸುತ್ತಿದೆ.

ಮದ್ರಾಸಿನ ಉಪನಗರವಾದ ಅಯನಾವರಂನಲ್ಲಿ ಒಂದು 'ಕನ್ನಡ ಸಂಘ'ವಿದೆ. ಮೈಸೂರಿನಿಂದ ಕೆಲಸಕ್ಕೆ ಹೋದ ಕನ್ನಡ ಜನ ಅಲ್ಲಿ ಈ ಸಂಘವನ್ನು ಸ್ಥಾಪಿಸಿದ್ದಾರೆ. ಒಂದು ಪುಟ್ಟ ಪುಸ್ತಕಾಲಯ ಹಾಗೂ ವಾಚನಾಲಯಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಪ್ರೊ|| ಎಂ. ಮರಿಯಪ್ಪಭಟ್ಟರು ಈ ಸಂಘಕ್ಕೆ ಅಧ್ಯಕ್ಷರಾಗಿದ್ದಾರೆ. ಶ್ರೀ ಸಿ. ರುಕ್ಮಾಂಗದಾಚಾರ್ಯರು, ಶ್ರೀ ಐ. ವಿ. ರಘುನಾಥರಾಯರು ಮೊದಲಾದವರು ಈ ಸಂಘದ ಕೆಲಸವನ್ನು ಉತ್ಸಾಹದಿಂದ ಮಾಡುತ್ತಿದ್ದಾರೆ. ಈ ಸಂಘದಲ್ಲಿ ಕನ್ನಡ ಕಲಾವಿದರು ಕೆಲವರಿದ್ದು ಕನ್ನಡ ಕವಿಗಳನೇಕರ ಚಿತ್ರ ಬರೆದಿಟ್ಟಿರುವುದು ಗಮನಾರ್ಹವಾಗಿದೆ. ಪ್ರೊ|| ಎಂ. ಮರಿಯಪ್ಪಭಟ್ಟರು ಈ ಕನ್ನಡ ಸಂಘಕ್ಕೆ ತಾಯಿಬೇರಿನಂತಿದ್ದು ಸಂಘವನ್ನು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇಲ್ಲಿ ಒಂದು ಕನ್ನಡ ಶಾಲೆ ನಡೆಸಬೇಕೆಂದು ಪ್ರಯತ್ನ ನಡೆಸಿದ್ದಾರೆ. ಇದನ್ನೆಲ್ಲಾ ನಾನು ಮೊನ್ನೆ ತಾನೇ ಕಣ್ಣಾರ ನೋಡಿಕೊಂಡು ಬಂದಿದ್ದೇನೆ. ಈ ರೀತಿಯಾಗಿ ಹೊಸದಿಲ್ಲಿ, ಮದ್ರಾಸ್ ಮೊದಲಾದ ಕಡೆಗಳಲ್ಲಿ ನಡೆಯುತ್ತಿರುವ ಕರ್ನಾಟಕ ಸಂಘಗಳು ಮಾಡುತ್ತಿರುವ ಕಾರ್ಯಗಳು ಶ್ಲಾಘನೀಯವೆನಿಸಿವೆ.

ಕನ್ನಡ ನಾಡ ನುಡಿಗಳ ಹಿತದೃಷ್ಟಿಯಿಂದ ಹೈದ್ರಾಬಾದಿನಲ್ಲಿ ಒಂದು ಕನ್ನಡ ಸಾಹಿತ್ಯ ಮಂದಿರವಿದ್ದು ಅವರೂ ಕೂಡ ಪ್ರೊ|| ಡಿ. ಕೆ. ಭೀಮಸೇನರಾಯರ ನೇತೃತ್ವದಲ್ಲಿ ಡಾ|| ಮೇಲುಕೋಟೆಯವರ ಪ್ರೋತ್ಸಾಹದಿಂದ ನಾಡಹಬ್ಬ ಮೊದಲಾದುವನ್ನು ಆಚರಿಸುತ್ತಿದ್ದು ಕನ್ನಡದ ಧ್ವಜವನ್ನು ಎತ್ತಿ ಹಿಡಿದಿದ್ದಾರೆ. ಕರ್ನಾಟಕಕ್ಕೆ ಅತಿಸಮೀಪದಲ್ಲಿರುವ ಈ ಮಹಾನಗರದಲ್ಲಿ ಕೂಡ ಕನ್ನಡದ ರಕ್ಷಣೆ ಅಗತ್ಯವಾಗಿದೆ. ಆ ಕಾರ್ಯ ಅಲ್ಲಿ ನಡೆಯುತ್ತಿದೆ.

ಭಾರತದ ಬೇರೆ ಬೇರೆ ಭಾಷಾ ಬಂಧುಗಳಾದ ತಮಿಳರು, ಮರಾಠರು, ಬಂಗಾಳಿಗಳು, ಗುಜರಾಥಿಗಳು, ತೆಲುಗರು ಇವರೆಲ್ಲರೂ ತಮ್ಮ ತಮ್ಮ ಭಾಷಾ ಸಾಹಿತ್ಯಗಳ ಸಂರಕ್ಷಣೆಗೆ ತಾವು ಇರುವೆಡೆಗಳಿಂದಲೇ ಪ್ರಯತ್ನಿಸುತ್ತಿರುವಂತೆಯೇ ಕನ್ನಡಿಗರೂ ಮೇಲೆ ಕಂಡಂತೆ ಕರ್ನಾಟಕ ಸಂಘಗಳನ್ನು ಸ್ಥಾಪಿಸಿಕೊಂಡು ಕಾರ್ಯೋನ್ಮುಖರಾಗಿರುವುದು ಶ್ಲಾಘ್ಯವಾದ ಕಾರ್ಯವೆಂದು ನಾನು ಹೇಳಬಯಸುತ್ತೇನೆ.

ಆರ್. ನರಸಿಂಹಾಚಾರ್ಯ ವಿರಚಿತ

ಕರ್ಣಾಟಕ ಕವಿಚರಿತೆ

[ಭಾಗ ೧]

ಮಾರಾಟಕ್ಕೆ ಸಿದ್ಧವಾಗಿದೆ !

ಸಾಧಾರಣ ಪ್ರತಿ ಬೆಲೆ : ರೂ. ೧೨-೦೦ :: ಲೈಬ್ರರಿ ಪ್ರತಿ ಬೆಲೆ : ರೂ. ೧೫-೦೦

ಅಧಿಕೃತ ಪುಸ್ತಕ ವ್ಯಾಪಾರಿಗಳಿಗೆ ಶೇ. ೧೫ ರಂತೆ ಕಮೀಷನ್

ರವಾನಿಸುವ ವೆಚ್ಚ ಪ್ರತ್ಯೇಕ.

ಶೇ. ೫೦ ರಷ್ಟು ಮುಂಗಡ ಕಳುಹಿಸಬೇಕು.

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

ಬೆಂಗಳೂರು ಕಾರ್ಪೊರೇಷನ್ ಕನ್ನಡಕ್ಕೆ ಮನ್ನಣೆ ಇತ್ತಿರುವುದು ಸ್ವಾಗತಾರ್ಹ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರ ಹೇಳಿಕೆ

ಕರ್ನಾಟಕದ ರಾಜಧಾನಿಯೆನಿಸಿರುವ ಬೆಂಗಳೂರು ಪಟ್ಟಣವು ಸುಮಾರು ೧೩,೦೦,೦೦೦ ಜನವಸತಿಯುಳ್ಳುದಾಗಿ ಹಲವಾರು ವಿಖ್ಯಾತ ಕೈಗಾರಿಕೆ ಕಾರ್ಖಾನೆಗಳಿಂದ ಹೆಸರಾಗಿ ಸಮಗ್ರ ಭಾರತದಲ್ಲಿಯೇ ಗಣ್ಯತೆ ಗಳಿಸಿದೆ. ಹವ, ನೀರು, ದೀಪಗಳ ಸೌಕರ್ಯ, ಲಾಲ್‌ಬಾಗ್, ಕಬ್ಬನ್ ಪಾರ್ಕ್, ಹೈಗ್ರೌಂಡ್ಸ್‌ಗಳ ಸೌಂದರ್ಯಗಳು ಕೂಡ ಬೆಂಗಳೂರಿನ ಪ್ರಾಮುಖ್ಯತೆಯನ್ನು ಹೆಚ್ಚಿಸಿವೆ.

ಬೆಂಗಳೂರು ನಗರಸಭೆ ತನ್ನ ಉತ್ತಮ ಆಡಳಿತದಿಂದ ಭಾರತದಲ್ಲಿಯೇ ಮಿಗಿಲಾದ ಕೀರ್ತಿಯನ್ನು ಗಳಿಸಿದೆ. ವ್ಯಾಪಾರ, ಕೈಗಾರಿಕೆಗಳಿಗೆ ಹೆಸರಾದ ಬೆಂಗಳೂರಿಗೆ ಭಾರತದ ಎಲ್ಲ ಭಾಗಗಳಿಂದಲೂ ಜನರು ಬಂದು ನೆಲೆಸುತ್ತಿದ್ದಾರೆ. ವಿಶೇಷವಾಗಿ ಬೆಂಗಳೂರಿಗೆ ನೆರೆಯ ತಮಿಳುನಾಡು, ಕೇರಳಗಳಿಂದ ಜನರು ಜೀವನೋಪಾಯಕ್ಕೆ ಬಂದು ತಕ್ಕಷ್ಟು ಸುಖಸಂಪತ್ತು ಗಳಿಸಿದ್ದಾರೆ. ಬೆಂಗಳೂರಿನಲ್ಲಿ ಅಧಿಕ ಸಂಖ್ಯೆಯ ಕನ್ನಡಿಗರಲ್ಲದೆ, ತೆಲುಗು, ತಮಿಳು, ಮಲೆಯಾಳ, ಹಿಂದಿ, ಉರ್ದು, ಮರಾಠಿ, ಗುಜರಾತಿ ಮಾತಾಡುವ ಜನರು ತಕ್ಕಮಟ್ಟಿಗೆ ವಾಸವಾಗಿದ್ದಾರೆ. ಮದ್ರಾಸಿನಂತೆ ಬೆಂಗಳೂರಿನಲ್ಲಿಯೂ ಇಂಗ್ಲಿಷ್ ತಲೆ ಎತ್ತಿ ನಿಂತೇ ಇದೆ. ಇಷ್ಟೆಲ್ಲ ಇದ್ದರೂ 'ಬೆಂಗಳೂರು ಕರ್ನಾಟಕದ ರಾಜಧಾನಿ' ಎಂಬುದನ್ನು ಯಾರೂ ಮರೆಯಬಾರದು. ಬೆಂಗಳೂರು ಎಂಬ ಹೆಸರು ಕೂಡ ಅಚ್ಚಕನ್ನಡದೆಂಬುದನ್ನು ಯಾರೂ ಕಡೆಗಣಿಸಬಾರದು.

ಬೆಂಗಳೂರು ನಗರಸಭೆಯವರು ಕನ್ನಡವನ್ನು ತಮ್ಮ ಆಡಳಿತ ಭಾಷೆಯನ್ನಾಗಿ ತೀರ್ಮಾನಿಸಿ ತಮ್ಮ ಕನ್ನಡಿಗತನವನ್ನು ದೃಢಪಡಿಸಿದ್ದಾರೆ. ಇದರಿಂದ ಕಾರ್ಪೊರೇಷನವರ ಗೌರವ ಅಧಿಕವಾಗಿ 'ಬೆಂಗಳೂರು ಕನ್ನಡಿಗರ ರಾಜಧಾನಿ' ಎಂಬ ಭಾವನೆ ಸರ್ವತ್ರ ಹರಡಲು ಕಾರಣವಾಗಿದೆ. ಈ ಧೀರ ನಿರ್ಧಾರಕ್ಕಾಗಿ ಸಾಹಿತ್ಯ ಪರಿಷತ್ತಿನ ಪರವಾಗಿ ನಾನು ಬೆಂಗಳೂರು ಕಾರ್ಪೊರೇಷನ್ ಮೇಯರ್, ಡೆ|| ಮೇಯರ್ ಹಾಗೂ ಮಾನ್ಯ ಸದಸ್ಯರನ್ನು ಮನಸಾರ ಶ್ಲಾಘಿಸುವೆನು.

ಬೆಂಗಳೂರಿನ ಪ್ರಮುಖ ಬೀದಿಗಳಿಗೆ ಉಪವನಗಳಿಗೆ ವಿಖ್ಯಾತ ಕನ್ನಡಿಗರ, ಪ್ರಖ್ಯಾತ ಭಾರತೀಯರ ಹೆಸರಿಡುವ ಸತ್‌ಸಂಪ್ರದಾಯವನ್ನು ಕಾರ್ಪೊರೇಷನ್ ಮುಂದುವರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಬೆಂಗಳೂರಿನಲ್ಲಿರುವ ಕಬ್ಬನ್‌ಪಾರ್ಕ್, ಕಬ್ಬನ್ ಪೇಟೆ, ಫ್ರೇಜರ್‌ಟೌನ್, ಲಾಲ್‌ಬಾಗ್ ಮೊದಲಾದ ವಿದೇಶೀಯ ಹೆಸರುಗಳನ್ನು ಬದಲಾಯಿಸಿ ಸರ್ದಾರ್ ಪಟೇಲ್, ರಾಜೇಂದ್ರಪ್ರಸಾದ್, ಪಂಡಿತ ಮಾಳವೀಯ, ಬಸವೇಶ್ವರ, ನೃಪತುಂಗ, ಆದಿಪಂಪ, ಚಾಲುಕ್ಯ, ಪುಲಿಕೇಶಿ, ಕೆಳದಿ ಚೆನ್ನಮ್ಮಾಜಿ, ಮುಮ್ಮಡಿ ಕೃಷ್ಣರಾಜ, ಕಿತ್ತೂರು ಚನ್ನಮ್ಮ, ಹಂಪೆಯ ಹರೀಶ್ವರ, ಸರ್ವಜ್ಞ ಕವಿ, ಪುರಂದರದಾಸರು, ಕನಕದಾಸರು ಮೊದಲಾದವರ ಹೆಸರನ್ನು ಇಡುವ ಪದ್ಧತಿಯನ್ನು ಪ್ರಾರಂಭಿಸಬೇಕೆಂದು ಬಿನ್ನೈಸುವೆನು.

ಈ ಕಾರ್ಯದಲ್ಲಿ ಸರ್ಕಾರದವರೂ, ಕನ್ನಡ ಜನರೂ ಬೆಂಗಳೂರು ಕಾರ್ಪೊರೇಷನ್‌ಗೆ ಬೆಂಬಲವಾಗುವರೆಂದು ನನ್ನ ನಂಬಿಕೆಯಿದೆ.

ಬೆಂಗಳೂರು ದಂಡು ಪ್ರದೇಶದಲ್ಲಿ ವ್ಯಾಪಾರಿಗಳು ತಮ್ಮ ಅಂಗಡಿ ಹಾಗೂ ಕಾರ್ಯಾಲಯಗಳ ಮುಂದೆ ಕನ್ನಡ ವಿಳಾಸದ ಹಲಗೆಗಳನ್ನು ಹಾಕಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಜತೆಯಲ್ಲಿ ತಮ್ಮ ತಮ್ಮ ಭಾಷೆಗಳ ವಿಳಾಸವನ್ನು ಹಾಕಲಿಕ್ಕೆ ಅಡ್ಡಿಯಿಲ್ಲ.

ಮುಖ್ಯವಾಗಿ ಸರ್ಕಾರವು ಕನ್ನಡವು ಪ್ರಭುತ್ವದ ಭಾಷೆ ಎಂದು ಘೋಷಿಸಿದರೆ ಈ ಎಲ್ಲ ಸಮಸ್ಯೆಗಳೂ ಸುಲಭವಾಗಿ ಬಗೆಹರಿಯುವುವೆಂದು ನನ್ನ ನಂಬಿಕೆಯಿದೆ.

ಕನ್ನಡ ಪ್ರೇಮಿಗಳಾದ ಬೆಂಗಳೂರು ಕಾರ್ಪೊರೇಷನವರಿಗೆ ನನ್ನ ವಂದನೆಗಳು.

||ಸಿರಿಗನ್ನಡಂ ಗೆಲ್ಗೆ-ಬಾಳ್ಗೆ||

ನಾಡುನುಡಿಗಳ ಅಭಿಮಾನಿಗಳಾದ ಇಬ್ಬರು ಹಿರಿಯರ ಹುಟ್ಟುಹಬ್ಬಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಅಭಿನಂದನೆಗಳು

(ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳಿಂದ)

ಕನ್ನಡ ನಾಡುನುಡಿಗಳ ಅಭಿಮಾನಿಗಳೂ ಉಜ್ವಲ ದೇಶಭಕ್ತರೂ ನಾಡಿನ ಶಿಕ್ಷಣಕ್ಕಾಗಿ ಬಹುಮುಖವಾಗಿ ಪ್ರಯತ್ನಿಸಿರತಕ್ಕವರೂ ಆದ ಧಾರವಾಡದ ಶ್ರೀ ಆರ್.ಎಸ್. ಹುಕ್ಕೇರಿಕರರ ೭೫ನೆಯ ಹುಟ್ಟು ಹಬ್ಬವು ತಾ|| ೧೩-೧-೬೨ರಂದು ಧಾರವಾಡದಲ್ಲಿ ಶ್ರೀಮನ್ನಾರಾಯಣರ ನೇತೃತ್ವದಲ್ಲಿ ನಡೆಯುವುದನ್ನು ಕೇಳಿ ನಮಗೆ ಸಂತೋಷವಾಗಿದೆ.

ಬೆಂಗಳೂರಿನ ಹಿರಿಯ ದಾನಿಗಳೂ ದೇಶಭಾಷಾಭಿಮಾನಿಗಳೂ ಪರಿಷತ್ತಿನ ಮಾನ್ಯ ಸದಸ್ಯರೂ ಆದ ಧರ್ಮಪ್ರಕಾಶ ಶ್ರೀ ಎಲ್.ಎಸ್. ವೆಂಕಾಜಿರಾವ್ ಎಂ.ಎಲ್.ಎ. ಅವರ ೬೦ನೆಯ ವರ್ಷದ ಹುಟ್ಟುಹಬ್ಬ ತಾ|| ೧೧-೧-೬೨ ರಂದು ಬೆಂಗಳೂರಿನಲ್ಲಿ ಅವರ ಮಿತ್ರರು ಮತ್ತು ಹಿತೈಷಿಗಳಿಂದ ಆಚರಿಸಲ್ಪಟ್ಟುದನ್ನು ಕೇಳಿ ನಾವು ಹರ್ಷಿಸುತ್ತೇವೆ. ಜ್ಞಾನವೃದ್ಧರೂ, ವಯೋವೃದ್ಧರೂ, ಸೇವಾವೃದ್ಧರೂ, ಉದಾರದಾನಿಗಳೂ ಆದ ಈ ಉಭಯ ಜನಪ್ರಿಯ ಮುಂದಾಳುಗಳಿಗೆ ಶ್ರೀ ಪರಮೇಶ್ವರನು ಇತೋಪ್ಯತಿಶಯವಾದ ಆಯುರಾರೋಗ್ಯ ಭಾಗ್ಯಗಳನ್ನು ಅನುಗ್ರಹಿಸಿ ಅವರಿಂದ ದೇಶಕ್ಕೆ ಇನ್ನೂ ಹೆಚ್ಚಾದ ಸೇವೆ ಸಲ್ಲುವಂತೆ ಮಾಡಲೆಂದು ಪರಿಷತ್ತಿನ ಪರವಾಗಿ ಪ್ರಾರ್ಥಿಸುತ್ತೇನೆ.

||ಸರ್ವೇಜನಾಃ ಸುಖಿನೋ ಭವಂತು||

ಮೈಸೂರು ರಾಜ್ಯ ಸಾಹಿತ್ಯ ಅಕ್ಯಾಡಮಿಯ ಔದಾರ್ಯ

ತಾ|| ೧೧-೧-೬೨ ರಂದು ಮೈಸೂರು ಸಾಹಿತ್ಯ ಅಕ್ಯಾಡಮಿಯವರು ಶ್ರೀಗಳಾದ ದೇವುಡು ನರಸಿಂಹಶಾಸ್ತ್ರಿ, ಪ್ರೊ|| ಕೆ. ಜಿ. ಕುಂದಣಗಾರ್, ಡಾ|| ಫ. ಗು. ಹಳಕಟ್ಟಿ, ಈಶ್ವರ ಸಣಕಲ್ಲ ಈ ನಾಲ್ಕು ಮಂದಿ ಹಿರಿಯ ಸಾಹಿತಿಗಳಿಗೆ ತಲಾ ೫೦೦ ರೂ. ಗಳಂತೆ ಸಹಾಯ ದ್ರವ್ಯಕೊಡಲು ನಿರ್ಧರಿಸಿದ್ದಾರೆ. ಈ ವಿಷಯದಲ್ಲಿ ವಿದ್ಯಾಮಂತ್ರಿಗಳೂ ಅಕ್ಯಾಡಮಿ ಅಧ್ಯಕ್ಷರೂ ಆದ ಶ್ರೀ ಅಣ್ಣಾರಾವ್ ಗಣಮುಖಿಯವರು ತೋರಿದ ಔದಾರ್ಯ ಶ್ಲಾಘ್ಯವಾಗಿದೆ.

ಅಕ್ಯಾಡಮಿ ಹೊಸ ಸದಸ್ಯರು

ಹೈದರಾಬಾದಿನ ಪ್ರೊ|| ಡಿ. ಕೆ. ಭೀಮಸೇನರಾಯರು, ಬೆಂಗಳೂರಿನ ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು, ಉಡುಪಿಯ ಪ್ರೊ|| ಕೆ. ಎಸ್. ಹರಿದಾಸಭಟ್ಟರು ಇವರನ್ನು ಮೈಸೂರು ಸಾಹಿತ್ಯ ಅಕ್ಯಾಡಮಿಗೆ ಸದಸ್ಯರನ್ನಾಗಿ ನೇಮಿಸಿದ್ದಾರೆ.

ಬೆಂಗಳೂರು

ಕರ್ನಾಟಕದ ಸುಪ್ರಸಿದ್ಧ ಅನುಭವಿಗಳಾದ ಕಾಖಂಡಕಿಯ ಶ್ರೀ ಮಹೀಪತಿ ದಾಸರ ವಂಶಸ್ಥರಾದ ಶ್ರೀ ಹರಿದಾಸ ಶ್ರೀಪತಯ್ಯನವರು ಜ. ೯ ರಂದು 'ಸಂಯುಕ್ತ ಕರ್ನಾಟಕ' ಕಚೇರಿಯಲ್ಲಿ ಶ್ರೀ ಮಹೀಪತಿ ದಾಸರ ಕೃತಿಗಳನ್ನು ಹಾಡಿದರು. ಈ ಸಂದರ್ಭದಲ್ಲಿ ಶ್ರೀ ದಿವಾಕರ ರಂಗರಾಯರೂ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳೂ ಮುಂತಾಗಿ ಅನೇಕರು ಹಾಜರಿದ್ದರು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಜಿ. ಪಿ. ರಾಜರತ್ನಂ ಅವರು ಪಂಪಕವಿಯ 'ಅರಿಕೇಸರಿ' ಎಂಬ ವಿಚಾರವಾಗಿ ಜ. ೧೩ ರಂದು ಉಪನ್ಯಾಸ ಮಾಡಿದರು.

ಪರಿಷತ್ತಿನ ಸದಸ್ಯರಲ್ಲಿ ವಿನಂತಿ

೧೯೬೨ರ ಪರಿಷತ್ತಿನ ಸದಸ್ಯತ್ವದ ಚಂದಾ ಆರು ರೂಪಾಯಿಗಳನ್ನು ದಯೆಯಿಟ್ಟು ಈ ಕೂಡಲೇ ಕಳಿಸಿ ಪರಿಷತ್ತಿಗೆ ನೆರವು ನೀಡಬೇಕೆಂದು ವಿನಯದಿಂದ ವಿನಂತಿಸುತ್ತೇವೆ.

ಅನ್ನದಾನಯ್ಯ ಪುರಾಣಿಕ,
ಕೆ. ಎಂ. ಕೃಷ್ಣರಾವ್,
ಗೌ|| ಕಾರ್ಯದರ್ಶಿಗಳು.

ಗ್ರಂಥಾವಲೋಕನ

ಬಿದನೂರು ಪ್ರಭು ಶಿವಪ್ಪನಾಯಕ: ಲೇಖಕರು: ಆಸ್ಥಾನವಿದ್ವಾನ್, ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ಸೈಜು ೧/೮ ಕ್ರೌನ್, ಪುಟಗಳು ೧೩೦ + ೧೪, ಬೆಲೆ; ರೂ. ೨-೦೦.

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವುಳ್ಳ ಕರ್ಣಾಟಕದಲ್ಲಿ ಹಲವಾರು ರಾಜಮನೆತನಗಳು ಬಾಳಿ ಬೆಳಗಿ ಹೋಗಿವೆ. ಅವುಗಳಲ್ಲಿ ಕೆಳದಿ ಸಂಸ್ಥಾನಕ್ಕೆ ಸಂಬಂಧಿಸಿದ ಚರಿತ್ರೆಯನ್ನು ಪ್ರಸ್ತುತ ಗ್ರಂಥದಲ್ಲಿ ನಿರೂಪಿಸಲಾಗಿದೆ. ಅಲ್ಲದೆ ಈ ಕೆಳದಿ ಸಂಸ್ಥಾನದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದ ಸ್ವಾದಿ, ಬಿಳಗಿ, ಕೊಡಗು ರಾಜ್ಯಗಳ ಚರಿತ್ರೆಯೂ ಈ ಗ್ರಂಥದಲ್ಲಿ ಅಡಕವಾಗಿರುವುದು ಓದುಗರಿಗೆ ಮತ್ತಷ್ಟು ಉಪಯುಕ್ತವಾಗಿದೆ. ಏಕೆಂದರೆ ಮಲೆನಾಡಿನ ಈ ನಾಲ್ಕು ರಾಜ್ಯಗಳ ಚರಿತ್ರೆಯೂ ಒಂದೆಡೆಯೇ ದೊರೆತಂತಾಗುತ್ತದೆ.

ಕೆಳದಿ ಚರಿತ್ರೆಗೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳು ದಾಖಲಾತಿಗಳು ಚಾರಿತ್ರಿಕಾಂಶಗಳು, ಶಾಸನಗಳು, ವಂಶಾವಳಿಗಳು ಉಪಲಬ್ಧವಾಗಿವೆ. ಪ್ರಕೃತ ಗ್ರಂಥಕರ್ತರು ಈ ಗ್ರಂಥ ರಚನೆಗೆ ಕೆಳದೀನೃಪ ವಿಜಯ, ಇಕ್ಕೇರಿ ಸಂಸ್ಥಾನದ ಚರಿತ್ರೆ, ಶಿವತತ್ತ್ವರತ್ನಾಕರ, ಮೈಸೂರು ಚರಿತ್ರೆ, ಮೈಸೂರು ಗೆಜೆಟಿಯರ್; ಬೀಳಗಿ ಅರಸರ ವಂಶಾವಳಿ, ಸ್ವಾದಿರಾಜರ ಚರಿತ್ರೆ; ರಾಜೇಂದ್ರನಾಮೆ, ಕನ್ನಡ ನಾಡಿನ ಚರಿತ್ರೆ, ಸೇವಂತಿಕಾ ಪರಿಣಯ ನಾಟಕಮ್, ರಾಣಿ ವೀರಮ್ಮಾಜಿ, ಸದಾಶಿವ ರಾಜನೀತಿ, ಕನ್ನಡ ಗೆಜೆಟಿಯರ್ ಮುಂತಾದ ಗ್ರಂಥಗಳನ್ನು ಅವಲೋಕಿಸಿದಂತೆ ಹೇಳಿಕೊಂಡಿದ್ದಾರೆ.

ಕರ್ಣಾಟಕದಲ್ಲಿ ಸುಮಾರು ಮೂರು ಶತಕಗಳ ತನಕ ವೈಭವದಿಂದ ಆಳಿ ಬಾಳಿ ಹಾಳಾದ ಈ ಕೆಳದಿ ಸಂಸ್ಥಾನದ ಚರಿತ್ರೆ ಹಲವಾರು ವಿಷಯಗಳಿಗೆ ಆದರ್ಶಪೂರ್ಣವಾಗಿದೆ. ಅಲ್ಲಿ ರಾಜ್ಯಭಾರ ಮಾಡಿದ ಕೆಲವು ಅರಸರ ಹೆಸರುಗಳು ಇಂದಿಗೂ ಜೀವಂತವಾಗಿವೆ. "ಶಿವಪ್ಪ ನಾಯಕನ ಶಿಸ್ತು" ಗಾದೆಯಾಗಿಬಿಟ್ಟಿದೆ. "ಶಿಸ್ತುಗಾರ ಶಿವಪ್ಪನಾಯ್ಕ ಕೆಳದೀನಗರ" ಮುಂತಾಗಿ ಹಾಡುಗಳಲ್ಲಿಯೂ ಲಾವಣಿಗಳಲ್ಲಿಯೂ ಅವರ ಹೆಸರುಗಳು ಉಳಿದುಕೊಂಡು ಬಂದಿವೆ. ನಾಡು ನುಡಿಗಳಿಗಾಗಿ ಹೋರಾಡಿದ ಇಂತಹ ಸ್ವದೇಶಾಭಿಮಾನಿಗಳ ಚರಿತ್ರೆಯ ವ್ಯಾಸಂಗ ನಮ್ಮ ಜನಕ್ಕೆ ಅದರಲ್ಲೂ ವಿದ್ಯಾರ್ಥಿವೃಂದಕ್ಕೆ ಅತ್ಯಾವಶ್ಯಕ.

ಈ ಗ್ರಂಥವನ್ನು ಕನ್ನಡ ನಾಡು ನುಡಿಗಳ ಉಜ್ಜ್ವಲಾಭಿಮಾನಿಗಳೂ ಕರ್ಣಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆದ ರ್‍ಯಾಂಗ್ಲರ್ ಡಿ.ಸಿ. ಪಾವಟೆ ಅವರಿಗೆ ಅರ್ಪಿಸಲಾಗಿದೆ. ಈ ಗ್ರಂಥದಲ್ಲಿ ಒದಗಿಸಿರುವ ಕೆಲವು ಚಿತ್ರಗಳು ಇದರ ಉಪಯುಕ್ತತೆಯನ್ನು ಮತ್ತಷ್ಟು ಹೆಚ್ಚಿಸಿವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೀರ್ತನೆ, ಭಾಷಣ, ಗ್ರಂಥಸಂಪಾದನೆ ಪತ್ರಿಕಾಪ್ರಕಟನೆ ಮುಂತಾದ ಪ್ರಾಕಾರಗಳಲ್ಲಿ ಸವ್ಯಸಾಚಿಯಂತೆ ಸಾಹಸ ತೋರುತ್ತಿರುವ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರ ಈ ಗ್ರಂಥವನ್ನು ನಾವು ಆದರದಿಂದ ಸ್ವಾಗತಿಸುತ್ತೇವೆ. ಕನ್ನಡಿಗರಾದ ನಾವು ಕೆಳದಿ ಸಂಸ್ಥಾನದ ಚರಿತ್ರೆಯನ್ನು ಅರಿತುಕೊಳ್ಳುವುದು ಅನಿವಾರ್ಯವೂ ಅತ್ಯವಶ್ಯವೂ ಆಗಿದೆ.

ಹಾಲ್ಕೆನೆ: ಲೇಖಕರು: ಶ್ರೀ ಜ. ಚ. ನಿ. ಶ್ರೀಶೈಲ ಸಂಸ್ಥಾನ, ಗೂಳೂರು. ಸೈಜು ೧/೮ ಕ್ರೌನ್, ಪುಟಗಳು ೮೪ + ೮, ಬೆಲೆ ರೂ. ೧-೨೫ ನ.ಪೈ.

ಹಾಲ್ಕೆನೆ ಒಂದು ಕವನಸಂಗ್ರಹ. ಇದರಲ್ಲಿ ಅರವತ್ತೊಂದು ಕವಿತೆಗಳಿವೆ. ಇದನ್ನು "ಸಖರಾಯ ಪಟ್ಟಣದ ಹಾಲುಸ್ವಾಮಿ ಮಠಾಧ್ಯಕ್ಷರಾದ ಶ್ರೀ ಷ. ಬ್ರ. ಸದಾಶಿವ ಶಿವಾಚಾರ್ಯ ಸನ್ನಿಧಿಯ ಅರವತ್ತು ವರುಷಗಳ ಸವಿನೆನಹಿಗಾಗಿ ಅರವತ್ತು ಕವನ ಕುಸುಮಗಳ ಹಾಲ್ಕೆನೆಯ ನುಡಿ ಹೊಂದಳಗೆಯಲ್ಲಿರಿಸಿ ಹೃದಯಾರೆ ಸಮರ್ಪಿಸಲಾಗಿದೆ" ಎಂದು ಹೇಳಿಕೊಂಡಿದ್ದಾರೆ.

ಶ್ರೀಶೈಲ ಸಂಸ್ಥಾನದ ಶ್ರೀಗಳಾದ ಚನ್ನಬಸವ ದೇಶಿಕೇಂದ್ರರ ಸಾಹಿತ್ಯ ಸೇವೆಯು ಬಹುಮುಖವಾದುದು. ಅವರ ಹಲವಾರು ಕೃತಿಗಳು ಈಗಾಗಲೇ ಕನ್ನಡಿಗರ ಮುಂದಿವೆ. ವಚನ ಸಾಹಿತ್ಯ, ನಾಟಕಚರಿತ್ರೆ, ಕವನ, ಕಾವ್ಯಗಳೇ ಮೊದಲಾದ ಕ್ಷೇತ್ರಗಳಲ್ಲಿ ಶ್ರೀಗಳವರು ವ್ಯವಸಾಯ ಮಾಡುತ್ತ ಬಂದಿದ್ದಾರೆ. ಪ್ರಕೃತ ಹಾಲ್ಕೆನೆಯಲ್ಲಿ ಅನೇಕ ವಿಷಯಗಳನ್ನು ಕುರಿತಾದ ಕವನಗಳಿವೆ. ಪೂರ್ವಜರು "ಪ್ರತಿಭಾನಂ ಕಾವ್ಯ ವಿದ್ಯಾಪ್ರಚಯ ಪರಿಚಯಂ ವೃದ್ಧ ಸೇವಾನುರಾಗಂ ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ" ಎಂದಿದ್ದಾರೆ. ಈ ದೃಷ್ಟಿಯಿಂದ ಈ ಕವನ ಸಂಗ್ರಹವನ್ನು ವಿಮರ್ಶೆಮಾಡಿ ನೋಡಿದಲ್ಲಿ ಅಲ್ಲಲ್ಲಿ ಶ್ರೀಗಳವರ ಪ್ರತಿಭೆ ಹೊಮ್ಮುತ್ತಿದೆ. 'ಚಿಂತೆಯೇತಕೆ' ಎಂಬ ಕವನದಲ್ಲಿ: "ಆಡಿಮಾಡುವರೇನು ಮನುಜರು| ಖೋಡಿಗಳಹರು ಸಾಲದೇ? ಕಾಡಿಮಾಡುವರೇನು ಮನುಜರು| ಬಾಡಿಬೀಳ್ವರು ತಿಳಿಯದೇ?" ಎಂದು ಮನುಜರ ಸ್ವಭಾವವನ್ನು ಹೇಳಿ ಕೊನೆಯಲ್ಲಿ "ಚಿಂತೆಯಿಲ್ಲದ ಬಾಳು ಸೊಗಸು| ಚಿಂತೆಯಿದ್ದರೆ ಸೊಗಸದು| ಚಿಂತೆಯಿಲ್ಲದ ಜೀವ ತಾನದು| ದೇವ ಭಾವವ ತಾಳ್ವುದು" ಎಂದಿದ್ದಾರೆ. ಇದು ಶ್ರೀಗಳವರ ನಿಶ್ಚಿಂತತ್ವಕ್ಕೆ ನಿದರ್ಶನವಾಗಿದೆ. ಹಾಗೆಯೇ 'ಏನು ಚೆನ್ನ' ಎಂಬ ಕವನದಲ್ಲಿ "ಆಗಬಾರದಾಗಿಹೋಯ್ತು| ಆದುದೆಲ್ಲ ಆಗಿಹೋಯ್ತು| ದುಃಖವೆಂಬ ಕಡಲಿನಲ್ಲಿ| ದುಃಖಜೀವ ಮುಳುಗುತ್ತಿತ್ತು| ದೇಹಶವವು ತೇಲುತ್ತಿತ್ತು| ದೃಷ್ಟಿ ತಾನು ಕಾಣದಾಯ್ತು| ಸೃಷ್ಟಿಯೆಲ್ಲ ಶೂನ್ಯ

ವಾಯ್ತು . . . . ಬಣ್ಣಗೆಟ್ಟಮೇಲೆ ತನ್ನ | ಕಣ್ಣಬಿಟ್ಟರೇನು ಚೆನ್ನ" ಎಂದು ಪ್ರಶ್ನಿಸಿದ್ದಾರೆ.

ಶ್ರೀಶೈಲದ ಶ್ರೀಗಳವರು ಪ್ರತಿಭಾಸಂಪನ್ನರು. ಅವರ ಪ್ರತಿಭೆಗೆ ಈ ಕವನ ಸಂಗ್ರಹವೇ ಸಾಕ್ಷಿಯಾಗಿದೆ. ಸರಳವೂ ಸುಲಭವೂ ಲಲಿತವೂ ಆದ ಈ ಕವನ ಸಂಗ್ರಹ ಸರ್ವಸಂಗ್ರಹ ಯೋಗ್ಯವಾದುದು. ಕ್ಷಣಿಕ ಸಾಹಿತ್ಯವೇ ವಿಶೇಷವಾಗಿ ನಿರ್ಮಾಣವಾಗುತ್ತಿರುವ ಈ ಕಾಲದಲ್ಲಿ ಆತ್ಮೋದ್ಧಾರಕ್ಕೆ ನೆರವಾಗಬಲ್ಲ ಕೃತಿಗಳನ್ನು ಯಾರಾದರೂ ಆದರದಿಂದ ಸ್ವಾಗತಿಸಲೇಬೇಕು. ಜಗತ್ತನ್ನು ಮಿಥ್ಯಾತತ್ವವೆಂಬ ಅಜ್ಞಾನಾಂಧಕಾರ ಆವರಿಸಿದಾಗ ಮಠಾಧಿಪತಿಗಳೂ ಗುರು ಹಿರಿಯರೂ ವಿಭೂತಿ ಪುರುಷರೂ ಮುಂದೆಬಂದು ಜನತೆಯನ್ನು ಸನ್ಮಾರ್ಗಕ್ಕೊಯ್ಯುವ ಪಥವನ್ನು ತೋರಿಸಬೇಕು. ಅಂತಹ ಕಾಲ ಈಗ ಸನ್ನಿಹಿತವಾಗಿದೆ. ಶ್ರೀಗಳವರ ಈ ತೆರನ ಸಾಹಿತ್ಯಸೇವೆ ನಿರಂತರವಾಗಿ ನಡೆಯಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಬಸವೇಶ್ವರ ಸ್ತೋತ್ರ ಮುಕ್ತಾಫಲ: ಸಂಗ್ರಾಹಕರು: ಮಾ. ನಂ. ನಂಜಪ್ಪನವರು: ಪ್ರಕಾಶಕರು : ಮಾ. ನಂ. ಶಿವಪ್ಪ ಸಹೋದರರು, ಕಲ್ಯಾಣ ಸಾಹಿತ್ಯ ಭಾಂಡಾರ, ಕಲ್ಯಾಣಭವನ, ಬೆಂಗಳೂರು-೨, ಪುಟಗಳು ೬೪ + ೮, ಬೆಲೆ ರೂ. ೧-೦೦.

ಬಸವೇಶ್ವರ ಸ್ತೋತ್ರ ಮುಕ್ತಾಫಲ ಒಂದು ಸಂಕಲನ ಗ್ರಂಥ. ಇದರಲ್ಲಿ ಬಸವೇಶ್ವರರಿಗೆ ಸಂಬಂಧಿಸಿದ ಸ್ತೋತ್ರ ಭಾಗಗಳನ್ನು ಪ್ರಾಚೀನ ಕವಿವರ್ಯರಿಂದ ಸಂಗ್ರಹಿಸಲಾಗಿದೆ. ಬಸವೇಶ್ವರ ಸುಪ್ರಭಾತ ಸ್ತವನವನ್ನು ಷಡಕ್ಷರ ದೇವನಿಂದಲೂ, ಬಸವೇಶ್ವರ ಅಕ್ಷರಮಾಲಿಕಾಗದ್ಯ ಸ್ತೋತ್ರವನ್ನು ಪ್ರಸಾದಿ ಸೋಮನಾಥನಿಂದಲೂ, ಬಸವಾಷ್ಟೋತ್ತರ ಶತನಾಮಾವಳಿಯನ್ನು ಶ್ರೀ ಸೋಮನಾಥನಿಂದಲೂ, ಬಸವೇಶ್ವರ ಸ್ತೋತ್ರ ಪಂಚರತ್ನ, ಬಸವೇಶ್ವರ ಅಕ್ಷರಾಂಕ ಸ್ತೋತ್ರ ವರ್ಣಮಾಲಿಕೆಗಳನ್ನು ಪಾಲ್ಕುರಿಕೆ ಸೋಮನಾಥ ಮಹಾಕವಿಯಿಂದಲೂ, ಬಸವೇಶ್ವರ ಸಹಸ್ರನಾಮಾವಳಿಯನ್ನು ಸತಿಗಾಲದ ಬಸವಯೋಗೀಂದ್ರನಿಂದಲೂ, ಬಸವೇಶ್ವರ ಸಹಸ್ರನಾಮ ಸ್ತೋತ್ರ ಮಾಲಿಕೆಯನ್ನು ಬಾಲಸಂಗಶಿವಯೋಗಿಯಿಂದಲೂ, ಸ್ತೋತ್ರ ಪದವನ್ನು ಮೈಲಾರ ಬಸವಲಿಂಗ ಶರಣರಿಂದಲೂ, ವೃಷಭಾಂಕಮಾಲಾ ಸ್ತೋತ್ರವನ್ನು ದೇವಲ ಮಹರ್ಷಿಯಿಂದಲೂ, ಬಸವಾಷ್ಟೋತ್ತರ ಶತನಾಮಾವಳೀ ರಘಟಾ ಸ್ತೋತ್ರವನ್ನು ಬಸವಲಿಂಗ ಶಿವಯೋಗಿಯಿಂದಲೂ ಸಂಗ್ರಹಿಸಿ, ವೈಶಾಖಗೀತೆ ಮತ್ತು ಮಂಗಳವನ್ನು ಶ್ರೀಮಾನ್ ನಂಜಪ್ಪನವರೇ ಹಾಡಿದ್ದಾರೆ. ಇದು ಒಂದು ಉಪಯುಕ್ತವಾದ ಮಹತ್ವದ ಗ್ರಂಥ. ಬಸವೇಶ್ವರನ ಸ್ತೋತ್ರ ಎಲ್ಲ ಜನ ಸಮುದಾಯಕ್ಕೂ ಆದರಲ್ಲೂ ವೀರಶೈವರಿಗೆ ಅತ್ಯಂತ ಪವಿತ್ರವಾದುದು. ಪ್ರಾಚೀನರು ಲಿಂಗಾರ್ಚನಾ ಸಮಯದಲ್ಲಿ ಈ ಸ್ತೋತ್ರಗಳನ್ನು ಪಠಿಸುತ್ತಿದ್ದರು. ಈ ಗ್ರಂಥದ ಅರಿಕೆಯಲ್ಲಿ ಶ್ರೀಯುತರು "ಭಕ್ತಿಯಿಂದ ಪಠಿಸಬೇಕೆನ್ನುವವರ ಸೌಲಭ್ಯಕ್ಕಾಗಿಯೂ ಮತ್ತು ಅಲ್ಲೊಂದಿಲ್ಲೊಂದು ಚೆಲ್ಲಾಪಿಲ್ಲಿಯಾಗಿ ಹೀಗೆಯೇ ಇದ್ದರೆ ಕಾಲಾಂತರದಲ್ಲಿ ಎಲ್ಲಿಯೂ ಸಿಕ್ಕದೆ ಈ ಸ್ತೋತ್ರಗಳು ನಷ್ಟವಾಗಬಹುದೆಂಬ ದೃಷ್ಟಿಯಿಂದಲೂ ಇವುಗಳನ್ನು ಒಂದೆಡೆ ಸಂಗ್ರಹಿಸಲಾಗಿದೆ" ಎಂದು ಹೇಳಿದ್ದಾರೆ. ಇಂತಹ ಸಮಾಜೋಪಕಾರ ಕಾರ್ಯವನ್ನು ಯಾರೂ ಮಾಡಿದರೂ ಅದು ಸ್ವಾಗತಾರ್ಹವೇ.

ಶ್ರೀಮಾನ್ ಮಾ. ನಂ. ನಂಜಪ್ಪನವರು ಕನ್ನಡ ಸಾಹಿತ್ಯಕ್ಕೆ ವಿಶೇಷವಾಗಿ ವೀರಶೈವ ಸಾಹಿತ್ಯಕ್ಕೆ ಗಣನೀಯವಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಸಾಹಿತ್ಯದಲ್ಲಿ ಕ್ರಾಂತಿಯೇ ನಡೆಯುತ್ತಿರುವ ಇಂದು ಇಂತಹ ಧಾರ್ಮಿಕ ಗ್ರಂಥಗಳಿಗೆ ಪುರಸ್ಕಾರವಾದರೂ ಎಲ್ಲಿ? ಆದರೂ ಶ್ರೀಯುತರು ದಿಟ್ಟತನದಿಂದ ಈ ಸ್ತೋತ್ರಗ್ರಂಥವನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಸಂಕಲಿಸಿರುವುದೇ ಅಲ್ಲದೆ ಪ್ರಕಟನೆಯ ಹೊರೆಯನ್ನೂ ಹೊತ್ತಿದ್ದಾರೆ. ಇದು ಕೇವಲ ಅವರ ಲಾಭಕ್ಕಲ್ಲ, ಜನತೆಯ ಹಿತಕ್ಕಾಗಿ. ಈ ಅಮೌಲ್ಯ ಪಾರಾಯಣ ಗ್ರಂಥವನ್ನು ಪಠಿಸಿ ಜನ ಪುನೀತರಾಗಲಿ; ಸಂಗ್ರಾಹಕರ ಶ್ರಮ ಸಾರ್ಥಕವಾಗಲಿ ಎಂದು ಮನಸಾರ ಹಾರೈಸುತ್ತೇವೆ. ಈ ಸಂಬಂಧದಲ್ಲಿ ಸಂಗ್ರಾಹಕರಿಗೆ ಸಣ್ಣದೊಂದು ಸೂಚನೆ: ಪ್ರಕೃತ ಗ್ರಂಥದಲ್ಲಿ ಸಂಗ್ರಹೀತವಾದ ಗ್ರಂಥಗಳನ್ನು ರಚಿಸಿದ ಕವಿಗಳ ಬಗ್ಗೆ ಸಂಕ್ಷೇಪವಾಗಿ ಪರಿಚಯವನ್ನು ಮಾಡಿಕೊಟ್ಟದ್ದಲ್ಲಿ ಓದುಗರಿಗೆ ಆ ಮೂಲಕೃತಿಗಳತ್ತ ಹೆಚ್ಚು ಆಸಕ್ತಿ ಹುಟ್ಟುತ್ತಿತ್ತು ಎಂಬುದು ನಮ್ಮ ಭಾವನೆ. ಒಟ್ಟಿನಲ್ಲಿ ಸ್ತೋತ್ರ ಗ್ರಂಥಗಳು ವಿರಳವಾಗಿರುವ ನಮ್ಮ ಕನ್ನಡ ಸಾಹಿತ್ಯಕ್ಕೆ ಈ ಸಂಗ್ರಹ ಒಂದು ಬಹು ಮುಖ್ಯವಾದ ಕಾಣಿಕೆ ಎಂದು ಹೇಳಬಹುದು.

—ಎನ್. ಬಸವಾರಾಧ್ಯ

"ಗಮಕ ಗೀತೆಗಳು": (ಕೃತಿ-ಕವನಗಳ ಸಂಕಲನ.) ಬರೆದವರು : ಗಮಕಿ ಶ್ರೀ ಎಂ. ರಾಘವೇಂದ್ರರಾವ್ (ರಘುವರ) ಪ್ರಕಾಶಕರು : ಕಾವ್ಯಗಾಯನ ಕಲಾಮಂದಿರ, ತ್ಯಾಗರಾಜನಗರ ಬೆಂಗಳೂರು, ೪. ಪುಟಗಳು ೭೮. ಬೆಲೆ ರೂ. ೧-೨೫. ನ. ಪೈ.

ಗಮಕ ಕಲೆಯ ಅಭ್ಯಾಸಕ್ಕೆ ಸಂಗೀತ ಹಾಗೂ ಸಾಹಿತ್ಯದ ಆಳವಾದ ಪಾಂಡಿತ್ಯವಲ್ಲದಿದ್ದರೂ ಮೇಲ್ಮಟ್ಟದ ಜ್ಞಾನ ಅಗತ್ಯ. ಗಮಕದ ಅಭ್ಯಾಸಿಗಳಿಗೆ ಸಾಧಾರಣವಾಗಿ ಹಳೆಯ ಕವಿಗಳಿಂದ ರಚಿತವಾದ, ಹಳಗನ್ನಡದಲ್ಲಿರುವ, ಚಂಪೂ ಕಾವ್ಯಗಳು, ಷಟ್ಪದಿಗಳು ಮುಖ್ಯವಾಗಿ ರೂಢಿಯಲ್ಲಿವೆ. ಆಧುನಿಕ ಕವಿಗಳಿಂದ ರಚಿತವಾದ ಭಾವಗೀತೆಗಳ ವಾಚನ ಗಮಕದಿಂದ ದೂರವಾದ ರೀತಿಯಲ್ಲಿ ಲಘು ಗೀತೆಗಳೆನ್ನಿಸಿಕೊಂಡು ಪ್ರಚಾರದಲ್ಲಿವೆ. ಆದರೆ, ಛಂದಸ್ಸಿನ ಆಧಾರವನ್ನು ಬಿಡದೆ, ಹಳೆಯ ಹಾಗೂ ಹೊಸ ಕವನಗಳ ಸಾರವನ್ನು ಒಂದು ಕಡೆ ಇಳಿಸಿರುವ ಕವನಗಳ ಕೊರತೆಯಿಂದಾಗಿ ಗಮಕಿಗಳಿಗೆ ಅನೇಕ ವೇಳೆ ತೊಂದರೆಯಾಗುವುದು ಸಹಜ. ಅಂತಹ ಸಂದರ್ಭಗಳಲ್ಲಿ ಅವರು ದಾಸರಚಿತ ಹಾಡುಗಳನ್ನು ಆಶ್ರಯಿಸಬೇಕು. ಈ ಕೊರತೆಯನ್ನು ಬಹಳ ಮಟ್ಟಿಗೆ ಸ್ವತಃ ಗಮಕಿಗಳೂ, ಆಳವಾದ ಅಭ್ಯಾಸ ಮಾಡಿದ ಸಾಹಿತಿಗಳೂ ಆದ ಶ್ರೀ ರಾಘವೇಂದ್ರರಾಯರು ಅನೇಕ ವರ್ಷಗಳಿಂದ ಬರೆದ ಕವನಗಳನ್ನು ಸಂಗ್ರಹಿಸಿ ಪ್ರಸ್ತುತ ಸಂಕಲನವನ್ನು ಪ್ರಕಟಿಸಿದ್ದಾರೆ. ಗಮಕಿಗಳಿಗೆ ಉಪಕಾರ ಮಾಡಿದ್ದಾರೆ.

ರಾಯರು ಈ ಸಂಕಲನದಲ್ಲಿ ಜೀವನದ ವಿವಿಧ ಅನುಭವಗಳನ್ನು, ಗುರಿಗಳನ್ನು ಕುರಿತು ಸುಮಾರು ೭೧ ಕವನಗಳನ್ನು ತಂದಿದ್ದಾರೆ. ರಾಯರನ್ನು ಈ ಸಂಗ್ರಹದಲ್ಲಿ ಕವಿಯಾಗಿ, ಗಮಕಿಯಾಗಿ ನೋಡಬಹುದು.

ಬಾಳಿನಗುರಿಯನ್ನು ಕುರಿತ ಕವನಗಳಲ್ಲಿ ಆದರ್ಶ ಜೀವನ ಹೇಗಿರಬೇಕೆಂಬುದನ್ನು ಹೀಗೆ ಚಿತ್ರಿಸುತ್ತಾರೆ.

"ದೋಷವೆತ್ತಿ ಗುಣವ ಮರೆತು ಆಶೆಮೀರಿ ಹಲುಬಿ ಪರರ"
ಕ್ಲೇಶಕೀಡುಮಾಡದೆ ಸಂತೋಷ ಚಿತ್ತದಿಂದಿಹುದಾದಶ"

ಸಹನೆ ಜೀವನಕ್ಕೆ ಅಗತ್ಯವಾದದ್ದು. 'ಬಂದ ಬವಣೆಬರಲಿ– ಸಹನೆ ಎಂದೆಂದೂ ಇರಲಿ' ಎಂದು ಆಶಿಸುತ್ತಾನೆ ಕವಿ.

"ಭುವಿಗೆ ಭೂಷಣರೆನಿಸಿ ನಾಲ್ವರಿಗೆ ಹಿತರೆನಿಸಿ"

ಬಾಳಿದರೆ ಜೀವಮಾನದ ಸಾರ್ಥಕತೆಯು ಅರಿವಾಗುತ್ತದೆ.

ಕವಿಯು ತನ್ನ ಮನಕ್ಕೆ ಎಚ್ಚರಿಕೆಯನ್ನು ಬಿಚ್ಚು ಮನಸ್ಸಿನಿಂದ ಕೊಡುತ್ತಾ ಅದಕ್ಕೆ ಬುದ್ಧಿವಾದ ಹೇಳುತ್ತಾನೆ.

"ಪರರ ಪೀಡಿಸಬೇಡ ಪರರ ವಂಚಿಸಬೇಡ."
"ಗುಣಕೆ ಮೆಚ್ಚುವನಾಗು ದೋಷಗಳನೊಪ್ಪದಿರು."

ಈ ಭಾವನೆ ಕವಿಯ ಮನಸ್ಸಿಗೆ ಮಾತ್ರವಲ್ಲ ಎಲ್ಲರಿಗೂ ಅಗತ್ಯವಾಗಿ ಅನ್ವಯವಾಗಬೇಕಾದದ್ದೆ.

ಕವಿಯು ಕೇವಲ ಬುದ್ಧಿ ಮಾತುಗಳನ್ನು ಹೇಳುವುದರಲ್ಲೆ ತೃಪ್ತನಾಗುವುದಿಲ್ಲ. ತನಗಿಂತಲು ಹಿಂದೆ ಆಗಿ ಹೋದ ಪಂಪ, ರನ್ನ, ಹರೀಶ್ವರ, ರಾಘವಾಂಕ, ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶ, ಹೊನ್ನಮ್ಮ, ವಿರೂಪಾಕ್ಷ ಪಂಡಿತ, ಷಡಕ್ಷರಿ ಇವರನ್ನು ಕುರಿತು ಮನಸಾರೆ ಹಾಡಿ ಆನಂದಿಸಿದ್ದಾನೆ. ಚಿಕ್ಕದಾದ ಪ್ರತಿ ಕವನದಲ್ಲೂ ಆ ಕವಿಯ ಸಂಪೂರ್ಣ ಚಿತ್ರ ದೊರೆಯುವಂತೆ ರಚಿಸಿರುವುದು ಕವಿಯ ಉತ್ತಮ ಜ್ಞಾನದ ಮನೋಭಾವದ ಚಿತ್ರವಾಗಿದೆ.

ಗಮಕ ಕಲೆಯನ್ನು ಕುರಿತು ಕೆಲವು ಕವನಗಳು ರಚಿತವಾಗಿವೆ. ಗಮಕ ಕಲೆ ಎಲ್ಲರಿಗೂ ಸುಲಭವಾಗಿ ಬರುವಂಥದಲ್ಲ. ಅವನಿಗೆ ಅಗತ್ಯವಾಗಿ

"ಕವಿಹೃದಯ ಮನೋಧರ್ಮ ಸುಶಾರೀ
ರವು ಪದ ಪದಗಳ ಗಮಕಗಳು
ಕಿವಿಮನಂಗಳಿಗೆ ಸುವಿಹಿತ ಮಾಗಿಯೆ
ಶ್ರವಣಮಾಡಿಸುವ ಪರಮ ಪ್ರತಿಭೆಯು"

ಇರಬೇಕು. ಇವಿದ್ದರೆ ಗಮಕಿಯು ಯಶಸ್ವಿಯಾಗಿ ಜನರು ಮೆಚ್ಚುಗೆ ಪಡೆಯುತ್ತಾನೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಕವಿಯು ಆನಂದದಿಂದ ಹಾಡುತ್ತಾನೆ.

"ಸುಖ ಶಾಂತಿ ಸಂತೋಷ ಸಂಭ್ರಮೋತ್ಸವವಿಂದು
ಸಕಲ ಭಾರತ ವರ್ಷಾದಾದ್ಯಂತ ಮಿಗಿಲು."

ಗೋವುಗಳನ್ನು ಕೊಲ್ಲುವುದು ಈ ಕವಿಗೆ ಹಿಡಿಸದು.

'ಮೂಕ ಜಂತುಗಳವುಗಳಂ ವಧೆಯ ಮಾಡದಿರಿ!
ಮೂಕ ಜಂತುಗಳ ಜನನಿಯು ತೆರದಿ ರಕ್ಷಿಸಿರಿ'

ಎಂದು ಪ್ರಾರ್ಥಿಸುತ್ತಾರೆ ಭಾರತ ಜನಕೋಟಿಯನ್ನು.

ಈ ಕವಿಗೆ ಎಲ್ಲರ ದೇವರೂ ಒಬ್ಬನೆ.

'ಸೃಷ್ಟಿಸಿದ ತಂದೆಯೊಬ್ಬನೆ! ಅನ್ಯರಿನ್ನಿಲ್ಲ.'
'ಸಕಲ ನದಿಗಳು ಸಮುದ್ರವ ಸೇರುವ ತೆರದಿ.'

ಬೇಧ ಭಾವಗಳೆಲ್ಲ ನಾವು ಮಾಡಿಕೊಂಡೆವು. ಆ ರೀತಿಯ ನಡತೆ ಬಿಟ್ಟು ಎಲ್ಲರೂ ಒಂದಾಗಬೇಕೆಂದು ಕವಿ ಆಶಿಸುತ್ತಾನೆ.

ಮಧುರವಾದ ಭಾವನೆಗಳು ಕವಿಯಲ್ಲಿ ಬಂದಾಗ ಬೆಳುದಿಂಗಳಿನಲ್ಲಿ ಕೃಷ್ಣ ಹೀಗೆ ಕಾಣಿಸುತ್ತಾನೆ:

'ಹೊಳೆ ಹೊಳೆಯುತ ರತ್ನಕುಂಡಲಧರ,
ರಘುವರ - ಕೆಳೆಯರೊಡನೆ ಕೂಡಿ-
ಕೊಳಲನೂದುತ'

ನಲಿದಾಡುತ್ತಿರುತ್ತಾನೆ. ಕವಿಗೆ ಕೃಷ್ಣನನ್ನು ಎಷ್ಟು ವಿಧವಾಗಿ ಹಾಡಿ ಹೊಗಳಿದರೂ ತೃಪ್ತಿಯಿಲ್ಲ.

ಕನ್ನಡ ಭಾಷೆ, ಕನ್ನಡ ನಾಡು ಇವುಗಳನ್ನು ಕುರಿತು ಶ್ರೀ ರಾಯರು ಉತ್ತಮವಾದ ಕೆಲವು ಗೀತೆಗಳನ್ನು ಬರೆದಿದ್ದಾರೆ. ಇವರಿಗೆ ಏನೇ ಆಗಲಿ, 'ಕನ್ನಡದಿಂದಲೇ ಮುಕ್ತಿ'.

ಹೀಗೆ ಕವಿಹೃದಯವನ್ನು ತಮ್ಮ ಕವನಗಳಲ್ಲಿ ಹೊನಲಾಗಿ ಹರಿಸಿರುವ ಶ್ರೀ ರಾಯರು ಪ್ರತಿ ಕವನಕ್ಕೂ ಒಪ್ಪುವಂತಹ ರಾಗವನ್ನು ಹಚ್ಚಿದ್ದಾರೆ. ಇದರಿಂದ ಗಮಕಿಗಳಿಗೆ ಸುಲಭವಾಗಿ ಹಾಡಲು ಅನುಕೂಲವಾಗಿದೆ.

ರಾಗ ತಾಳಗಳನ್ನು ಪ್ರತಿ ಕವನಕ್ಕೂ ಮೇಳವಿಸ್ಸಿರುವುದರಿಂದ ಈ ಸಂಕಲನದ ಉಪಯುಕ್ತತೆ ಹೆಚ್ಚಿದೆ ಎಂದು ಹೇಳಿದರೆ ತಪ್ಪಿಲ್ಲ.

ವಿಷಯವನ್ನು ಜೋಡಿಸಿರುವ ರೀತಿ ಅಷ್ಟು ಸಮರ್ಪಕವಾಗಿಲ್ಲ. ಪ್ರತಿ ವಿಧದ ಕವನಗಳನ್ನೂ ಒಂದೆಡೆ ಬರುವಂತೆ ಜೋಡಿಸಿ ವಿಭಾಗ ಮಾಡಿದ್ದರೆ ಹೆಚ್ಚಿನ ಉಪಯೋಗ ಕಾಣುತ್ತಿತ್ತು. ಭಕ್ತಿಗೀತೆಗಳು, ಸ್ವಾತಂತ್ರ್ಯ ಗೀತೆಗಳು ಇತ್ಯಾದಿ ಬೇರೆ ಬೇರೆಯಾಗಿ ಬರದೆ ಅಲ್ಲಲ್ಲಿ ಕಂಡುಬರುತ್ತವೆ. ಅಂದಮಾತ್ರಕ್ಕೆ ಈ ಸಂಕಲನದ ಉಪಯುಕ್ತತೆಯಾಗಲೀ ಸೊಗಸಾಗಲೀ ಯಾವ ರೀತಿಯಲ್ಲೂ ಕುಂಠಿತವಾಗಿಲ್ಲ.

ಗಮಕಿಗಳಿಗೆ ಉತ್ತಮವಾದ ಹಾಡುಗಳ ಸಂಕಲನವನ್ನು, ಕೇವಲ ಸಾಹಿತ್ಯ ಪ್ರೇಮಿಗಳಿಗೆ ಸುಂದರವಾದ ಕವನಗಳನ್ನು ಬರೆದು ಶ್ರೀ ರಾಘವೇಂದ್ರರಾಯರು ಬಹಳ ಉಪಕಾರ ಮಾಡಿದ್ದಾರೆ. ಶ್ರೀ ರಾಯರು ಸ್ವತಃ ಗಮಕಿಗಳ ಗುರುಗಳಾಗಿರುವುದರಿಂದಲೂ, ಈಗಾಗಲೇ ಗಮಕ ಕಲೆಯ ಬಗ್ಗೆ ದೀರ್ಘವೂ ಅಧಿಕಾರಯುತವೂ ಆದ ಗ್ರಂಥವೊಂದನ್ನು ಬರೆದಿರುವುದರಿಂದಲೂ, ಅವರ ಎಲ್ಲ ಕೃತಿಗಳಲ್ಲೂ ಅನುಭವಯುಕ್ತವಾದ ಬೇಕಾದ ಮಾರ್ಗದರ್ಶನ ಗಮಕಿಗಳಿಗೆ ಸಿಗುವುದೆಂಬುದರಲ್ಲಿ ಸಂದೇಹವಿಲ್ಲ.

ಈ ಕೃತಿಯು ಪ್ರತಿಯೊಬ್ಬ ಗಮಕ ಕಲಾಭಿಲಾಷಿಯೂ ಅಭ್ಯಾಸಮಾಡಲು ತಕ್ಕುದಾಗಿದೆ.

—ತೊ. ಸು. ಸುಬ್ರಹ್ಮಣ್ಯಂ

ಕನ್ನಡದ ಸುದ್ದಿಗಳು

ಬೆಂಗಳೂರು

ದಿನಾಂಕ ೨೧-೧೨-೬೧ ರಂದು ಮಲ್ಲೇಶ್ವರಂ ಕಾರ್ಪೊರೇಷನ್ ಪ್ರೌಢಶಾಲೆಯ ಕರ್ಣಾಟಕ ಸಂಘದ ವಾರ್ಷಿಕೋತ್ಸವ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರ ನೇತೃತ್ವದಲ್ಲಿ ನಡೆಯಿತು. ಶ್ರೀ ಶಾಸ್ತ್ರಿಗಳು ವಿದ್ಯಾರ್ಥಿಗಳಿಗೆ ಕನ್ನಡ ನಾಡು ನುಡಿಗಳ ಬಗೆಗೆ ಉಪದೇಶಿಸಿದರು.

ದಿನಾಂಕ ೬-೧-೬೨ ರಂದು ಬೆಂಗಳೂರು ಆಕಾಶವಾಣಿಯವರು 'ಕನ್ನಡ ನಾಡಿನ ಜಾನಪದ ಸಂಗೀತ ವಿಚಾರಗೋಷ್ಠಿ' ಏರ್ಪಡಿಸಿದ್ದರು. ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಉತ್ಸವವನ್ನು ಉದ್ಘಾಟಿಸಿದರು. ಶ್ರೀಗಳಾದ ಶಿವರಾಮ ಕಾರಂತ, ಬೆಟಗೇರಿ ಕೃಷ್ಣಶರ್ಮ, ಜಿ. ಎಸ್. ಪರಮಶಿವಯ್ಯ, ಜಿ. ಆರ್. ಹೆಗ್ಗಡೆ, ಕೆ. ವಿ. ಸೋಮಣ್ಣ, ಎಂ. ಡಿ. ಪಾರ್ಥಸಾರಥಿ ಮುಂತಾದವರು ಈ ಉತ್ಸವದಲ್ಲಿ ಭಾಗವಹಿಸಿ ಭಾಷಣ ಮಾಡಿದರು.

ಬೆಂಗಳೂರು ನಗರದ 'ಹೊಂಬೆಳಗು' ಮಾಸಪತ್ರಿಕೆಯವರು ಕಥಾಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಕಥೆಗಳನ್ನು ಕಳುಹಿಸಲಿಚ್ಛಿಸುವವರು ಫೆಬ್ರುವರಿ ೨೦ರ ಒಳಗಾಗಿ ಅದನ್ನು ತಲುಪಿಸಬೇಕೆಂದು ವ್ಯವಸ್ಥಾಪಕರು ತಿಳಿಸುತ್ತಾರೆ. ಪ್ರಥಮ ಬಹುಮಾನ ರೂ. ೭೫, ದ್ವಿತೀಯ ಬಹುಮಾನ ರೂ. ೪೫ ಮತ್ತು ತೃತೀಯ ಬಹುಮಾನ ರೂ. ೩೦ ಗಳೆಂದು ನಿರ್ಧರಿಸಲಾಗಿದೆ.

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂಬ ತತ್ವವನ್ನು ಒಪ್ಪಿಕೊಳ್ಳುವ ನಿರ್ಣಯವನ್ನು ಬೆಂಗಳೂರು ಕಾರ್ಪೊರೇಷನ್ ಇತ್ತೀಚೆಗೆ ತನ್ನ ಸಭೆಯೊಂದರಲ್ಲಿ ಒಪ್ಪಿಕೊಂಡಿದೆ.

ತುಮಕೂರು

ತುಮಕೂರು ಸರ್ಕಾರಿ ಪಾಠಶಾಲೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ದಿನಾಂಕ ೨೨-೧೨-೬೧ ರ ಸಂಜೆ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಅತಿಥಿಗಳು 'ವಿದ್ಯಾರ್ಥಿ ಧರ್ಮ' ಎಂಬ ವಿಷಯವಾಗಿ ಭಾಷಣ ಮಾಡಿದರು.

ಮದ್ರಾಸು

ದಿನಾಂಕ ೩೧-೧೨-೬೧ ರಂದು ಮದ್ರಾಸ್ ಕರ್ಣಾಟಕ ಸಂಘದ ವಾರ್ಷಿಕೋತ್ಸವವು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಹಿಂದಿನ ಅಧ್ಯಕ್ಷರಾದ ದಿವಂಗತ ಡಾ॥ ಯು. ರಾಮರಾಯರ ಹಾಗೂ ಶ್ರೀ ವಿ. ಎನ್. ಕುಡ್ವರವರ ಭಾವಚಿತ್ರಗಳ ಅನಾವರಣವನ್ನು ಮೈಸೂರಿನ ನ್ಯಾಯಾಂಗ ಸಚಿವ ಶ್ರೀ ವೈಕುಂಠ ಬಾಳಿಗಾ ಅವರು ನೆರವೇರಿಸಿದರು. ಸಂಘದ ಅಭಿವೃದ್ಧಿ ವಿಷಯಗಳನ್ನು ಕುರಿತು ಶ್ರೀ ಬಾಳಿಗಾ ಅವರೂ, ಕನ್ನಡ ಸಂಸ್ಕೃತಿಯ ವಿಷಯವಾಗಿ ಶ್ರೀ ಶಾಸ್ತ್ರಿಗಳೂ ಭಾಷಣ ಮಾಡಿದರು. ಕರ್ಣಾಟಕ ಸಂಘದ ನಿಧಿಗೆ ಶ್ರೀ ಬಾಳಿಗಾ ಅವರು ೧೦೧ ರೂ. ಕಾಣಿಕೆಯಿತ್ತರು. ಸಂಘದ ಪುಸ್ತಕಾಲಯಕ್ಕೆ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ೧೦೧ ಗ್ರಂಥಗಳನ್ನು ಕೊಟ್ಟರು.

ದಿನಾಂಕ ೨-೧-೬೨ ರಂದು ಮದ್ರಾಸ್ ಅಯಾವರಂ ಕನ್ನಡ ಸಂಘದಲ್ಲಿ ಕೈಲಾಸಂ ದಿನಾಚರಣೆಯು ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಾಗೂ ಕೈಲಾಸಂ ಭಾವಚಿತ್ರದ ಅನಾವರಣವೂ ನಡೆಯಿತು. 'ಕೈಲಾಸಂ ಕುರಿತು' ಭಾಷಣಗಳಾದವು. ಶ್ರೀ ಶಾಸ್ತ್ರಿಗಳು ಸಂಘಕ್ಕೆ ೧೦ ಪುಸ್ತಕಗಳನ್ನು ದೇಣಿಗೆಯಾಗಿ ಕೊಟ್ಟರು. ಶ್ರೀ ಶಾಸ್ತ್ರಿಗಳ ಗೌರವಾರ್ಥವಾಗಿ ಸಂಘದವರು ಭೋಜನಕೂಟವನ್ನು ಏರ್ಪಡಿಸಿದ್ದರು.

ಮೈಸೂರು

ದಿನಾಂಕ ೧೦-೧-೬೨ರಂದು ಮೈಸೂರು ಶಿವರಾತ್ರೀಶ್ವರ ವಿದ್ಯಾಪೀಠದಲ್ಲಿ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು "ಭಾರತದಲ್ಲಿ ಶಿವಗೀತೆ" ಎಂಬ ವಿಷಯವಾಗಿ ಭಾಷಣ ಮಾಡಿದರು.

ಈ ನಗರದಲ್ಲಿ 'ಕನ್ನಡ ಕಲಾಭಿಮಾನಿಗಳ ಸಂಘ' ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಕನ್ನಡ ನಾಡಿನ ಸಂಸ್ಕೃತಿ, ಚಿತ್ರರಂಗ, ಲಲಿತಕಲೆ ಹಾಗೂ ಸಾಹಿತ್ಯಗಳಿಗೆ ಒದಗಿರುವ ಧಕ್ಕೆಯನ್ನು ನಿವಾರಿಸುವುದೇ ಈ ಸಂಘದ ಧ್ಯೇಯವಾಗಿದೆ. ೬೧-೬೨ನೇ ಸಾಲಿಗೆ ಶ್ರೀ ಎಚ್. ಎಲ್. ನಾರಾಯಣರಾವ್ ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀಗಳಾದ ಕೆ. ಎಸ್. ಮೂರ್ತಿ ಮತ್ತು ಎಂ. ಸಿ. ಮದನ್ ಇವರು ಕಾರ್ಯದರ್ಶಿಗಳು.

ಮಹಾರಾಜಾ ಕಾಲೇಜು ಕನ್ನಡ ಸಾಹಿತ್ಯ ಸಂಘದಲ್ಲಿ ದಿನಾಂಕ ೧೦ ರಂದು ಡಾ॥ ಕೆ. ವಿ. ಪುಟ್ಟಪ್ಪ ಅವರ ಭಾವಚಿತ್ರ ಅನಾವರಣ ಸಮಾರಂಭ ನಡೆಯಿತು. ಪ್ರಾಧ್ಯಾಪಕ ಶ್ರೀ ತೀ. ನಂ. ಶ್ರೀಕಂಠಯ್ಯನವರು ಭಾವಚಿತ್ರ ಅನಾವರಣ ಮಾಡಿದರು. ಪ್ರಾ॥ ಡಿ. ಎಲ್. ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಬ್ರಹ್ಮಾವರ

ಇಲ್ಲಿನ ಅಜಪುರ ಕರ್ನಾಟಕ ಸಂಘದವರು ಡಿಸೆಂಬರು ದಿನಾಂಕ ೧೬ರಂದು ಸಾಹಿತಿ ಶ್ರೀ ವಿ. ಸೀತಾರಾಮಯ್ಯನವರನ್ನು ಬರಮಾಡಿಕೊಂಡು ಮಾನಪತ್ರವನ್ನೊಪ್ಪಿಸಿ ಸನ್ಮಾನಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಉಡುಪಿಯ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೌಲಗಿ ಶೇಷಾಚಾರ್ಯರು ವಹಿಸಿದ್ದರು.

ಡಿಸೆಂಬರು ೧೮ರಂದು ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಮಾನಪತ್ರವನ್ನರ್ಪಿಸಿ ಗೌರವಿಸಲಾಯಿತು. ಉಡುಪಿಯ ಪುರಸಭಾಧ್ಯಕ್ಷ ಡಾ॥ ಕೆ. ಎಲ್. ಐತಾಳರು ಈ ಸಮಾರಂಭದ ಅಧ್ಯಕ್ಷರಾಗಿದ್ದರು.

ಸಂಪಾದಕೀಯ

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಕಳೆದ ತಿಂಗಳು ೨೭, ೨೮ ಮತ್ತು ೨೯ನೇ ತಾರೀಕುಗಳಲ್ಲಿ ನಲ್ವತ್ತು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಪ್ರಾ|| ಕೆ. ಜಿ. ಕುಂದಣಗಾರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು. ಸಮ್ಮೇಳನಾಧ್ಯಕ್ಷರು ಸುಮಾರು ಎರಡು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯ ಸಮೀಕ್ಷೆ ನಡೆಸಿ, ನಾಡು ನುಡಿಗಳ ಉತ್ಕರ್ಷಗಾಗಿ ಇಂದು ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸಿದರು. ಭಾವೈಕತೆ, ಜ್ಞಾನಸಾಹಿತ್ಯಸೃಷ್ಟಿ, ವಿಮರ್ಶೆ ಹಾಗೂ ಸಂಶೋಧನೆಗಳ ಬೆಳವಣಿಗೆ, ಶುಚಿ ಹಾಗೂ ಸತ್ವಯುತ ಸಾಹಿತ್ಯ ರಚನೆಯ ಅಗತ್ಯ-ಸಮ್ಮೇಳನಾಧ್ಯಕ್ಷರ ಭಾಷಣದ ಮುಖ್ಯಾಂಶಗಳೆನ್ನಬಹುದು. ಸಮ್ಮೇಳನದ ಉದ್ಘಾಟಕರಾದ ಶ್ರೀ ಗಣಮುಖಿ ಅಣ್ಣಾರಾಯರು ಸಮಾಜದ, ಕಾಲದ, ಆಹ್ವಾನವನ್ನು ಸಾಹಿತಿಗಳು ಸ್ವೀಕರಿಸಿ ನಾಡುನುಡಿಗಳ ಉನ್ನತಿಗಾಗಿ ಶ್ರಮಿಸಬೇಕೆಂದು ಮನವಿ ಮಾಡಿಕೊಂಡರು.

ಸಮ್ಮೇಳನದ ಅಂಗವಾಗಿ ನಡೆದ ವಿವಿಧಗೋಷ್ಠಿಗಳ ಅಧ್ಯಕ್ಷರು, ಪ್ರಸ್ತಾವನಾ ಭಾಷಣಕಾರರು, ಅವುಗಳಲ್ಲಿ ಭಾಗವಹಿಸಿದ ಸಾಹಿತಿಗಳು, ಕವಿಗಳು ಹಾಗೂ ಕಲಾವಿದರು ಸಂದರ್ಭಕ್ಕೆ ಸರಿಯಾಗಿ ತಮ್ಮ ಅಮೂಲ್ಯ ವಿಚಾರಗಳನ್ನು, ಸೂಚನೆಗಳನ್ನು ವ್ಯಕ್ತಪಡಿಸಿ ಸಮ್ಮೇಳನದ ಯಶಸ್ಸಿಗೆ ಕಾರಣರಾದರು.

ಇದೇ ಸಂದರ್ಭದಲ್ಲಿ ಜಗದ್ಗುರು ಶ್ರೀ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳವರು ಆಶೀರ್ವಚನವನ್ನು ಅಪ್ಪಣೆ ಕೊಡಿಸಿದ್ದೂ, ಕನ್ನಡ ನಾಡಿನ ಹೆಮ್ಮೆಯ ಪುತ್ರರಾದ ಶ್ರೀ ಹುಯಿಲಗೋಳ ನಾರಾಯಣರಾಯರಿಗೆ ಮತ್ತು ಪಂಡಿತ ಪುಟ್ಟರಾಜ ಗವಾಯಿಗಳವರಿಗೆ ಸನ್ಮಾನ ಪತ್ರಗಳನ್ನು ಅರ್ಪಿಸಿ ಗೌರವಿಸಿದ್ದೂ, ಸುಮಾರು ಎಂಟು ಸಾವಿರ ರೂಪಾಯಿಗಳ ವೆಚ್ಚದಿಂದ ಅತ್ಯಲ್ಪ ಅವಧಿಯಲ್ಲಿಯೇ ಕಾಟನ್ ಸೇಲ್ಸ್ ಸೊಸೈಟಿಯ ಆಡಳಿತ ಮಂಡಲಿಯವರು ಭವ್ಯವಾದ ಮತ್ತು ಶಾಶ್ವತವಾದ ಮಹಾಕವಿ ಚಾಮರಸ ಮಹಾದ್ವಾರವನ್ನು ನಿರ್ಮಿಸಿದ್ದೂ, ಸ್ಥಳೀಯ ವಿಜಯ ಕಲಾಮಂದಿರದವರು ಆಕರ್ಷಣೀಯ ಚಿತ್ರಕಲಾಪ್ರದರ್ಶನ ಏರ್ಪಡಿಸಿದ್ದೂ, ಸ್ವಾಗತ ಸಮಿತಿಯವರು ಪ್ರಕಟಿಸಿದ 'ಪ್ರಸಾದ' ಎಂಬ ಸಮ್ಮೇಳನ ಸಂಚಿಕೆಯು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ವಿದ್ಯಾರ್ಥಿಗಳು ಪ್ರಾ|| ಕುಂದಣಗಾರರ ಲೇಖನಗಳ ಸಂಕಲನವಾದ 'ಕುಂದಣ' ಎಂಬ ಗ್ರಂಥವನ್ನು ಸಮ್ಮೇಳನಾಧ್ಯಕ್ಷರಿಗೆ ಅರ್ಪಿಸಿದ್ದೂ ಈ ಸಮ್ಮೇಳನದ ವೈಶಿಷ್ಟ್ಯ ವಿಶೇಷಗಳೆನ್ನಬೇಕು.

ಸಮ್ಮೇಳನಾಧ್ಯಕ್ಷರು, ಉದ್ಘಾಟಕರು, ವಿವಿಧ ಗೋಷ್ಠಿಗಳ ಅಧ್ಯಕ್ಷರು, ಪ್ರಸ್ತಾವನಾ ಭಾಷಣಕಾರರು, ಇನ್ನಿತರ ಉಪನ್ಯಾಸಕರು, ಕವಿಗಳು, ಕಲಾವಿದರು, ಸಮ್ಮೇಳವನ್ನು ನಡೆಸಲು ಮುಂದೆ ಬಂದು ಅಲ್ಪ ಸಮಯದಲ್ಲಿಯೇ ಅದನ್ನು ಯಶಸ್ವಿಯಾಗಿ ವ್ಯವಸ್ಥೆಗೊಳಿಸಿದ ಸ್ವಾಗತ ಸಮಿತಿಯವರು, ಅವರಿಗೆ ಸಹಕಾರ ನೀಡಿದ ಗದಗಿನ ಮಹಾಜನರು, ಪ್ರೇಕ್ಷಕರು, ಪತ್ರಿಕಾಕರ್ತರು ಮೊದಲಾದವರೆಲ್ಲರೂ ಅಭಿನಂದನಾರ್ಹರು.

ಮೂರು ದಿನಗಳ ಕಾರ್ಯಕಲಾಪಗಳು, ಸ್ವಾಗತ ಸಮಿತಿಯ ತ್ರಿಮೂರ್ತಿಗಳಂತಿದ್ದ ಶ್ರೀಗಳಾದ ಕೆ. ಎಚ್. ಪಾಟೀಲರು, ಕೆ. ಎಂ. ಕಣವಿಯವರು ಮತ್ತು ಸಿ. ಎಸ್. ಪಾಟೀಲರು ಹಾಗೂ ಅವರ ಸಂಗಡಿಗರ ದಣಿವರಿಯದ ದುಡಿತದಿಂದಲೂ, ಪರಿಷತ್ತಿನ ಅಧಿಕಾರಿಗಳ ಸಮರ್ಥ ಮಾರ್ಗದರ್ಶನದಿಂದಲೂ ಮತ್ತು ಈಶ್ವರೀಕೃಪೆಯಿಂದಲೂ ಶಿಸ್ತು, ಶಾಂತಿಗಳಿಂದ ಹಾಗೂ ಸಕ್ರಮವಾಗಿ ನಡೆದವು. ಕೊನೆಯಲ್ಲಿ ಮಹತ್ತ್ವಪೂರ್ಣವಾದ ಕೆಲವು ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದುವು.

ಒಟ್ಟಿನಲ್ಲಿ, ಸಮ್ಮೇಳನವು ಯಶಸ್ವಿಯಾಗಿ ನಡೆಯಿತು. ಈ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಕನ್ನಡ 'ನುಡಿ' ತನ್ನ ಧನ್ಯವಾದಗಳನ್ನು ಸಲ್ಲಿಸುತ್ತದೆ.

ಮುಂದೆ ಸಮ್ಮೇಳನ ನಡೆಸುವ ವಿಚಾರದಲ್ಲಿ ಸಮ್ಮೇಳನಾಧ್ಯಕ್ಷರು ಮಾಡಿರುವ ಸಲಹೆ ನಿಜವಾಗಿಯೂ ಗಮನಾರ್ಹವಾಗಿದೆ. ಸಮ್ಮೇಳನವು ಮೂರು ದಿನಗಳ ಕನ್ನಡ ಜಾತ್ರೆಯಾಗದೆ, ಭಾಷೆ, ಸಾಹಿತ್ಯ, ಕಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕುರಿತು ಬಿಚ್ಚು ಮನಸ್ಸಿನಿಂದ ಚರ್ಚಿಸಿ, ಅವುಗಳ ಪರಿಹಾರಕ್ಕಾಗಿ ಸೂಕ್ತವಾದ

ಯೋಜನೆಯನ್ನು ಸಿದ್ಧಪಡಿಸಿ ನಾಡಿನ ಎದುರಿಗೆ ಇಡಬಲ್ಲ ಭಾಷಾ ಪಂಡಿತರು, ಸಾಹಿತಿಗಳು, ಕವಿಗಳು, ವಿಮರ್ಶಕರು, ಕಲಾಪ್ರವೀಣರು, ಸಾಹಿತ್ಯ ಪ್ರೇಮಿಗಳು ಮೊದಲಾದವರ ವಾರ್ಷಿಕಮೇಳವಾಗುವುದು ಮೇಲು. ಸಾಮಾನ್ಯ ಜನಾಕರ್ಷಣೆ ಹಾಗೂ ಜನರಂಜನೆಗಾಗಿ ವಿಶೇಷ ಸಾಹಿತ್ಯೋತ್ಸವಗಳನ್ನು ವರ್ಷದಲ್ಲಿ ಕೆಲವು ಕಡೆಗಳಲ್ಲಿ ಏರ್ಪಡಿಸಲು ಸಾಧ್ಯವಿದೆ. ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ಶಿಕ್ಷಣ ಸಂಸ್ಥೆಗಳು ಮುಂದೆ ಬಂದಷ್ಟೂ ಕ್ಷೇಮ. ಸಮ್ಮೇಳನಾಧ್ಯಕ್ಷರ ಈ ಸೂಚನೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯವರು ಗಮನಿಸಿ ಸೂಕ್ತ ಕ್ರಮಗಳನ್ನು ಕೈಕೊಳ್ಳುವುದು ವಿಹಿತವೆಂದು ನಾವಿಲ್ಲಿ ಸೂಚಿಸದೆ ಇರಲಾರೆವು. ಪರಿಷತ್ತಿನ ಸದಸ್ಯರು ಕೂಡ ಈ ದಿಶೆಯಲ್ಲಿ ವಿಚಾರಿಸಿ ಸಮ್ಮೇಳನವು ಫಲಪ್ರದವಾಗುವಂತಹ ಒಂದು ಯೋಜನೆಯನ್ನು ರೂಪಿಸಲು ಸಹಕಾರ ನೀಡುವರೆಂದು ನಾವು ನಂಬುತ್ತೇವೆ.

ಗೋವಾ ವಿಮೋಚನೆ

ಭಾರತದ ಒಂದು ಭಾಗವಾಗಿದ್ದು ಕರ್ಣಾಟಕದ ಅಂಚಿನಲ್ಲಿರುವ ಗೋವಾ ಪ್ರಾಂತವು ಪರಕೀಯ ಆಡಳಿತದಿಂದ ಬಿಡುಗಡೆ ಪಡೆಯಿತು. ಈ ಮಹತ್ ಸಾಧನೆಗೆ ಕಾರಣರಾದ ರಾಷ್ಟ್ರೀಯ ಗೋಮಂತಕರೂ, ಹುತಾತ್ಮರೂ, ಭಾರತೀಯ ಸೈನಿಕರೂ, ಹಾಗೂ ಕೇಂದ್ರ ಸರ್ಕಾರದವರೂ ಅಭಿನಂದನಾರ್ಹರು. ಮಿಂಚಿನ ವೇಗದಲ್ಲಿ ಗೋವಾ ವಿಮೋಚನೆಗೊಳಿಸಿದ ಭಾರತೀಯ ಸೈನಿಕರು ತಮ್ಮಲ್ಲಿರುವ ಅಗಾಧವಾದ, ಅದಮ್ಯವಾದ, ಅಜೇಯವಾದ ಸೈನಿಕ ಶಕ್ತಿಯನ್ನು ಲೋಕಕ್ಕೆ ಪ್ರದರ್ಶಿಸಿದ್ದಾರೆ. ಭಾರತದ ಈ ಕ್ರಮಕ್ಕೆ ಬೆಂಬಲವನ್ನಿತ್ತ ರಷ್ಯಾ, ಚೀಣ, ಈಜಿಪ್ಟ್, ಇರಾಕ್, ಸಿಲೋನ್, ಬರ್ಮ, ಇಂಡೋನೇಷಿಯಾ ಮೊದಲಾದ ರಾಷ್ಟ್ರಗಳ ಉಪಕಾರವು ಸ್ಮರಣಾರ್ಹವಾಗಿದೆ. ಭಾರತೀಯ ಕ್ರಮವನ್ನು ಖಂಡಿಸಿ, ಅಮೇರಿಕಾ, ಬ್ರಿಟನ್, ಫ್ರಾನ್ಸ್ ಮೊದಲಾದ ಕೆಲವು ಹಿರಿಯ ರಾಷ್ಟ್ರಗಳು ಜಗತ್ತಿಗೆ ತಮ್ಮ ಗೋಮುಖವ್ಯಾಘ್ರತೆಯ ಪರಿಚಯ ಮಾಡಿಕೊಟ್ಟಿವೆ, ಎಂದು ಹೇಳಬಹುದು.

ಗೋವಾ ಐತಿಹಾಸಿಕವಾಗಿಯೂ, ಭೌಗೋಲಿಕವಾಗಿಯೂ ಕರ್ನಾಟಕದ ಅವಿಭಾಜ್ಯ ಅಂಗ. ಸ್ವತಂತ್ರ ಗೋವಾ ಕರ್ನಾಟಕದಲ್ಲಿ ವಿಲೀನವಾಗಲಿ, ಎಂದು ಹಾರೈಸಿದ ಸಮ್ಮೇಳನಾಧ್ಯಕ್ಷರೊಂದಿಗೆ ನಾವೂ ದನಿಗೂಡಿಸುತ್ತೇವೆ.

ಗ್ರಂಥಾಲಯ 2434 ಬೆಂಗಳೂರು-19

೪೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ.

ಭಾಷಣಗಳು: ೧) ಅಧ್ಯಕ್ಷರ ಭಾಷಣ.

೨) ಶುಭಾಶೀರ್ವಚನ.

೩) ಸ್ವಾಗತಾಧ್ಯಕ್ಷರ ಭಾಷಣ.

೪) ಉದ್ಘಾಟನಾ ಭಾಷಣ.

೫) ಸನ್ಮಾನಪತ್ರ ಸಮರ್ಪಣ.

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಲನ, ಗದಗ

ತಾ|| ೨೭—೧೨—೧೯೬೧

2434

ಶ್ರೀ ಕೆ. ಜಿ. ಕುಂದಣಗಾರ, ಎಂ. ಎ.

ಅವರ

ಅಧ್ಯಕ್ಷ ಭಾಷಣ

ಸಾಹಿತ್ಯ ಸಮ್ಮೇಲನದ ಉದ್ಘಾಟನ ಸಮಾರಂಭಕ್ಕಾಗಿ ಆಗಮಿಸಿದ ಮಹಾನುಭಾವರೆ,
ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳೆ,
ಸ್ವಾಗತಾಧ್ಯಕ್ಷರೆ, ಕನ್ನಡ ನಾಡಿನ ಹಿರಿಕಿರಿಯ ಸಹೋದರರೆ, ಸಹೋದರಿಯರೇ,

೪೩ನೆಯ ಕನ್ನಡ ಸಾಹಿತ್ಯ ಸಮ್ಮೇಲನವು ಕನ್ನಡ ಸಾರಸ್ವತ ಪ್ರಪಂಚದ ಪುಣ್ಯಕ್ಷೇತ್ರಗಳಲ್ಲಿ ಒಂದಾದ ಕೃತಪುರದಲ್ಲಿ ನೇರವೇರುತ್ತಿರುವುದು ಅತ್ಯಂತ ಮಂಗಲಕರವಾಗಿದೆ. ಆದರೆ, ಈ ಸಮ್ಮೇಲನಾಧ್ಯಕ್ಷತೆಯ ಗುರುತರ ಭಾರವು ವೃದ್ಧನಾದ ನನ್ನಮೇಲೆ ಬಂದಿದೆ. ಈ ಹೊಣೆಯನ್ನು ನನಗಿಂತಲೂ ಹೆಚ್ಚು ಸಮರ್ಥರಾದವರು ನಿರ್ವಹಿಸಿದ್ದರೆ ನೆಟ್ಟಗಾಗುತ್ತಿತ್ತು. ನಾಡಿನ ಕರೆಗೆ ಓಗೊಡುವುದು ನನ್ನ ಕರ್ತವ್ಯವೆಂದು ಭಾವಿಸಿ, ಕನ್ನಡ ತಾಯಿಯ ಅಡಿಗೆ ನಮಸ್ಕರಿಸಿ ಈ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ್ದೇನೆ. ತಮ್ಮೆಲ್ಲರ ಸಹಾಯ, ಸಹಕಾರ, ಸಹಾನುಭೂತಿಗಳಿಂದ ಈ ಸಮ್ಮೇಲನವು ಯಶಸ್ವಿಯಾಗಲೆಂದು ಪ್ರಾರ್ಥಿಸುತ್ತೇನೆ.

ಕನ್ನಡವು ಭಾರತದ ಗಣ್ಯಭಾಷೆಗಳಲ್ಲಿ ಒಂದು. ಅದಕ್ಕೆ ಸುಮಾರು ಎರಡು ಸಾವಿರ ವರುಷಗಳ ಇತಿಹಾಸವಿದೆ; ಉಜ್ವಲವಾದ ಸಾಹಿತ್ಯಪರಂಪರೆ ಇದೆ; ಉನ್ನತವಾದ ಸಂಸ್ಕೃತಿ ಇದೆ. ಸಮ್ಮೇಲನದ ಮಂಗಲ ಸಮಯದಲ್ಲಿ ನಮ್ಮ ಪರಂಪರೆಯನ್ನು ಸಂಸ್ಮರಣೆಗೈದು, ಮುಂದಿನ ಮಾರ್ಗವನ್ನು ಕಂಡುಕೊಳ್ಳುವುದು ಸೂಕ್ತವೆನಿಸಿದೆ. ಕನ್ನಡ ನಾಡು-ನುಡಿಗಳ ಅಸ್ತಿತ್ವವನ್ನು ಎತ್ತಿಹೇಳುವ ಉಲ್ಲೇಖಗಳು ಕ್ರಿ. ಶ. ಪೂ. ಸು. ೩ನೆಯ ಶತಮಾನದಿಂದ ಗೋಚರವಾಗುತ್ತವೆ. ಈ ನಾಡಿನ ಜನ ಒಂದು ಜನಾಂಗವಾಗಿ ಸುವ್ಯವಸ್ಥಿತವಾದ ಜೀವನವನ್ನು ಅಷ್ಟು ಪೂರ್ವದಲ್ಲಿಯೇ ಸಾಗಿಸುತ್ತಿದ್ದಿತೆಂಬ ವಿಷಯ ಅತ್ಯಂತ ಅಭಿಮಾನಾಸ್ಪದವಾದುದು. ಆದರೆ ನಮ್ಮ ಸಂಶೋಧನೆ ಇನ್ನೂ ಬಲಪಟ್ಟು ಗತಕಾಲದ ಆ ಗುರುತುಗಳನ್ನು ಕಂಡುಹಿಡಿಯಬೇಕಾಗಿದೆ. ಮಸ್ಕಿ, ಸಿದ್ಧಾಪುರ, ಕೊಪ್ಪಳ, ಬನವಾಸಿ ಮುಂತಾದ ಕಡೆಗಳಲ್ಲಿ ದೊರೆತ ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳಿಂದ ಈ ನಾಡು ಆತನ ಧರ್ಮದೃಷ್ಟಿಗೂ ರಾಜ್ಯಕೀಯ ಪುಷ್ಟಿಗೂ ಒಳಗಾಗಿತ್ತೆಂದು ನಿರ್ದಿಷ್ಟವಾಗಿ

ಹೇಳಬಹುದು. ಶಾತವಾಹನರ ಆಳಿಕೆಯಲ್ಲಿ ಈ ನಾಡಿನ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆ ಇನ್ನೂ ಹೆಚ್ಚು ಸುವ್ಯವಸ್ಥಿತವಾಗಿರಬೇಕೆಂದು ಚಿಪಳೂಣ ಘಟ್ಟ ಹಾಗೂ ನಾನಾಘಟ್ಟಗಳ ಗುಹೆಗಳಲ್ಲಿರುವ ಶಾಸನಗಳು ಸಾರಿ ಹೇಳುತ್ತವೆ. ದಕ್ಷಿಣಕನ್ನಡದ ಧರ್ಮಗುಪ್ತ, ಬ್ರಹ್ಮಗುಪ್ತ ಎಂಬ ವರ್ತಕರು ಮುಂಬಾಪುರಿಯಲ್ಲಿ ವ್ಯಾಪಾರ ಮಾಡುವುದಕ್ಕೋಸ್ಕರ ನಿರ್ಮಿಸಿಕೊಂಡ ಬ್ಯಾಂಕಿನ ವ್ಯವಸ್ಥೆಯ ಉಲ್ಲೇಖ ಈ ಶಾಸನಗಳಲ್ಲಿ ವಿವರವಾಗಿ ಬಂದಿದೆ. ಶಾತವಾಹನರು ಆಂಧ್ರಭೃತ್ಯರೆಂದು ಕರೆಯಿಸಿಕೊಂಡರೂ ಅವರದೊಂದು ಸ್ವತಂತ್ರವಾದ ರಾಜಮನೆತನ. ಕ್ರಿ. ಶ. ಪೂ. ೧೫೦ ರಿಂದ ಕ್ರಿ ಶ. ೨೦೦ ರ ವರೆಗೆ, ೪೦೦ ವರ್ಷ ಶಾತವಾಹನರು ದಕ್ಷಿಣ ಭರತಖಂಡದ ವಿಸ್ತಾರವಾದ ಭಾಗವನ್ನು ಆಳಿರುವರು. ಅವರ ರಾಜ್ಯ ಉತ್ತರಕ್ಕೆ ಗೋದಾವರಿಯ ವರೆಗೂ ದಕ್ಷಿಣಕ್ಕೆ ಕನ್ಯಾಕುಮಾರಿಯ ವರೆಗೂ ಹಬ್ಬಿದ್ದಿತು. ಅವರ ಶಾಸನಗಳ ಹಾಗೂ ನಾಣ್ಯಗಳ ಭಾಷೆ ಮುಖ್ಯವಾಗಿ ಪಾಲಿ. ಅವರಿಂದ ಪೋಷಣೆಗೊಂಡುದು ಬೌದ್ಧಧರ್ಮ. ಶಾತವಾಹನರ ಕಾಲದಲ್ಲಿ ಕರ್ನಾಟಕವು ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾಗಿತ್ತೆಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಆ ಕಾಲದ ಕನ್ನಡಭಾಷೆಯ ಸ್ಥಿತಿಗತಿಗಳೇನು? ಜನಜೀವನದ ರೀತಿನೀತಿಗಳೇನು? ಕನ್ನಡ ಸಾಹಿತ್ಯವೆಂಬುದು ಉದಯವಾಗಿದ್ದಿತೆ? ಎಂಬಿವೇ ಮೊದಲಾದ ಪ್ರಶ್ನೆಗಳು ಇನ್ನೂ ಒಡೆಯಲಾರದ ಒಗಟುಗಳಾಗಿವೆ. ಕವಿರಾಜಮಾರ್ಗದ ಪೂರ್ವದ ಕೆಲವು ಕನ್ನಡ ಕವಿಗಳಲ್ಲಿ ನಾಗಾರ್ಜುನನೆಂಬ ಒಬ್ಬ ಕವಿಯಿದ್ದನೆಂದು ತಿಳಿದುಬರುತ್ತದೆ. ನಾಗಾರ್ಜುನ ಎಂಬುದು ಬೌದ್ಧರಲ್ಲಿ ಬಹು ಪ್ರಚಲಿತವಾದ ಹೆಸರು. ಇದರಿಂದ ಬೌದ್ಧರೂ ಕನ್ನಡ ಸಾಹಿತ್ಯ ರಚನೆಯ ಕಾರ್ಯಕ್ಕೆ ಕೈಹಾಕಿರಬಹುದೇ ಎಂದು ಊಹಿಸಲು ಅವಕಾಶವಿದೆ.

ಶಾತವಾಹನರ ನಂತರದ ಕರ್ನಾಟಕದ ಇತಿಹಾಸ ಹೆಚ್ಚು ಸ್ಪಷ್ಟವಾಗಿಯೂ ಉಜ್ವಲವಾಗಿಯೂ ಇದೆ. ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದವರು ಕಟ್ಟಿದ ಸಾಮ್ರಾಜ್ಯಗಳು; ರಟ್ಟರು, ಶಿಲಾಹಾರರು, ಕೆಳದಿ, ಬೀಳಗಿ, ಇಕ್ಕೇರಿ, ಸ್ವಾದಿ, ಕಿತ್ತೂರು, ಮೈಸೂರು ಈ ರಾಜಮನೆತನಗಳು ಆಳಿದ ರಾಜ್ಯಗಳು ಕರ್ನಾಟಕದ ಇತಿಹಾಸದಲ್ಲಿ ದೇದೀಪ್ಯಮಾನವಾಗಿ ಬೆಳಗುತ್ತಲಿವೆ. ಅವರು ಸಲ್ಲಿಸಿದ ಸೇವೆ ಅವರ್ಣನೀಯವಾದುದು. ಚಾಲುಕ್ಯರು, ರಾಷ್ಟ್ರಕೂಟರು ಹಾಗೂ ವಿಜಯನಗರದ ದೊರೆಗಳ ಕಾಲದಲ್ಲಿ ಕರ್ನಾಟಕವು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿತ್ತೆಂಬುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಕರ್ನಾಟಕದ ದೊರೆಗಳ ರಾಜ್ಯಕೀಯ ಬಲ, ಧಾರ್ಮಿಕ ನಿಷ್ಠೆ, ಕಲಾಪ್ರೇಮ ಇವು ಅಪ್ರತಿಮವಾಗಿವೆ. ಭಾರತದ ಪ್ರಾಚೀನ ಇತಿಹಾಸದಲ್ಲಿ ಕರ್ನಾಟಕದ ರಾಜಮನೆತನಗಳ ಸ್ಥಾನ ಗುರುತರವಾಗಿದೆ. ಭರತಖಂಡದ ಚರಿತ್ರೆಯನ್ನು ಬರೆದ ಅನೇಕ ಪಾಶ್ಚಾತ್ಯ ಹಾಗೂ ಭಾರತೀಯ ಇತಿಹಾಸಜ್ಞರು ಕರ್ನಾಟಕದ ಸಾಮ್ರಾಜ್ಯಗಳ ಕಡೆಗೆ ವಿಶೇಷವಾಗಿ ಗಮನ ಕೊಟ್ಟಿಲ್ಲ. ಕರ್ನಾಟಕದ ಇತಿಹಾಸವನ್ನು ಪೂರ್ತಿಯಾಗಿ ಗಮನಿಸದೆ ಹೋದರೆ, ಭಾರತದ ಚರಿತ್ರೆ ಪರಿಪೂರ್ಣವಾಗಲಾರದು.

ಕರ್ನಾಟಕದ ದೊರೆಗಳ ದೃಷ್ಟಿ ವಿಶಾಲವಾಗಿದ್ದಿತು. ಅವರ ಉದಾರವಾದ ಆಶ್ರಯದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದಿದೆ. ಈ ಸಾಹಿತ್ಯವು ಪ್ರಾಚೀನತೆಯ ದೃಷ್ಟಿಯಿಂದ ಭಾರತದ ಮುಖ್ಯ ಭಾಷೆಗಳಲ್ಲಿ ಮೂರನೆಯದಾಗಿದೆ. ಸಂಸ್ಕೃತ, ತಮಿಳುಗಳಿಗೆ ಹೆಚ್ಚಿನ ಪ್ರಾಚೀನತೆ ಇದೆ—ಎಂಬುದು ಸರ್ವಶ್ರುತವಾದುದು. ಕನ್ನಡ ಸಾಹಿತ್ಯಗಂಗೆ ಕ್ರಿ. ಶ. ೫ನೆಯ ಶತಮಾನದಿಂದ ಇಂದಿನ ವರೆಗೆ ಅವ್ಯಾಹತವಾಗಿ ಹರಿದು ಬಂದಿದೆ. ಸು. ೧೫೦೦ ವರ್ಷಗಳ ಸಾಹಿತ್ಯವನ್ನು ಇಲ್ಲಿ ಸಂಪೂರ್ಣವಾಗಿ ವಿವರಿಸುವುದು ಸಾಧ್ಯವಿಲ್ಲ. ಅದರ ನೆಲೆ-ಬೆಲೆಗಳನ್ನು ಮಾತ್ರ ಸೂಚ್ಯವಾಗಿ ಹೇಳಬಯಸುತ್ತೇನೆ.

ಕನ್ನಡದಲ್ಲಿದ್ದಿರಬಹುದಾದ ಬೌದ್ಧ ಸಾಹಿತ್ಯದ ವಿಷಯವಾಗಿ ಊಹಿಸಬಹುದೇ ಹೊರತು, ನಿರ್ದಿಷ್ಟವಾಗಿ ಏನನ್ನೂ ಹೇಳಬರುವಂತಿಲ್ಲ. ಆದರೆ ಜೈನಧರ್ಮದ ಮಾತು ಹಾಗಲ್ಲ. ಈ ಧರ್ಮ ಕರ್ನಾಟಕಕ್ಕೆ ಹೊರಗಿನಿಂದ ಬಂದರೂ ಅದು ಮತಪ್ರಚಾರಕ್ಕೆ ಇಲ್ಲಿಯ ಮನೆಮಾತನ್ನೆತ್ತಿಕೊಂಡು, ಮಾತನಾಡುವ ಭಾಷೆಗೆ ಗ್ರಂಥಸ್ವರೂಪವನ್ನು

ತಂದುಕೊಟ್ಟಿತು; ಕನ್ನಡ ಸಾಹಿತ್ಯದ ಉಗಮಕ್ಕೂ ವಿಕಾಸಕ್ಕೂ ಕಾರಣವಾಯಿತು. ಜೈನ ಕವಿಗಳು ಶರೀರ, ಮನಸ್ಸು, ಬುದ್ಧಿ ಇವುಗಳಿಗೆ ಪೋಷಕವಾಗುವ ಸಾಹಿತ್ಯವನ್ನು ನಿರ್ಮಿಸಿದರು. ಶರೀರಶಾಸ್ತ್ರವನ್ನು ವಿವರಿಸುವ "ಲೋಕೋಪಕಾರಕ" ಹಯಶಾಸ್ತ್ರ, ಗಜಶಾಸ್ತ್ರ, ಗೋಶಾಸ್ತ್ರ ಮೊದಲಾದ ಗ್ರಂಥಗಳನ್ನು ಜೈನರು ಕಾಲಕಾಲಕ್ಕೆ ಕನ್ನಡದಲ್ಲಿ ಬರೆಯುತ್ತ ಬಂದಿರುವರು. ಕನ್ನಡದ ಜೈನ ಕವಿಗಳಿಗೆ ಪೂಜ್ಯರಾದ ಪೂಜ್ಯಪಾದ, ಸಮಂತಭದ್ರರ ಲೋಕೋಪಕಾರಕಗಳು ಭಾರತೀಯ ಆಯುರ್ವೇದಶಾಸ್ತ್ರದಲ್ಲಿ ಪ್ರಖ್ಯಾತರಾದ ಚರಕ, ಶುಶ್ರೂತ ಸಂಹಿತೆಗಳಿಗೆ ಆಧಾರವಾಗಿವೆ. ಮಾನಸಿಕ ಶುದ್ಧೀಕರಣಕ್ಕಾಗಿ ಅವರು ಪುರಾಣ ಗ್ರಂಥಗಳನ್ನು ರಚಿಸಿದ್ದಾರೆ. ತೀರ್ಥಂಕರರ ಚರಿತ್ರೆಗಳನ್ನು ವಿವರಿಸುವ ಈ ಪುರಾಣ ಕಾವ್ಯಗಳು—

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದೆಂದು

ಬೋಧಿಸಿ, ಜೀವನದಲ್ಲಿ ವೈರಾಗ್ಯಭಾವವನ್ನು ಹುಟ್ಟಿಸುತ್ತವೆ. ಭವಾವಳಿಯನ್ನು ಹೇಳುವಲ್ಲಿ ಈ ಕಾವ್ಯಗಳು ಲೌಕಿಕಾನಂದವನ್ನೂ, ವೈರಾಗ್ಯಜೀವನ ಹಾಗೂ ಅರ್ಹಂತ ಸ್ಥಿತಿಗಳನ್ನು ವರ್ಣಿಸುವಲ್ಲಿ ಪಾರಲೌಕಿಕ ಆನಂದವನ್ನೂ ಬಿತ್ತರಿಸುತ್ತವೆ. ಜೈನ ಪುರಾಣಗಳು ಸಹಸ್ರಸ್ತಂಭದ ಬಸದಿಗಳಿದ್ದಂತೆ. ಜೀವನದ ಸಮಗ್ರತೆಯೇ ಅವುಗಳಲ್ಲಿ ಮೈವೆತ್ತು ನಿಂತಿರುವುದು.

ಕನ್ನಡ ಜೈನಸಾಹಿತ್ಯದ ಮಾತನ್ನೆತ್ತಿದಾಗ ಪಂಪ, ರನ್ನ, ಜನ್ನ, ನಾಗಚಂದ್ರ, ರತ್ನಾಕರವರ್ಣಿಗಳಂತಹ ಉದ್ದಾಮ ಕವಿಗಳ ಹೆಸರುಗಳು ನಮ್ಮ ಮುಂದೆ ಬಂದು ನಿಲ್ಲುತ್ತವೆ. ಈ ಕವಿಗಳು ಜೈನಸಾಹಿತ್ಯಕ್ಕಷ್ಟೇ ಏಕೆ? ಅಖಂಡವಾದ ಕನ್ನಡ ಸಾಹಿತ್ಯಕ್ಕೆ ಮಕುಟಮಣಿಯಂತಿದ್ದಾರೆ. ಪಂಪನ ಕಾವ್ಯದೃಷ್ಟಿ, ಧರ್ಮದೃಷ್ಟಿ, ಗೀರ್ಗುಂಫನ; ರನ್ನನ ಕಾವ್ಯಶಕ್ತಿ, ಜನ್ನನ ಪಾತ್ರಸೃಷ್ಟಿ, ರತ್ನಾಕರವರ್ಣಿಯ ಯೋಗ-ಭೋಗ ಸಮನ್ವಯದೃಷ್ಟಿ ನಿತ್ಯನೂತನವಾಗಿವೆ—ಶಾಶ್ವತವಾಗಿವೆ.

ವೀರಶೈವ ಕನ್ನಡನಾಡಿನಲ್ಲಿಯೇ ಹುಟ್ಟಿ ಕನ್ನಡಿಗರ ಜೀವನೋದ್ಧಾರಕ್ಕಾಗಿ ಪಣತೊಟ್ಟು ನಿಂತ ಧರ್ಮ. ಆ ಧರ್ಮದ ಉದಯವಾದೊಡನೆ ಕನ್ನಡ ಸಾಹಿತ್ಯದ ಸ್ವರೂಪವೇ ಬೇರೆಯಾಯಿತು. ಗಾತ್ರದಲ್ಲಿಯೂ ಸತ್ವದಲ್ಲಿಯೂ ಕನ್ನಡಸಾಹಿತ್ಯ ಹಿರಿದಾಗುವಂತೆ ಮಾಡಿದ ಶ್ರೇಯಸ್ಸು ವೀರಶೈವ ಶರಣರಿಗೂ—ಕವಿಗಳಿಗೂ ಸಲ್ಲುತ್ತದೆ ಅಸಂಖ್ಯಾತರಾದ ಶಿವಶರಣರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಮಹಾದೇವಿಯಕ್ಕ, ಸಿದ್ಧರಾಮೇಶ್ವರ ಇವರೇ ಮೊದಲಾದವರ ಹೆಸರುಗಳು ಚಿರಸ್ಥಾಯಿಯಾಗಿವೆ. ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆಯಲರ್ಹವಾದ ವಚನವಾಙ್ಮಯ ಉದಯವಾದುದು ಈ ಶಿವಶರಣರ ಪರುಷಹಸ್ತದಲ್ಲಿ. ಜೀವನವನ್ನು ಅರೆದುನೋಡಿ, ಒರೆದು ನೋಡಿ ಶಿವಶರಣರು ಅದರ ಹೊಸಮೌಲ್ಯವನ್ನು ಕಂಡರು; ನೂತನ ಸಮಾಜವನ್ನು ನಿರ್ಮಿಸಿದರು. ಜಾತಿ ಮತ ಕುಲಗೋತ್ರಗಳ ಸೂತಕಗಳನ್ನು ಹರಿದರು. ಹೆಣ್ಣು-ಗಂಡೆಂಬ ಭೇದವನ್ನಳಿದರು. ಸಮತೆ, ಸತ್ಯ, ದಯೆ—ಇಂತಹ ತತ್ವಗಳನ್ನು ಆಧಾರವಾಗಿಟ್ಟುಕೊಂಡ ಈ ಶರಣಸಾಹಿತ್ಯ ವಿಶ್ವಮಾನ್ಯವಾಗಿದೆ. ವೀರಶೈವಯುಗದಲ್ಲಿ ಖ್ಯಾತಿವೆತ್ತ ಕವಿಗಳೆಂದರೆ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಭೀಮಕವಿ, ಚಾಮರಸ, ನಿಜಗುಣ ಶಿವಯೋಗಿ, ವಿರುಪಾಕ್ಷ ಪಂಡಿತ, ಷಡಕ್ಷರಿ ಮೊದಲಾದವರು. ವೀರಶೈವ ಕವಿಗಳ ಕೈಯಲ್ಲಿ ಕನ್ನಡ ಸಾಹಿತ್ಯದ ಅನೇಕ ಹೊಸ ಪ್ರಕಾರಗಳು ಉದಯವಾದವು—ಪರಿಪುಷ್ಟಿಗೊಂಡವು. ರಗಳೆ, ಷಟ್ಪದಿ, ತ್ರಿಪದಿ, ಹಾಡು ಮುಂತಾದ ಕಾವ್ಯರೂಪಗಳು ಕನ್ನಡದಲ್ಲಿ ಪ್ರಚುರವಾಗಿ ಕನ್ನಡ ಸಾಹಿತ್ಯ ದೇವಿಯು ಬೀದಿವರಿವ ಬೀರರ ಹೃದಯದವರೆಗೂ ಮನೆಯವರೆಗೂ ಬರುವಂತಾಯಿತು. ಜಲಪ್ರಪಾತದಂತಿರುವ ಹರೀಶ್ವರನ ಕಾವ್ಯಸ್ರೋತ, ಸತ್ಯಸೌಂದರ್ಯಗಳ ಸಾಕಾರ ಸ್ವರೂಪದಂತಿದ್ದ ರಾಘವಾಂಕನ ನಾಟ್ಯಪ್ರತಿಭೆ, ಮಾಧುರ್ಯ-ಗಾಂಭೀರ್ಯಗಳಿಂದ ಬಿಗಿವಡೆದ ಚಾಮರಸನ ಅಂತರ್ಮಾರ್ಗದೋಜೆ, ಶೃಂಗಾರ ಭಕ್ತಿಗಳ ಸಂಗಮವಾಗಿದ್ದ ಷಡಕ್ಷರದೇವನ ಕಾವ್ಯದ ಔನ್ನತ್ಯ, ಆಳ—ಇವು ಕನ್ನಡ ಸಾಹಿತ್ಯದ ನಿಜವಾದ ಅಗ್ಗಳಿಕೆಗಳು.

ವೈದಿಕವು ಭಾರತದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಕರ್ನಾಟಕವು ವೈದಿಕ ಧರ್ಮದ ಶ್ರೇಯಸ್ಸಿಗೆ ಬಹುಮಟ್ಟಿಗೆ ಕಾರಣವಾಗಿದೆ. ಶಂಕರ, ರಾಮಾನುಜ, ಮಧ್ವ—ಈ ಆಚಾರ್ಯತ್ರಯರು ನಮ್ಮ ನಾಡಿನಲ್ಲಿಯೇ ಬೆಳೆದು ಬಾಳಿದರು. ಅವರ ಅದ್ವೈತ, ವಿಶಿಷ್ಟಾದ್ವೈತ, ದ್ವೈತ ತತ್ವಪ್ರಸಾರಕ್ಕೆ ಕರ್ನಾಟಕವೇ ಆದಿಪೀಠ. ನಮ್ಮ ನಾಡಿನ ಮೇಲೆ ಬಂದ ನಾಸ್ತಿಕ ಮತಗಳೊಡನೆ ಹೋರಾಡಿ, ಜನತೆಯಲ್ಲಿ ಆಸ್ತಿಕ ಭಾವವನ್ನೂ ಭಕ್ತಿಯ ಸೆಲೆಯನ್ನೂ ಚಿಮ್ಮಿಸಿದ ಶ್ರೇಯಸ್ಸು ವೈದಿಕ ಧರ್ಮಕ್ಕಿದೆ. ಈ ಧರ್ಮದ ಕವಿಗಳು ಕನ್ನಡದಲ್ಲಿ ಕಾವ್ಯರಚನೆ ಮಾಡಲು ಸ್ವಲ್ಪ ತಡವಾಗಿಯೇ ಆರಂಭಿಸಿದರು. ಪುರಂದರದಾಸ, ಕನಕದಾಸ, ಜಗನ್ನಾಥದಾಸ, ವಿಜಯ ದಾಸರಂತಹ ದಾಸವರೇಣ್ಯರ ಕೀರ್ತನೆಗಳಲ್ಲಿ ಸಮಾಜವನ್ನು ಮೇಲಕ್ಕೆತ್ತಬೇಕೆಂಬ ಪವಿತ್ರ ಭಾವನೆ ತುಂಬಿ ತುಳುಕುತ್ತಿದೆ. ಸಂಸಾರವನ್ನು ತ್ಯಜಿಸಿ, ಕೈಯಲ್ಲಿ ಒಂದು ತಂಬೂರಿಯನ್ನು ಹಿಡಿದು, ಬೀದಿ ಬೀದಿಗಳಲ್ಲಿ ಸಂಚರಿಸಿ, ಮನೆಮನೆಗೆ ವಿಷ್ಣುನಾಮದ ಪವಿತ್ರ ಸಂದೇಶವನ್ನು ಮುಟ್ಟಿಸಿದ ಶ್ರೇಯಸ್ಸು ಹರಿದಾಸರಿಗೆ ಸಲ್ಲುತ್ತದೆ. ವೈದಿಕ ಪಂಥದ ಮುಖ್ಯ ಕವಿಗಳೆಂದರೆ ದುರ್ಗಸಿಂಹ, ರುದ್ರಭಟ್ಟ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ ಮೊದಲಾದವರು. ದುರ್ಗಸಿಂಹನ ಕಥನತಂತ್ರ, ರುದ್ರಭಟ್ಟನ ಪಾಂಡಿತ್ಯ, ಕುಮಾರವ್ಯಾಸನ ಭಕ್ತಿಯ ವಿಲಾಸ, ಲಕ್ಷ್ಮೀಶನ ನಾದಮಾಧುರ್ಯ, ಮುದ್ದಣನ ರಸಿಕತೆ– ಇವು ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಮೆರಗನ್ನು ತಂದಿವೆ.

ಕನ್ನಡ ಸಾಹಿತ್ಯವನ್ನು ಜೈನ, ವೀರಶೈವ, ಬ್ರಾಹ್ಮಣ ಎಂದು ವಿಭಜಿಸುವುದು ಸೂಕ್ತವಲ್ಲವೆಂದು ಕೆಲವರ ಮತ. ನಮ್ಮ ಸಾಹಿತ್ಯಕ್ಕೆ ಜೈನ, ವೀರಶೈವ, ಬ್ರಾಹ್ಮಣ ಧರ್ಮಗಳು ಚೈತನ್ಯ, ಕಳೆಗಳನ್ನಿತ್ತುದೂ ಅದರ ಪಂಚಪ್ರಾಣದಂತಿದ್ದುದೂ ಸೂರ್ಯನಷ್ಟು ಸ್ಪಷ್ಟವಾಗಿದೆ. ಜಾತ್ಯತೀತತೆಯ ನೆವದಲ್ಲಿ ಐತಿಹಾಸಿಕ ಸತ್ಯವನ್ನು ಮರೆಮಾಡುವುದು ಸರಿಯಲ್ಲ. ಜೈನರೂ ವೀರಶೈವರೂ ಬ್ರಾಹ್ಮಣರೂ ಇತರರೂ ಎಲ್ಲರೂ ಕನ್ನಡಿಗರೇ. ಕನ್ನಡದ ಕಾವ್ಯಪುರುಷ ಒಂದೊಂದು ಕಾಲಕ್ಕೆ ಒಂದೊಂದು ರೂಪದಲ್ಲಿ ನ್ಯೈವೆತ್ತು ನಿಂತಿರುವನು. ಈ ದೃಷ್ಟಿಯಿಂದ ನೋಡಿದರೆ ಜೈನಕವಿ ಪಂಪ, ವೀರಶೈವಕವಿ ಹರಿಹರ, ಬ್ರಾಹ್ಮಣಕವಿ ಕುಮಾರವ್ಯಾಸ ಇವರೆಲ್ಲರೂ ಪ್ರಥಮತಃ ಕನ್ನಡಿಗರು. ಕನ್ನಡಿಗರ ಜೀವನವನ್ನೇ ಉದ್ಧರಿಸಲು ಉದಯಿಸಿದ ಪುಣ್ಯಪುರುಷರು.

ಕಂಡುಗವನ್ನು ಬಳ್ಳದಲ್ಲಿ ಅಳೆವಂತೆ, ವಿಸ್ತಾರವಾದ ನಮ್ಮ ಪ್ರಾಚೀನ ಸಾಹಿತ್ಯದ ಸ್ವರೂಪ ಸತ್ವಗಳನ್ನು ಒಂದೆರಡು ಮಾತುಗಳಲ್ಲಿ ವಿವೇಚಿಸಿದುದಾಯಿತು. ಇನ್ನು ಹೊಸಗನ್ನಡದತ್ತ ಹೊರಳಬಹುದು.

೧೮, ೧೯ನೆಯ ಶತಮಾನಗಳಲ್ಲಿ ಕನ್ನಡಸಾಹಿತ್ಯಕ್ಕೆ–ಒಂದು ದೃಷ್ಟಿಯಿಂದ ಸಮಸ್ತ ಭಾರತೀಯ ಸಾಹಿತ್ಯಕ್ಕೆ ಕಗ್ಗತ್ತಲೆಯ ಕಾಲ ಬಂದಿತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅದು ಮತ್ತೆ ಚೇತರಿಸ ತೊಡಗಿತು. ಶಾಕುಂತಲ, ಚಂಡಕೌಶಿಕ ಮೊದಲಾದ ನಾಟಕಗಳನ್ನು ಕನ್ನಡಕ್ಕೆ ಪರಿವರ್ತಿಸಿದ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿ, ರಾಮಾಶ್ವಮೇಧ ಮತ್ತು ಅದ್ಭುತರಾಮಾಯಣಗಳನ್ನು ಬರೆದ ನಂದಳಿಕೆ ಲಕ್ಷ್ಮೀನಾರಣಪ್ಪ, ಮುದ್ರಾಮಂಜೂಷವನ್ನು ಬರೆದ ಕೆಂಪುನಾರಾಯಣ– ಈ ಕವಿಗಳ ಕಾಲದಲ್ಲಿ ಸಂಸ್ಕೃತಸಾಹಿತ್ಯದ ಪ್ರಭಾವದಿಂದ ಮತ್ತೆ ಕನ್ನಡವು ಜಾಗ್ರತವಾಯಿತು. ಕ್ಷಿಪ್ರದಲ್ಲಿಯೇ ಆಂಗ್ಲವಾಙ್ಮಯದ ಪ್ರಭಾವವೂ ಕನ್ನಡಿಗರ ಮೇಲೆ ಆಯಿತು. ತತ್ಪರಿಣಾಮವಾಗಿ ಭಾವಗೀತೆ, ಸಣ್ಣಕತೆ, ನಾಟಕ, ಕಾದಂಬರಿ, ಹರಟೆ, ಪ್ರಬಂಧ ಮೊದಲಾದ ನೂತನ ಪ್ರಕಾರಗಳು ಕನ್ನಡಸಾಹಿತ್ಯದಲ್ಲಿ ಉದಯವಾದುವು. ಈ ದಿಶೆಯಲ್ಲಿ ಕನ್ನಡ ಸಾಹಿತ್ಯದ ಬೆಳೆಯೂ ಹುಲುಸಾಗಿಯೇ ಬಂದಿದೆಯೆನ್ನಬೇಕು. ಜೊತೆಗೆ ಸಾಹಿತ್ಯವಿಮರ್ಶೆ, ಪ್ರಾಚೀನ ಗ್ರಂಥಗಳ ಸಂಸ್ಕರಣ, ಸಂಶೋಧನೆಗಳೂ ನಡೆದಿವೆ. ಜ್ಞಾನಸಾಹಿತ್ಯವೂ ಕನ್ನಡದಲ್ಲಿ ತಲೆದೋರತೊಡಗಿದೆ. ಒಂದೊಂದು ಸಾಹಿತ್ಯ ಪ್ರಕಾರವನ್ನು ವಿಹಂಗಮ ದೃಷ್ಟಿಯಿಂದ ನೋಡುವದು ಈಗ ಪ್ರಸ್ತುತವೆನಿಸಿದೆ.

ಭಾವಗೀತೆ

ಭಾವಗೀತೆ!ಕನ್ನಡಕ್ಕೆ ಹೊಷತಲ್ಲವಾದರೂ ಅದರ ವಸ್ತು,ವ್ಯಾಪ್ತಿ, ನಿರೂಪಣರೀತಿ ನಮಗೆ ಹೊಸದೆನಿಸಿವೆ. ಭಕ್ತಿ, ತತ್ತ್ವಜ್ಞಾನಕ್ಷೇತ್ರಗಳಿಗೆ ಮಾತ್ರ ಅನ್ವಯಿಸಿದ್ದ ಭಾವಗೀತೆ ಇಂದು ಜೀವನದ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸಬಹುದಾಗಿದೆ, ವ್ಯಾಪಿಸಿಕೊಂಡಿದೆ. ಪಂಜೆ ಮಂಗೇಶರಾಯರ ಕವನಗಳು, ಬಿ.ಎಂ. ಶ್ರೀಯವರ ಇಂಗ್ಲೀಷ ಗೀತೆಗಳು ಪ್ರಕಾಶವಾದಂದಿನಿಂದ ಆಧುನಿಕ ಕನ್ನಡ ಸಾಹಿತ್ಯದ ಹೊಸಯುಗ ಆರಂಭವಾಯಿತೆನ್ನಬಹುದು. ಅಂದಿನಿಂದ ಅನೇಕ ಕವಿಗಳು ಉದಯವಾಗಿ ಅತ್ಯುತ್ತಮ ಭಾವಗೀತೆಗಳನ್ನು ರಚಿಸಿರುವರು. ಅವರಲ್ಲಿ ಕೆ. ವ್ಹಿ. ಪುಟ್ಟಪ್ಪ, ದ. ರಾ. ಬೇಂದ್ರೆ, ಕಡೆಂಗೋಡ್ಲು ಶಂಕರಭಟ್ಟ, ಗೋವಿಂದ ಪೈ, ಚೆನ್ನಮಲ್ಲಪ್ಪ, ಡಿ. ವ್ಹಿ. ಗುಂಡಪ್ಪ, ವಿ. ಸೀ., ಪು. ತಿ. ನರಸಿಂಹಾಚಾರ್, ವಿ. ಕೃ. ಗೋಕಾಕ, ಗೋಪಾಲಕೃಷ್ಣ ಅಡಿಗ, ಸಿದ್ಧಯ್ಯ ಪುರಾಣಿಕ, ಈಶ್ವರ ಸಣಕಲ್ಲ ಬೆಟಗೇರಿ ಕೃಷ್ಣಶರ್ಮ, ಡಿ. ಎಸ್. ಕರ್ಕಿ, ಚನ್ನವೀರ ಕಣವಿ, ಎಸ್. ಡಿ. ಇಂಚಲ, ಜಿ. ಎಸ್. ಶಿವರುದ್ರಪ್ಪ, ರೈ, ಕೆ. ಎಸ್. ನರಸಿಂಹಸ್ವಾಮಿ, ಸೇಡಿಯಾಪು ಕೃಷ್ಣಭಟ್ಟ, ಆರ್. ಸಿ. ಹಿರೇಮಠ, ಬ. ಗಿ. ಯಲ್ಲಟ್ಟಿ, ಬಣಕಾರ ಮಹಾದೇವ, ವ್ಹಿ. ಜಿ. ಭಟ್ಟ, ಜಯದೇವತಾಯಿ ಲಿಗಾಡೆ, ವಾಲಿ ಗಂಗಪ್ಪ, ಮಹಿಷವಾಡಿ, ಸಿದ್ದಣ್ಣ ಮಸಳಿ, ದೇಸಾಯಿ ಜಿನದತ್ತ, ಸನದಿ, ಶಿಸುಸಂಗಮೇಶ, ಸುಜನಾ, ಜೀ. ಶಂ. ಪ., ಆರ್. ವ್ಹಿ. ಹೊರಡಿ, ಚಂದ್ರಶೇಖರ ಪಾಟೀಲ ಮೊದಲಾದವರು ಮುಖ್ಯರು. ಕಳೆದ ಕಾಲುಶತಮಾನದ ಅವಧಿಯಲ್ಲಿ ಕನ್ನಡದ ಭಾವಗೀತೆ ವಸ್ತು, ವಿನ್ಯಾಸ, ಜೀವನದೃಷ್ಟಿ, ಭಾವಪರಿಪಾಕ– ಈ ದೃಷ್ಟಿಯಿಂದ ಒಂದು ಸಿದ್ಧಿಯನ್ನೇ ಪಡೆಯಿತೆನ್ನಬಹುದು. ಕನ್ನಡ ಭಾವಗೀತೆ ಜನಸಾಮಾನ್ಯರ ಎದೆ ತಟ್ಟಿತು, ಮನ ಮುಟ್ಟಿತು. ಬೇಂದ್ರೆ, ಕುವೆಂಪು, ವಿ. ಸೀ., ಡಿ.ವಿ. ಜಿ., ರಾಜರತ್ನಂ ಮೊದಲಾದವರು ಕನ್ನಡಿಗರ ಮನೆಯ ಮಾತಾದರು. ಭಾವಗೀತೆಗಳ ಈ ಯುಗದಲ್ಲಿ ಮಹಾಕಾವ್ಯದ ಸಿದ್ಧಿಯನ್ನು ಸಾಧಿಸಿದ ಕುವೆಂಪು ಅವರು ನಿಜವಾಗಿಯೂ ಮಹತ್‌ಕಾರ್ಯವನ್ನು ಸಾಧಿಸಿರುವರು.

ಇಷ್ಟರಲ್ಲಿಯೇ ಆರಂಭವಾಗಿದೆ ನವ್ಯಕಾವ್ಯ. ಭಾವಗೀತೆಗಳಲ್ಲಿ ಅರ್ಥದ ಔಚಿತ್ಯಕ್ಕಿಂತಲೂ ರಾಗದ ವೈಖರಿಯೇ ಹೆಚ್ಚಾಗಿ ಕಾವ್ಯದೃಷ್ಟಿ—ಸೃಷ್ಟಿ ಕಡಿಮೆಯಾದಂತೆ ಕಂಡುಬರುತ್ತದೆ. ಶಕ್ತರಾದ ಕವಿಗಳ ಮಾತು ಬೇರೆ. ಆದರೆ ಎಂತಹ ನೀರಸವಾದ ಅರ್ಥವನ್ನಾದರೂ ರಾಗದಲ್ಲಿ, ತಾಳದಲ್ಲಿ ಹಾಡಬಹುದೆಂದರೆ ಕಾವ್ಯಾಂಶ ಕಡಿಮೆಯಾಗುವುದು ಸ್ವಾಭಾವಿಕ. ನವ್ಯಕಾವ್ಯದ ನೂತನ ಮಾರ್ಗ ಆರಂಭವಾಗುವುದಕ್ಕೆ ಇದೂ ಒಂದು ಕಾರಣವಿರಬಹುದು. ಯಾವುದೇ ಮಾತು ಮಿತಿಮೀರಿದರೆ ಅದರ ಬಗೆಗೆ ಜನತೆಗೆ ಬೇಸರಿಕೆ, ಜುಗುಪ್ಸೆ ಉಂಟಾಗುತ್ತವೆ. ಭಾವಗೀತೆಗಳ ಸ್ಥಾನವನ್ನು ಆಕ್ರಮಿಸಲು ಯತ್ನಿಸುತ್ತಿರುವ ಈ ನವ್ಯಕಾವ್ಯಮಾರ್ಗದಲ್ಲಿ ಪಾಶ್ಚಾತ್ಯರ ಅನುಕರಣೆಯೇ ಹೆಚ್ಚಾಗಿದ್ದಂತೆ ಕಂಡುಬರುತ್ತದೆ. ರಾಗಕ್ಕೆ ಕಡಿಮೆ ಸ್ಥಾನವನ್ನು ಕೊಟ್ಟುದು ಸ್ವಾಗತಾರ್ಹ. ಆದರೆ ಸಂಕೇತಬಲವಿಲ್ಲದ ಅನೇಕ ಹೊಸ ಪ್ರತಿಮೆಗಳನ್ನು ಪ್ರತಿಯೊಬ್ಬ ಕವಿಯೂ ಬಳಸುತ್ತ ಹೊರಟರೆ ನವ್ಯಕಾವ್ಯ ಅರ್ಥವಾಗುವುದೆಂತು? ಪಾಶ್ಚಾತ್ಯ ದೇಶಗಳಲ್ಲಿ ಜೀವನ ಬಹಳ ಸಂಕೀರ್ಣವಾಗಿದೆ. ಅವರ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಜೀವನ ಮೇಲುನೋಟಕ್ಕೆ ಬಹುರಮ್ಯವಾಗಿ ಕಂಡುಬಂದರೂ ಒಳಗೊಳಗೆ ಕತಕತನೆ ಕುದಿವ ಹೋರಾಟ ಅಲ್ಲಿ ನಡೆದೇ ಇರುತ್ತದೆ. ಇಂತಹ ಸಂಕೀರ್ಣ ಸ್ಥಿತಿಯಲ್ಲಿ ಹುಟ್ಟಿಬರುವ ಕಲೆಗಳು ಸ್ವಾಭಾವಿಕವಾಗಿಯೇ ಸಂಕೀರ್ಣವಾಗುತ್ತವೆ. ಅಲ್ಲಿಯ ಪರಿಸ್ಥಿತಿ, ವಾತಾವರಣ ಇವುಗಳಿಗೆ ಅನುಸರಿಸಿವೆ ಅವರ ನವ್ಯಕಾವ್ಯದ ಮಾರ್ಗ. ಆ ದೇಶಗಳಲ್ಲಿ ಅದು ಹೊಂದಿಕೊಳ್ಳಬಹುದೆನಿಸಿದರೂ ನಮ್ಮ ದೇಶದಲ್ಲಿ ಅಂಥ ಪರಿಸ್ಥಿತಿ ಇದೆಯೇ ಎಂದು ವಿಚಾರಿಸುವುದು ಅತ್ಯವಶ್ಯವಾಗಿದೆ. ಈ ದೇಶದ ಸಂಸ್ಕೃತಿಯೇ ಬೇರೆ. ಶಾಶ್ವತವಾದ ಮೌಲ್ಯಗಳ ಕಡೆಗೆ ವಿಶೇಷವಾದ ಗಮನವನ್ನಿತ್ತ ಭಾರತೀಯರ ಜೀವನದಲ್ಲಿ ಶಾಂತಿ ಮನೆಮಾಡಿಕೊಂಡಿದೆ. ಪಾಶ್ಚಾತ್ಯರ ಜೀವನದಲ್ಲಿದ್ದಷ್ಟು ಸಂಕೀರ್ಣತೆ ನಮ್ಮ ದೇಶದಲ್ಲಿ ಕಂಡುಬಾರದಿರುವುದರಿಂದ ನವ್ಯಕಾವ್ಯದ ಪುರಸ್ಕರ್ತರು ಇಂದಿನ ಪರಿಸ್ಥಿತಿಯಲ್ಲಿ ಸರಿಯಾಗಿ ಹೊಂದಿಕೊಳ್ಳುವ ಕಾವ್ಯಮಾರ್ಗವನ್ನು

ಕಂಡುಹಿಡಿಯುವದು ಅವಶ್ಯವಾಗಿದೆ. ಹೊಸ ಹೊಸ ಪ್ರತಿಮೆಗಳು ನಮ್ಮ ಕಾವ್ಯಕ್ಷೇತ್ರದಲ್ಲಿ ಬರುತ್ತಿರುವುದೇನೋ ಸ್ವಾಗತಾರ್ಹ. ಆದರೆ ವಾಚ್ಯದ ಆಧಾರವಿಲ್ಲದೆ ಬಳಸಲಾಗುತ್ತಿರುವ ಇಂತಹ ಪ್ರತಿಮೆಗಳು ಸರಿಯಾದ ಅರ್ಥವನ್ನು ಅಭಿವ್ಯಕ್ತಮಾಡಲು ಅಸಮರ್ಥವಾಗುವ ಸಂಭವವೂ ಉಂಟು. ಹೀಗಾಗಿ ಈಗ ಬರುತ್ತಿರುವ ನವ್ಯಕಾವ್ಯದಲ್ಲಿ ಕೇವಲ ಪ್ರತಿಮೆಗಳ ಸಂಕೀರ್ಣತೆ, ಸಂಕ್ಲಿಷ್ಟತೆಯಿದೆಯಲ್ಲದೆ ಬಾಳಿನ ನಿಜವಾದ ಅನುಭೂತಿ ಕಂಡುಬರುವುದಿಲ್ಲ. ಪ್ರತಿಯೊಂದು ವಿಷಯದಲ್ಲಿಯೂ ಕವಿ ಕೆರಳಿ—ಕ್ಷೋಭೆಗೊಂಡು ಬರೆದರೆ ಕಾವ್ಯವಾಗಲಾರದು. ಕ್ಷೋಭೆಯು ನಮ್ಮ ಜೀವನದಲ್ಲಿ ಒಂದು ಮಹತ್ವವಾದ ಅನುಭೂತಿ. ಆದರೆ ರಸಾನುಭೂತಿ ಕ್ಷೋಭೆಯೊಂದರಿಂದಲೇ ಉಂಟಾಗುವದಿಲ್ಲ. ಸಮಗ್ರತೆ ಬರಬೇಕಾದರೆ ನಮ್ಮ ಕವಿಗಳ ದೃಷ್ಟಿ ಸಮಗ್ರವಾಗಬೇಕು; ಅನುಭೂತಿ ಸಮಗ್ರವಾಗಬೇಕು; ಸಹೃದಯರಿಗೆ ಮನಮುಟ್ಟುವಂತಾಗಬೇಕು. ಬೌದ್ಧಿಕ ಅಂಶ ಕಡಿಮೆಯಾಗಿ, ಭಾವನೆ, ಚಿಂತನೆ, ಆಲೋಚನೆ ಇವುಗಳ ಮುಪ್ಪುರಿಯಾಗಬೇಕು ನವ್ಯಕಾವ್ಯ.

ಸಣ್ಣ ಕತೆ

ಕನ್ನಡದ ಸಣ್ಣಕತೆಯ ಸಾಹಿತ್ಯಕ್ಕೆ ಹಿನ್ನೆಲೆ ಬಹು ದೂರದಲ್ಲಿದೆಯೆಂದೆನಿಸುತ್ತಿದೆ. ವಡ್ಡಾರಾಧನೆ, ಧರ್ಮಾಮೃತ, ಪಂಚತಂತ್ರ ಮುಂತಾದ ಕಾವ್ಯಗಳಲ್ಲಿ ಬರುವ ಕಥೆಗಳು, ರಾಮಾಯಣ ಮಹಾಭಾರತಗಳಲ್ಲಿ ಬರುವ ಉಪಕಥೆಗಳು(ವೀರಶೈವ ಪುರಾಣಗಳಲ್ಲಿ)ಬರುವ ಶರಣರ ಕಥೆಗಳು ಒಂದು ದೃಷ್ಟಿಯಿಂದ ಕಥನ ಸಾಹಿತ್ಯಕ್ಕೆ ಸಂಬಂಧಪಟ್ಟವು. ಆದರೆ ಆಧುನಿಕ ಸಣ್ಣಕತೆ ತಂತ್ರದೃಷ್ಟಿಯಿಂದ ಜೀವನದ ವ್ಯಾಪ್ತಿಯ ದೃಷ್ಟಿಯಿಂದ ಹೊಸತಾಗಿದೆ. ಆಂಗ್ಲವಾಙ್ಮಯದ ಸಣ್ಣಕತೆಯ ಪರಿಚಯ ನಮ್ಮವರಿಗೆ ಆದೊಡನೆಯೇ ಇಲ್ಲಿಯ ಜನಜೀವನಕ್ಕೆ ಅನ್ವಯಿಸುವ ಸಣ್ಣ ಕತೆಯ ಸಾಹಿತ್ಯ ಹುಟ್ಟತೊಡಗಿತು. ಮಾಸ್ತಿಯವರು ಈ ಕಥನ ಸಾಹಿತ್ಯಕ್ಕೆ ಪಿತಾಮಹರೆನಿಸಿಕೊಂಡರು. ಕುವೆಂಪು, ಕಾರಂತ, ಬಸವರಾಜ ಕಟ್ಟೀಮನಿ, ಆನಂದ, ಆನಂದಕಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ, ತ. ರಾ. ಸು., ಗೋಪಾಲಕೃಷ್ಣರಾವ, ಅ. ನ. ಕೃ., ತ್ರಿವಿಕ್ರಮರಾವ, ಅಶ್ವತ್ಥ, ಚದುರಂಗ, ಗೀತಾ ಕುಲಕರ್ಣಿ, ಗೌರಮ್ಮ, ಸೇವನಮಿರಾಜ ಮಲ್ಲ, ಅನುಪಮಾ, ಸರಸ್ವತೀದೇವಿ ಗೌಡರ ಮುಂತಾದವರು ನಮ್ಮ ಸಣ್ಣ ಕತೆಯ ಸಾಹಿತ್ಯಕ್ಕೆ ಅತ್ತ್ಯುತ್ತಮವಾದ ಕಾಣಿಕೆಯನ್ನು ಸಲ್ಲಿಸಿರುವರು. ಜೀವನದ ನಿಜವಾದ ಅನುಭೂತಿ, ಸಮಾಜದ ಬಗೆಗೆ ಅನುಕಂಪೆ ನಮ್ಮ ಸಣ್ಣ ಕತೆಯ ಸಾಹಿತ್ಯದಲ್ಲಿ ಕಂಡುಬರುತ್ತದೆ. ಕನ್ನಡದ ಕೆಲವು ಸಣ್ಣ ಕತೆಗಳು ಪರಕೀಯ ಭಾಷೆಗಳಿಗೆ ಪರಿವರ್ತನೆಹೊಂದಿ ಮೆಚ್ಚುಗೆಯನ್ನು ಪಡೆಯುತ್ತಿರುವುದು ಸ್ತೋತ್ರಾರ್ಹ. ಅನ್ಯಸಾಹಿತ್ಯಗಳ ಉತ್ತಮ ಕತೆಗಳು ಕನ್ನಡಕ್ಕೆ ಪರಿವರ್ತನವಾಗುವುದೂ ಕನ್ನಡದ ಸಣ್ಣ ಕತೆಗಳು ಇನ್ನುಳಿದ ಭಾಷೆಗಳಿಗೆ ತರ್ಜುಮೆ ಹೊಂದುವುದೂ ಅತ್ಯಾವಶ್ಯಕ. ಈ ಕಾರ್ಯ ಭರದಿಂದ ನಡೆದಷ್ಟೂ ಸಾಹಿತ್ಯಕ್ಕೂ ಜೀವನಕ್ಕೂ ಹೆಚ್ಚು ಕಲ್ಯಾಣವಾಗುವುದು. ಆದರೆ ಇತ್ತೀಚೆಗೆ ನಮ್ಮ ಕತೆಗಾರರ ದೃಷ್ಟಿ ಕಾದಂಬರಿಯ ಕಡೆಗೆ ಹೊರಳಿದೆ. ಜನರಂಜನೆಯ, ಮನರಂಜನೆಯ ಕೆಲವು ಕಾದಂಬರಿಗಳು ಲೇಖಕರಿಗೆ ಹಣ ಒದಗಿಸಿಕೊಟ್ಟರೂ ಅಂಥ ಕೃತಿಗಳಿಂದ ನಿಜವಾಗಿಯೂ ಲೋಕಕಲ್ಯಾಣವಾಗಲಾರದು. ನಮ್ಮ ಸಣ್ಣ ಕತೆಗಾರರು ಕತೆಗಳನ್ನೇ ಬರೆದರೂ ಚಿಂತೆಯಿಲ್ಲ; ಮೂರನೆಯ ತರಗತಿಯ ಕಾದಂಬರಿಗಳನ್ನು ಬರೆಯುವುದು ಲೇಸಲ್ಲ. " ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋಭಯಾವಹಃ "

ನಾಟಕ

" ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ " ಎಂದು ಕವಿಕುಲಗುರು ಕಾಳಿದಾಸನು ಹೇಳಿರುವನು. ನಾಟಕವು ಸಾಹಿತ್ಯ ಪ್ರಕಾರಗಳಲ್ಲಿಯೇ ಶ್ರೇಷ್ಠವಾದುದು. ಜಗತ್ತಿನ ಪ್ರಾಚೀನ, ಅರ್ವಾಚೀನ

ಸಾಹಿತ್ಯಗಳಲ್ಲಿ ನಾಟಕ ನಾನಾಬಗೆಯಾಗಿ ಕಂಡುಬರುತ್ತದೆ. ಸಂಸ್ಕೃತ ವಾಙ್ಮಯದಲ್ಲಿರುವ ನಾಟಕ ಸಾಹಿತ್ಯ, ಗ್ರೀಕ ನಾಟಕಸಾಹಿತ್ಯ, ಆಂಗ್ಲನಾಟಕ ಸಾಹಿತ್ಯ ಇವು ಜಾಗತಿಕ ಸಾಹಿತ್ಯದಲ್ಲಿಯೇ ಮನ್ನಣೆಯ ಸ್ಥಾನವನ್ನು ಪಡೆದಿರುವುದು ಸರ್ವಶ್ರುತ. ಕನ್ನಡಕ್ಕೆ ಪ್ರಾಚೀನ ಸಾಹಿತ್ಯ ಬೇಕಾದಷ್ಟಿದ್ದರೂ ನಮ್ಮಲ್ಲಿ ನಾಟಕಸಾಹಿತ್ಯದ ಅಭಾವವಿದೆಯೆಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ರನ್ನ, ರಾಘವಾಂಕರಿಗೆ ನಾಟ್ಯಪ್ರತಿಭೆ ಇತ್ತು. ಶ್ರೀಪಾಲಚರಿತೆ, ಸುಭದ್ರಾಹರಣ ನಾಟಕವಾಗಿರಬಹುದು ಎಂದು ಊಹಿಸಿ ನಾವು ಸಮಾಧಾನಪಡಬೇಕಾಗಿದೆ. ಕನ್ನಡ ಸಾಹಿತ್ಯ ಉದಯವಾಗಿ ಅಭಿವೃದ್ಧಿಹೊಂದುವ ಸಮಯದಲ್ಲಿ ಸಂಸ್ಕೃತ ವಾಙ್ಮಯದೊಳಗಿನ ನಾಟಕ ಸಾಹಿತ್ಯದ ಕಾಲ ಹಿಂದಾಗಿ, ಮಹಾ ಕಾವ್ಯಗಳ ಕಾಲ ಮುಂದಾಗಿತ್ತು. "ಬಾಣೋಚ್ಛಿಷ್ಟಂ ಜಗತ್ಸರ್ವಂ" ಎಂಬ ಮಾತು ಎಲ್ಲೆಡೆಯಲ್ಲಿಯೂ ಪಸರಿಸಿದ್ದಿತು. ಇಂತಹ ಕಾಲದಲ್ಲಿ ಸಾಹಿತ್ಯ ನಿರ್ಮಿಸಿದ ಕನ್ನಡ ಕವಿಗಳಿಗೆ ಬಾಣ, ಸುಬಂಧು ಮೊದಲಾದವರ ಶೈಲಿ ಮಾರ್ಗದರ್ಶಕವಾಗಿ ನಿಂತಿರಲು ಸಾಕು. ಪಂಪ ರನ್ನರಿಗೆ ಕಾಳಿದಾಸನ ಕೃತಿಗಳ ಪರಿಚಯ ಬೇಕಾದಷ್ಟಿದ್ದಿತು. ಅವರು ಮನಸ್ಸು ಮಾಡಿದ್ದರೆ ಉತ್ತಮ ನಾಟಕಗಳನ್ನು ಬರೆಯಬಹುದಿದ್ದಿತೋ ಏನೋ, ಆದರೆ ಕವಿಯೂ ಯುಗಧರ್ಮಕ್ಕೆ ಒಳಗಾಗಲೇ ಬೇಕಲ್ಲವೆ? ಮತ ಧರ್ಮಗಳ ಶ್ರದ್ಧೆ, ನಿಷ್ಠೆ, ಪ್ರಸಾರ ಇವುಗಳನ್ನು ಮುಖ್ಯವಾಗಿಟ್ಟುಕೊಂಡ ಕವಿಗಳು ನಾಟಕಸಾಹಿತ್ಯದ ಕಡೆಗೆ ವಿಶೇಷವಾಗಿ ಗಮನಕೊಟ್ಟಿಲ್ಲ. ಅಂತೆಯೇ ೧೭ನೆಯ ಶತಮಾನದಲ್ಲಿ ಹುಟ್ಟಿದ ಅಳಹಿಯ ಸಿಂಗರಾರ್ಯರ 'ಮಿತ್ರವಿಂದಾ ಗೋವಿಂದ' ನಾಟಕವೇ ನಮ್ಮ ನಾಟಕಗಳಲ್ಲಿ ಮೊದಲನೆಯದು. ಅದು ಸಂಸ್ಕೃತ ರತ್ನಾವಳೀ ನಾಟಕದ ರೂಪಾಂತರ. ಅದರ ಬೆಲೆ ಅಷ್ಟಕ್ಕಷ್ಟೇ. ನಮ್ಮ ನಾಟಕ ಸಾಹಿತ್ಯದಲ್ಲಿ ಅವಶ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಯಕ್ಷಗಾನ, ಬಯಲಾಟ, ಪಾರಿಜಾತ ಮುಂತಾದುವು. ಇವು ಜಾನಪದಕ್ಕೆ ಸಂಬಂಧಪಟ್ಟ ಕೃತಿಗಳು. ಕನ್ನಡ ಸಾಹಿತ್ಯದಲ್ಲಿ ನಾಟಕಗಳ ಕೊರತೆ ಇದ್ದರೂ ಕನ್ನಡ ಜನತೆಗೆ ರಸಿಕತೆಯ ಕೊರತೆಯಿರಲಿಲ್ಲ. ಕನ್ನಡದಲ್ಲಿ ವರ್ಣಿಸುವಾಗ ಕವಿರಾಜಮಾರ್ಗಕಾರನು ಅವರನ್ನು "ರಸಿಕರ್" ಎಂದು ಕರೆದಿದ್ದಾನೆ. ಯಕ್ಷಗಾನ, ಬಯಲಾಟ ಮೊದಲಾದ ಜಾನಪದ ನಾಟಕಗಳನ್ನು ನಮ್ಮ ಜನತೆ ರಂಗಭೂಮಿಯ ಮೇಲೆ ಆಡಿ, ನೋಡಿ, ಆನಂದಪಟ್ಟಿರಬೇಕು. ವಿಜಯನಗರದ ಕಾಲಕ್ಕೆ ಈ ಯಕ್ಷಗಾನಗಳು ದೊರೆಗಳ ಮೆಚ್ಚುಗೆಯನ್ನು ಪಡೆದಿದ್ದುವು. ಯಕ್ಷಗಾನಗಳನ್ನು ಆಡುವುದಕ್ಕಾಗಿ ಕೃಷ್ಣದೇವರಾಯನು ಅರಮನೆಗೆ ಹೊಂದಿ ಒಂದು ನಾಟ್ಯಗೃಹವನ್ನು ನಿರ್ಮಿಸಿದ್ದನಂತೆ. ಇಂದಿಗೂ ಯಕ್ಷಗಾನವು ಉತ್ತರ, ದಕ್ಷಿಣ ಕನ್ನಡ ಜಿಲ್ಹೆಗಳಲ್ಲಿ ಸಜೀವ ಕಲೆಯಾಗಿ ಉಳಿದುಕೊಂಡು ಬಂದಿದೆ. ಭಾರತೀಯ ಕಲಾಭಿಜ್ಞರ ಚಿತ್ತವನ್ನು ತನ್ನತ್ತ ಸೆಳೆದುಕೊಳ್ಳುತ್ತಲಿದೆ.

ಆಧುನಿಕ ನಾಟಕವಾಙ್ಮಯ ಉದಯವಾದುದು ಪಾಶ್ಚಾತ್ಯ ಸಾಹಿತ್ಯದ ಸಂಪರ್ಕದಿಂದ. ಟಿ. ಪಿ. ಕೈಲಾಸಂ, ಶ್ರೀರಂಗ ಮೊದಲಾದ ಪ್ರತಿಭಾನ್ವಿತರು ಪರದೇಶಕ್ಕೆ ಹೋದಾಗ, ಅಲ್ಲಿ ಜೀವಂತವಾಗಿದ್ದ ನಾಟ್ಯಕಲೆಯನ್ನೂ ಇಬ್ಸನ್, ಬರ್ನಾರ್ಡ ಷಾ ಮೊದಲಾದವರ ನಾಟಕಗಳನ್ನೂ ನೋಡಿ ಸ್ವದೇಶಕ್ಕೆ ಮರಳಿದೊಡನೆಯೇ ಇಲ್ಲಿಯ ಸಾಮಾಜಿಕ ಸಮಸ್ಯೆಗಳ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸಿದರು. ಇದರ ಫಲವಾಗಿ—ನಮ್ಮ ಆಧುನಿಕ ನಾಟಕ, ಸಾಹಿತ್ಯ ಉದಯವಾಯಿತು. ಇಷ್ಟೇ ಅಲ್ಲ, ಬಹು ಬೆಲೆಯುಳ್ಳ ಕೃತಿಗಳನ್ನೂ ಪಡೆಯಿತು. ಕೈಲಾಸಂರವರು ೧೯೧೮ ರ ಪೂರ್ವದಲ್ಲಿಯೇ ಆಧುನಿಕ ಶಿಕ್ಷಣದ ಟೊಳ್ಳುತನವನ್ನು ತಮ್ಮ 'ಟೊಳ್ಳುಗಟ್ಟಿ' ಯಲ್ಲಿ ಎತ್ತಿ ತೋರಿಸಿದರು. ಆಗ ನಾಡಿನ ಗಣ್ಯರಾದ ಹಲವು ನಾಯಕರು ಆಂಗ್ಲ ಶಿಕ್ಷಣ ಪದ್ಧತಿಯನ್ನು ಸ್ವಾಗತಿಸುವ ಸ್ಥಿತಿಯಲ್ಲಿದ್ದರೆಂಬುದನ್ನು ಸ್ಮರಿಸಿದರೆ, ಕೈಲಾಸಂರವರ ದೃಷ್ಟಿ ಎಷ್ಟು ತೀಕ್ಷ್ಣವೂ ಆಳವೂ ಆಗಿತ್ತೆಂಬುದು ಗೋಚರವಾಗುತ್ತದೆ. ಶ್ರೀರಂಗರ ನಾಟಕಗಳು ಅಷ್ಟೆ ಬೆಲೆಯುಳ್ಳವು; ಒಂದು ಕಾಲಕ್ಕೆ ಅವು ನಮ್ಮ ಸಮಾಜವನ್ನೇ ಬಡಿದೆಬ್ಬಿಸಿದವು. ಇವರಂತೆ ಕಾರಂತ, ಅಶ್ವತ್ಥ, ಪರ್ವತವಾಣಿ, ಸುಂಕಾಪೂರ, ಗುಂಡಣ್ಣ, ಬೀಚಿ, ಕ್ಷೀರಸಾಗರ, ಮೂರ್ತಿ ಮೊದಲಾದವರಿಂದ ನಮ್ಮ ನಾಟಕ ಸಾಹಿತ್ಯ ಬಲು ಹುಲುಸಾಗಿ ಬೆಳೆದಿದೆ. ಹೊಸಹೊಸ ಲೇಖಕರ ಸತ್ತ್ವಯುತವಾದ ಲೆಕ್ಕಣಿಕೆಗಳಿಂದ ಅತ್ಯುತ್ತಮವಾದ ನಾಟಕಗಳು ಬರುತ್ತಿರುವುದು ಶುಭಸೂಚಕ. ಆದರೆ ನಾಟಕ ಮತ್ತು ರಂಗಭೂಮಿ ಇವೆರಡೂ ಒಂದಕ್ಕೊಂದು ಅವಿನಾಭಾವಿಯಾದ ಸಂಬಂಧವನ್ನಿಟ್ಟುಕೊಳ್ಳಬೇಕು.

ಇದುವರೆಗೆ ಈ ಕ್ಷೇತ್ರದಲ್ಲಿ ಕೃಷಿಮಾಡಿದ ಕುವೆಂಪು, ಬೇಂದ್ರೆ, ಲಕ್ಷ್ಮಣರಾಯ, ದ. ರಾ. ಬೇಂದ್ರೆ, ಬೀಚಿ, ಪು. ತಿ. ನ, ಎನ್ಕೆ, ಚಿ. ಸದಾಶಿವಯ್ಯ, ಇವರೆಲ್ಲರೂ ಸಂಸ್ಮರಣೀಯರು. ಆದರೆ ಬೆಳೆದು ಬಂದ ನಮ್ಮ ನಾಟಕ ಸಾಹಿತ್ಯವನ್ನು ಪರಶೀಲಿಸಿದರೆ ನಾಟಕ ಮತ್ತು ರಂಗಭೂಮಿಗಳಲ್ಲಿ ಅನನ್ಯ ಸಂಬಂಧವಿದ್ದಂತೆ ಕಂಡುಬರುವುದಿಲ್ಲ. ನಮ್ಮ ಕನ್ನಡ ರಂಗಭೂಮಿಯೇ ಇಂದು ನಿರ್ಜೀವವಾದಂತಿದೆ. ಅಲ್ಲಲ್ಲಿ ಸ್ವಲ್ಪ ಜೀವಂತವಾಗಿರುವ ಕಡೆ ಪ್ರಯೋಗವಾಗುವ ನಾಟಕಗಳಿಗೆ ಸಾಹಿತ್ಯದೃಷಿ ಯಿಂದ ಏನೂ ಬೆಲೆಯಿಲ್ಲ. ಸಾಹಿತ್ಯದೃಷ್ಟಿಯಿಂದ ಬೆಲೆಯುಳ್ಳ ನಾಟಕಗಳ ಪ್ರಯೋಗವಾಗುತ್ತಿರುವುದು ಕೇವಲ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳ ಸಮಾರಂಭಗಳಲ್ಲಿ ಮಾತ್ರ. ನಮ್ಮ ರಂಗಭೂಮಿಯ ಮೇಲೆ ಇಂದಿನ ನಾಟಕ ಸಾಹಿತ್ಯದ ಪ್ರಯೋಗವಾಗಿ ಜನಸಾಮಾನ್ಯರಿಗೆ ಅವು ತಿಳಿಯುವಂತಾಗಬೇಕು. ಅವರ ಜೀವನದ ಸಮಸ್ಯೆಗಳನ್ನು ಆ ನಾಟಕಗಳು ಎತ್ತಿತೋರಿಸಬೇಕು. ಉತ್ತಮ ನಾಟಕಗಳನ್ನು ಓದುವ, ಆಡುವ, ನೋಡುವ, ಬರೆಯುವ ಅಭಿರುಚಿ ನಮ್ಮ ಜನತೆಯಲ್ಲಿ ಹೆಚ್ಚಾಗಬೇಕು. ಹೀಗಾದರೆ ರಂಗಭೂಮಿಯ ಉದ್ಧಾರವಾಗುವುದು, ನಮ್ಮ ನಾಟಕ ಸಾಹಿತ್ಯವು ಸಜೀವವಾಗುವುದು. ನಮ್ಮ ನಾಟಕಕಾರರಿಗೆ ಇನ್ನೊಂದು ಕಿವಿಮಾತುಂಟು. ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಹಾಸ್ಯರಸದ ಕೊರತೆಯಿದ್ದು ದೇನೊ ನಿಜ. ಆಧುನಿಕ ನಾಟಕ ಸಾಹಿತ್ಯ ಈ ಕೊರತೆಯನ್ನು ಬಹು ಯಶಸ್ವಿಯಾಗಿ ಪೂರೈಸಿರುವುದು ಸ್ತುತ್ಯವಾದುದು. ಆದರೆ ಹಾಸ್ಯರಸೋತ್ಪಾದನೆಯೊಂದೇ ನಾಟಕದ ಗುರಿಯೆಂದು ಅನೇಕ ನಾಟಕಕಾರರು ತಿಳಿದುಕೊಂಡಂತಿವೆ. ಇದರಿಂದ ನಮ್ಮ ನಾಟಕಸಾಹಿತ್ಯ ಒಮ್ಮುಖವಾಗಿದೆ. ಹಾಸ್ಯವಷ್ಟೇ ಏಕೆ, ಮಿಕ್ಕುಳಿದ ವೀರ, ಕರುಣ, ರೌದ್ರ ಮೊದಲಾದ ರಸಗಳೂ ನಮ್ಮ ನಾಟಕಸಾಹಿತ್ಯದಲ್ಲಿ ಹೊರಹೊಮ್ಮುವಂತಾಗಬೇಕು. ಅಂದರೆ ಅದು ಸರ್ವತೋಮುಖವಾಗುವುದು. ದುರಂತ ನಾಟಕಗಳಿಗೆ ವಿಶ್ವಸಾಹಿತ್ಯದಲ್ಲಿಯೇ ಉನ್ನತಸ್ಥಾನವಿದೆ. ದುರಂತವನ್ನು ನಮ್ಮ ಪ್ರಾಚೀನರು ಒಪ್ಪಿಕೊಳ್ಳದುದರಿಂದ ನಮ್ಮ ಸಂಸ್ಕೃತ ಸಾಹಿತ್ಯದಲ್ಲಿ ದುರಂತ ನಾಟಕಗಳು ಸುಖಾಂತಗಳಾದವು. ಆದರೆ ಈಗ ಜೀವನ ವಿಶಾಲವಾಗಿದೆ. ಸಾಹಿತ್ಯತತ್ತ್ವಗಳು ಬೇರೆಯಾಗಿವೆ. ಪ್ರತ್ಯಕ್ಷ ಜೀವನದಲ್ಲಿ ದುರಂತವನ್ನು ಅನುಭವಿಸುತ್ತೇವೆ, ಕಾಣುತ್ತೇವೆ. ಇದನ್ನು ನಮ್ಮ ಲೇಖಕರು ಮನದಂದು ಈ ದುರಂತದ ಹಿಂದಣ ತತ್ತ್ವವನ್ನು ಮಥಿಸಿ ನೋಡಿ, ಉತ್ತಮೋತ್ತಮವಾದ ದುರಂತ ನಾಟಕಗಳನ್ನು ಬರೆಯ ಬೇಕೆಂದು ಸೂಚಿಸಬಯಸುತ್ತೇನೆ.

ಕಾದಂಬರಿ

ಪ್ರಾಚೀನ ಕಾವ್ಯಗಳಲ್ಲಿ ಮಹಾಕಾವ್ಯಗಳು ಮಾಡುತ್ತಿದ್ದ ಕಾರ್ಯಗಳನ್ನು ಆಧುನಿಕ ಸಾಹಿತ್ಯದಲ್ಲಿ ಕಾದಂಬರಿಗಳು ಮಾಡಬಲ್ಲವು; ಮಾಡಬೇಕು. ನಮ್ಮ ಪುರಾತನ ಸಾಹಿತ್ಯದ ಅನೇಕ ಕೃತಿಗಳಿಗೆ ರಾಮಾಯಣ ಮಹಾಭಾರತಗಳು, ಜೈನಪುರಾಣಗಳು ವಸ್ತುವಾಗಿರುವುದನ್ನು ನಾವು ಕಾಣುತ್ತೇವೆ. ಜನಜೀವನದ ಆಧಾರದಿಂದ ಸ್ವಕಪೋಲ ಕಲ್ಪಿತವಾದ ಕಥೆಗಳನ್ನು ಬಳಸಿಕೊಂಡು ಬರೆದ ಕೃತಿಗಳೂ ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಬರೆದ ಕಾವ್ಯಗಳೂ ನಮ್ಮಲ್ಲಿ ಕಡಿಮೆಯೆಂದೇ ಹೇಳಬೇಕು. ಶಿವಶರಣರ ಚರಿತ್ರೆಗಳನ್ನು ಹೇಳುವ ವೀರಶೈವ ವಾಙ್ಮಯ ಇದಕ್ಕೆ ಅಪವಾದವೆಂದು ತೋರುತ್ತದೆ. ಇದರ ಜೊತೆಗೆ ಕಾದಂಬರಿ, ಲೀಲಾವತಿ, ಕುಮಾರರಾಮ ಸಾಂಗತ್ಯಗಳಂತಹ ಸ್ವತಂತ್ರ ವಸ್ತುವುಳ್ಳ ಕೆಲವು ಕೃತಿಗಳೂ ನಮ್ಮಲ್ಲಿ ಉಂಟೆಂಬುದನ್ನು ನೆನೆಯಬೇಕು. ಹೊಸ ಕಾದಂಬರಿ ಈ ದೃಷ್ಟಿಯಿಂದ ಭಿನ್ನವಾದುದಾಗಿದೆ. ಅದರ ವಸ್ತುವಿನ್ಯಾಸ, ವಿಷಯನಿರೂಪಣೆ, ಪಾತ್ರನಿರ್ಮಿತಿ ಎಲ್ಲವೂ ಹೊಸದು. ಕೆಂಪುನಾರಾಯಣನ ಮುದ್ರಾಮಂಜೂಷ, ಗಳಗನಾಥ ಹಾಗೂ ವೆಂಕಟಾಚಾರ್ಯರ ಕಾದಂಬರಿಗಳೊಡನೆ ನಮ್ಮ ಕಾದಂಬರಿ ಸಾಹಿತ್ಯದ ಪ್ರಥಮ ಘಟ್ಟ ಆರಂಭವಾಯ್ತು. ಅಲ್ಲಿ ತಂತ್ರ ಹಳೆಯದು; ಪಾತ್ರಸೃಷ್ಟಿಗೆ ಮಹತ್ವವಿಲ್ಲ; ರೋಮಾಂಚಕಾರಕ ಕಥೆ ಮಾತ್ರ ಇರುತ್ತದೆ. ನಡುನಡುವೆ ಉಪದೇಶವೂ ಧಾರಾಳವಾಗಿ ಬರುತ್ತದೆ. ಮೊದಲನೆಯ ಈ ಘಟ್ಟ ಮುಕ್ತಾಯವಾಗಿ ದ್ವಿತೀಯ ಘಟ್ಟ

ಪ್ರಾರಂಭವಾಗುತ್ತಲೇ, ಎಮ್. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಾರಾಯಾ', ಕೆರೂರ ವಾಸುದೇವಾಚಾರ್ಯರ 'ಇಂದಿರೆ' ಮೊದಲಾದ ಸ್ವತಂತ್ರ ಸಾಮಾಜಿಕ ಕಾದಂಬರಿಗಳು ಬೆಳಕಿಗೆ ಬಂದವು. ಕಾರಂತ, ಕುವೆಂಪು, ಅ. ನ. ಕೃ., ವಿ. ಕೃ. ಗೋಕಾಕ, ಬಸವರಾಜ ಕಟ್ಟೀಮನಿ, ಬಿ. ಪುಟ್ಟಸ್ವಾಮಯ್ಯ, ಕೆ. ವಿ. ಅಯ್ಯರ, ಮಿರ್ಜಿ ಅಣ್ಣಾರಾಯ, ಕೃಷ್ಣಮೂರ್ತಿ ಪುರಾಣಿಕ, ತ. ರಾ. ಸು., ನಿರಂಜನ ಮುಂತಾದ ಶ್ರೇಷ್ಠ ಲೇಖಕರು ಉತ್ತಮೋತ್ತಮವಾದ ಕಾದಂಬರಿಗಳನ್ನು ಕನ್ನಡಕ್ಕೆ ನೀಡಿರುವರು. ಕಾರಂತರ ಮರಳಿ ಮಣ್ಣಿಗೆ, ಕುವೆಂಪುರವರ ಕಾನೂರು ಹೆಗ್ಗಡಿತಿ, ಅ. ನ. ಕೃ. ಅವರ ಸಂಧ್ಯಾರಾಗ, ತ. ರಾ. ಸು. ಅವರ ಹಂಸಗೀತೆ, ಗೋಕಾಕರ ಸಮರಸವೇ ಜೀವನ, ಕೃಷ್ಣಮೂರ್ತಿಯವರ ಮಂಗಲಾಕ್ಷತೆ, ತ್ರಿವೇಣಿಯವರ ಬೆಕ್ಕಿನ ಕಣ್ಣು, ಕಟ್ಟೀಮನಿಯವರ ಸ್ವಾತಂತ್ರ್ಯದೆಡೆಗೆ ಮುಂತಾದವು ನಮ್ಮ ಕಾದಂಬರಿ ವೃಕ್ಷದ ಅತ್ಯಂತ ಸುಮಧುರ ಫಲಗಳು. 'ಮರಳಿ ಮಣ್ಣಿಗೆ' ಈಗಾಗಲೇ ಆಂಗ್ಲ ಭಾಷೆಗೆ ಪರಿವರ್ತನೆ ಹೊಂದಿರುವದು ಕನ್ನಡಿಗರಿಗೆ ಒಳ್ಳೆಯ ಅಭಿಮಾನದ ಸಂಗತಿಯಾಗಿದೆ. ಹೀಗೆಯೇ ಇನ್ನೂ ಉತ್ತಮವಾದ ಕಾದಂಬರಿಗಳು ಅನ್ಯಭಾಷೆಗಳಿಗೆ ಪರಿವರ್ತನ ಹೊಂದಿ ಕನ್ನಡದ ಶ್ರೇಯಸ್ಸು ಹೆಚ್ಚುವಂತಾಗಬೇಕು.

ಸ್ವಾತಂತ್ರ್ಯೋತ್ತರದ ಅವಧಿಯಲ್ಲಿ ಕನ್ನಡ ಸಾಹಿತ್ಯದ ಗಾತ್ರ ಹಿರಿದಾಗಿದೆ; ಸತ್ವ ಬಹಳ ಕಡಿಮೆಯಾಗಿದೆ. ಕಾದಂಬರಿ ಲೇಖಕರು ಕೇವಲ ಮನರಂಜನೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ತೀರ ಕೆಳದರ್ಜೆಯ ಕಾದಂಬರಿಗಳನ್ನು ಬರೆಯುತ್ತಿರುವುದು ಅತ್ಯಂತ ಶೋಚನೀಯ. ಸಾಹಿತ್ಯವು ಜನತೆಯ ಶೀಲಸಂವರ್ಧನೆಗೆ ಪೋಷಕವಾಗಬೇಕೆಂಬ ಮಾತನ್ನು ನಾವು ಈಗ ಪೂರ್ತಿಯಾಗಿ ಮರೆತುಬಿಟ್ಟದ್ದೇವೆ. ತತ್ಕಾಲೀನವಾದ, ಇಂದ್ರಿಯಗಳಿಗೆ ಪ್ರಚೋದಕವಾಗುವ ಕೃತಿಗಳಿಂದ ಲೋಕಕಲ್ಯಾಣವಾಗದು, ಆತ್ಮಕಲ್ಯಾಣವಾಗದು. ಪ್ರವಾಸಿಕರೂ ಬೀದಿಗರೂ ವಿಷಯಲಂಪಟರೂ ಓದಿಒಗೆಯಬಹುದಾದ ಕೃತಿಗಳಿಂದ ಯಾವ ಪ್ರಯೋಜನವೂ ಇಲ್ಲ. ಲೇಖಕರಿಗೆ ಹಣ ದೊರೆಯಬಹುದೆಂಬುದೇನೋ ನಿಜ; ಆದರೆ ಸಾಹಿತ್ಯಕನ ಮೇಲೆ ಸಮಾಜ ನಿರ್ಮಿತಿಯ ಹೊಣೆ ಇದೆಯೆಂಬುದನ್ನು ನಾವು ಮರೆಯಕೂಡದು. ಸಾಹಿತ್ಯಕನ ಶೀಲ ಕೆಳಗಿಳಿದಷ್ಟು ಅವನ ಕೃತಿಯ ಮಟ್ಟವೂ ಕೆಳಗಿಳಿಯುತ್ತದೆ. ಅದನ್ನೋದಿದ ಸಮಾಜದ ಶೀಲವೂ ಕೆಳಗಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ನೋಡಬೇಕು ರಾಶಿರಾಶಿಯಾಗಿ ಬರುತ್ತಿರುವ ನಮ್ಮ ಕಾದಂಬರಿ ಸಾಹಿತ್ಯವನ್ನು. ಇಂದು ಹುಟ್ಟಿ, ನಾಳೆ ಸಾಯುವ ಸಮಾಜವಿಘಾತಕಾರಿಯಾದ ಕೃತಿರಚನೆ ಅವಶ್ಯವಾಗಿ ನಿಲ್ಲಬೇಕು. ಜನ ಕೊಳ್ಳುತ್ತಿದೆಯೆಂದು ಬೇಕುಬೇಕಾದುದನ್ನು ಬರೆಯತೊಡಗಿದರೆ ಅದು ಹೊಣೆಗಾರಿಕೆಯಿಲ್ಲದ ಮಾತಾದೀತು. ಶಾಶ್ವತವಾದ ಕೃತಿ ಬರಬೇಕಾದರೆ ಜೀವನದಲ್ಲಿ ತಪಸ್ಸು ಮಾಡಬೇಕಾಗುವದು; ಅದನ್ನು ಸರಿಯಾಗಿ ಸಮಗ್ರವಾಗಿ ನಿರೀಕ್ಷಿಸಬೇಕಾಗುವದು. ಹೀಗೆ ಸಮಗ್ರತೆಯ ದೃಷ್ಟಿಯಿಂದ ಬರೆದ ಕೃತಿ ಬಹುಕಾಲ ಬಾಳುವುದು. ಸಮಾಜದ ಯಾವುದೇ ಒಂದು ಅಂಗವನ್ನು ಕುರಿತು ಶೀಲವಾದುದಷ್ಟನ್ನೇ ಬರೆಯಬೇಕೆಂದು ನಾನು ಪ್ರತಿಪಾದಿಸ ಹೊರಟಿಲ್ಲ. ಜೀವನವೆಲ್ಲವೂ ಸಾಹಿತ್ಯಕ್ಕೆ ವಸ್ತುವಾಗಬಲ್ಲುದು. ಯಾವ ವಸ್ತುವನ್ನು ತೆಗೆದುಕೊಂಡರೂ ಸಮಾಜದ ಸಲುವಾಗಿ ಕಳಕಳಿ, ಅನುಕಂಪೆಗಳಿಂದ ಒಡಗೂಡಿ, ಅದರ ನೈಜಚಿತ್ರವನ್ನು ಕಲಾತ್ಮಕವಾಗಿ ನಿರೂಪಿಸಿ, ವಾಸ್ತವತೆಯ ಮೇಲೆ ಆದರ್ಶದ ಮಂದಿರವನ್ನು ಕಟ್ಟಬೇಕು. ಅಂದರೆ, ಎಲ್ಲ ಕೃತಿಗಳಲ್ಲಿಯೂ ಆದರ್ಶವಿರಬೇಕೆಂದು ಅರ್ಥವಲ್ಲ, ವಾಸ್ತವಿಕವಾದ, ಸತ್ಯವಾದ, ಕಲಾಪೂರ್ಣವಾದ ನಿರೂಪಣೆಯ ಅಂತರಾಳದಿಂದಲೇ ಆದರ್ಶ ಧ್ವನಿತವಾಗಬೇಕು. ಇದನ್ನು ಮರೆತು ವಾಸ್ತವತೆಯ ನೆವದಲ್ಲಿ ಅಶ್ಲೀಲವಾದುದೆಲ್ಲವನ್ನೂ ಹೇಳಹೊರಟರೆ ಸಾಹಿತ್ಯ ಹದಗೆಟ್ಟು ಹೋಗುತ್ತದೆ.

ಇತಿಹಾಸವು ಕಾದಂಬರಿಗೆ ವಸ್ತು-ಸಾಮಗ್ರಿಯನ್ನು ಒದಗಿಸುತ್ತಿರುವುದು ಸ್ತುತ್ಯವಾಗಿದೆ. ಐತಿಹಾಸಿಕ ಕಾದಂಬರಿಗಳನ್ನು ಓದಿ ನಮ್ಮ ಜನತೆಗೆ ನಾಡುನುಡಿಗಳ ಬಗೆಗೆ ಆದರ, ಅಭಿಮಾನ ಹುಟ್ಟಿ, ಅವರು ಅಂದಿನ ಮಹಾಜೀವನದ ಪರಿಚಯವನ್ನು ಮಾಡಿಕೊಳ್ಳುತ್ತಾರೆ. ಹೊಸಜೀವನಕ್ಕೆ ಅಣಿಯಾಗಲು ಹಿಂದಿನ ಬಾಳಿನ ಚಿತ್ರ ಸಹಾಯಕವಾಗುತ್ತದೆ. ಆದರೆ, ಐತಿಹಾಸಿಕ ಕಾದಂಬರಿಗಳನ್ನು ಬರೆವ ವ್ಯಕ್ತಿಯ ಮೇಲೆ ಹೊಣೆಗಾರಿಕೆ

ಹೆಚ್ಚಾಗಿರುತ್ತದೆ. ಆತನು ಇತಿಹಾಸವನ್ನು ಸೂಕ್ಷ್ಮವಾಗಿ, ಶಾಸ್ತ್ರೀಯವಾಗಿ ಸಮಾಲೋಕನಮಾಡಿ ಸತ್ಯಸಂಗತಿಗಳನ್ನು ಸಂಗ್ರಹಿಸಬೇಕಾಗುವದು. ಈ ಸತ್ಯ ಸಂಗತಿಗಳನ್ನೇ ಮೂಳೆಗಳನ್ನಾಗಿ ಇರಿಸಿಕೊಂಡು ತನ್ನ ಪ್ರತಿಭೆಯ ಬಲದಿಂದ ಅದಕ್ಕೆ ಮಾಂಸ, ಮಜ್ಜೆ, ಜೀವಕಳೆ ಎಲ್ಲವನ್ನೂ ತುಂಬಿ, ಒಂದು ಸುಂದರವಾದ ವ್ಯಕ್ತಿಯನ್ನು ಆತನು ನಿರ್ಮಿಸಬೇಕಾಗುತ್ತದೆ. ಈ ದಿಸೆಯಲ್ಲಿ ಸಾಮಾಜಿಕ ಕಾದಂಬರಿಕಾರನಿಗಿರುವ ಸ್ವಾತಂತ್ರ್ಯ, ಐತಿಹಾಸಿಕ ಕಾದಂಬರಿಕಾರನಿಗೆ ಇರುವುದಿಲ್ಲ. ಅವನ ನಿರ್ಮಿತಿ ಐತಿಹಾಸಿಕ ಸತ್ಯಕ್ಕೆ ವಿರೋಧವಾಗಿರಕೂಡದು. ಕಾಲ ಗರ್ಭವನ್ನು ಪ್ರವೇಶಿಸಿ ಅಂದಿನ ಜನಜೀವನದ ರೀತಿನೀತಿಗಳು ಕಾರ್ಯಕಲಾಪಗಳು—ಇವನ್ನೆಲ್ಲ ಐತಿಹಾಸಿಕ ಆಧಾರಗಳ ಬಲದಿಂದ, ಅವುಗಳ ಅಭಾವವಿದ್ದಲ್ಲಿ ಕಲ್ಪನೆಯ ಕಣ್ಣುಗಳಿಂದ ಆತನು ಕಂಡುಕೊಳ್ಳಬೇಕಾಗುವುದು.

ಈ ದೃಷ್ಟಿಯಿಂದ ಪರಿಶೀಲಿಸಿದರೆ ನಮ್ಮ ಐತಿಹಾಸಿಕ ಕಾದಂಬರಿಕಾರರು ಸರಿಯಾಗಿ ಪರಿಶ್ರಮ ಮಾಡುತ್ತಿಲ್ಲವೆಂದೇ ಹೇಳಬೇಕಾಗುತ್ತದೆ. ಹಲವರು ಅವಸರದಲ್ಲಿ ಗೊತ್ತಿದ್ದಷ್ಟು ಸಂಗತಿಗಳನ್ನು ಸಂಗ್ರಹಿಸಿ, ಕಾದಂಬರಿಗಳನ್ನು ಬರೆದು ಅವುಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದರೆ, ಇನ್ನುಳಿದವರು ಕುಚೋದ್ಯತನದಿಂದ ಐತಿಹಾಸಿಕ ಸಂಗತಿಗಳಿಗೆ ವಿರೋಧವಾದ ಕೃತಿಗಳನ್ನು ರಚಿಸುತ್ತಿರುವರು. ಸಮಾಜದಲ್ಲಿ ಗಲಭೆ ಏಳುವದಕ್ಕೆ ಕಾರಣರಾಗುತ್ತಿರುವರು. 'ಹಿತೇನ ಯುಕ್ತಂ ಸಹಿತಂ ತಸ್ಯ ಭಾವಃ ಸಾಹಿತ್ಯಂ' ಎಂದು ನಮ್ಮವರು ಸಾಹಿತ್ಯದ ವ್ಯಾಖ್ಯೆಯನ್ನು ಕಟ್ಟಿರುವರು. ಸಮಾಜದಲ್ಲಿ ಒಡಕನ್ನುಹುಟ್ಟಿಸುವ, ಅದರ ಸ್ವಾಸ್ಥ್ಯವನ್ನು ಇಲ್ಲದಂತೆ ಮಾಡುವ, ಕ್ಷೋಭೆಯನ್ನು ಎಬ್ಬಿಸುವ ಕೃತಿಗಳನ್ನು ರಚಿಸಿ ಅದನ್ನೇ ಸಮರ್ಥಿಸಿಕೊಳ್ಳುವ ಸಾಹಸ ಕಾರ್ಯವನ್ನು ಮಾಡುತ್ತಿರುವರು. ಇದರಿಂದ ಸಾಹಿತ್ಯಕ್ಕೂ ಕಲ್ಯಾಣವಿಲ್ಲ, ಸಮಾಜಕ್ಕೂ ಕಲ್ಯಾಣವಿಲ್ಲ. ಇಂತಹ ಕೃತಿಗಳಿಗೆ ಸಮಾಜ, ಸರಕಾರ, ಸಂಘಸಂಸ್ಥೆಗಳು ಪ್ರೋತ್ಸಾಹ ಕೊಡದಿರುವುದು ನೆಟ್ಟಗೆ.

ಹರಟೆ–ಪ್ರಬಂಧ

ಹರಟೆ–ಪ್ರಬಂಧ ಎನ್ನುವ ಸಾಹಿತ್ಯಪ್ರಕಾರ ಕನ್ನಡಕ್ಕೆ ಹೊಚ್ಚ ಹೊಸದು. ಇಲ್ಲಿ ಲೇಖಕನು ಭಾವನಾಪರ ನಾಗಿಯೋ ಚಿಂತನಪರನಾಗಿಯೋ ವಿಮರ್ಶಕನಾಗಿಯೋ ವಿಡಂಬಕನಾಗಿಯೋ ಕಾರ್ಯ ಮಾಡುತ್ತಾನೆ. ಹರಟೆಗಳಲ್ಲಿ ತಿಳುಹಾಸ್ಯ ಝುರಿಯಾಗಿ ಹರಿದು ಸಹೃದಯನನ್ನು ಆನಂದ ಸಾಗರದಲ್ಲಿ ತೇಲಿಸುತ್ತದೆ. ಆದರೆ ಆ ಹರಟೆಯ ಗರ್ಭದಲ್ಲಿ ಲೇಖಕನು ಸಮಾಜದ ಗುಣದೋಷಗಳನ್ನು ಚಿತ್ರಿಸುತ್ತಿರುತ್ತಾನೆ. ಅದರ ವಾಸ್ತವ ಚಿತ್ರವನ್ನು ಕೊಟ್ಟು, ತನ್ನ ಹರಟೆಯ ಅಂಜನದಿಂದಲೇ ನಮ್ಮನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಾನೆ. ಪ್ರಬಂಧ ಇನ್ನೊಂದು ದೃಷ್ಟಿಯಲ್ಲಿ ವಿಶಿಷ್ಟವಾದುದು. ಇಲ್ಲಿ ಗಂಭೀರವಾದ ಆಲೋಚನೆಗಳು ಧಾರೆಧಾರೆಯಾಗಿ ಬರುತ್ತವೆ. ಭಾವಗಳು ಒಂದುಗೂಡಿ ಸುಂದರವಾಗಿ ಮಾಲೆಯಾಕಾರವನ್ನು ತಳೆಯುತ್ತವೆ. ಮಿಕ್ಕ ಸಾಹಿತ್ಯ ಪ್ರಕಾರಗಳಿಗಿರುವ ಕಟ್ಟುನಿಟ್ಟುಗಳು ಹರಟೆ, ಪ್ರಬಂಧಕಾರರಿಗಿಲ್ಲ; ಆದರೂ ಅದು ಸರ್ವಸ್ವತಂತ್ರವಲ್ಲ. ಎಲ್ಲವನ್ನೂ ಕಟ್ಟಿ ಆಳುವದು ಸಮಾಜ. ಅದನ್ನು ಅರ್ಶೈದು, ಅನುಭವಿಸಿ, ಪ್ರಬಂಧಕಾರನು ಚಿತ್ರಿಸುತ್ತಿರುತ್ತಾನೆ. ಹಾಸ್ಯ, ವಿಡಂಬನೆ, ಗಂಭೀರ ಆಲೋಚನೆ, ಯಾವ ಮಾರ್ಗವನ್ನೇ ಹಿಡಿದರೂ ಸಮಾಜದ ಕಲ್ಯಾಣ ಆತನ ಗುರಿಯಾಗಿರುತ್ತದೆ.

ಹರಟೆ-ಪ್ರಬಂಧ ಸಾಹಿತ್ಯವು ಕನ್ನಡದಲ್ಲಿ ಸಾಕಷ್ಟು ಪ್ರಮಾಣದಿಂದ ಬಂದಿಲ್ಲವೆಂದು ಹೇಳಬೇಕಾಗುತ್ತದೆ. ಮಿಕ್ಕ ಸಾಹಿತ್ಯಕ್ಷೇತ್ರಗಳಲ್ಲಿ ಪಡೆದಿರುವ ಸಿದ್ಧಿಯನ್ನು ಕನ್ನಡವು ಈ ದಿಸೆಯಲ್ಲಿ ಇನ್ನೂ ಪಡೆದಂತೆ ಕಂಡು ಬರುವದಿಲ್ಲ. ಶ್ರೀಯುತರಾದ, ನಾ. ಕಸ್ತೂರಿ, ಗೋರೂರು, ಡಾ|| ಶಿವರಾಂ, ಲಾಂಗೂಲಾಚಾರ್ಯ, ಬೀಚಿ, ನಾಡಿಗೇರ, ಸುಂಕಾಪೂರ ಮುಂತಾದವರು ಕನ್ನಡಕ್ಕೆ ಅತ್ಯುತ್ತಮವಾದ ಹರಟೆ–ಪ್ರಬಂಧ ಸಾಹಿತ್ಯವನ್ನು ಒದಗಿಸಿ ಕೊಟ್ಟಿರುವರು. ಈ ಬೆಳೆ ಇನ್ನೂಹುಲುಸಾಗಿ ಬಂದರೆ ನಮ್ಮ ಸಾಹಿತ್ಯದ ಶ್ರೀಮಂತಿಕೆ ಹೆಚ್ಚಾಗುತ್ತದೆ.

ವೃತ್ತಪತ್ರಗಳು

ವೃತ್ತಪತ್ರಗಳು ನಾಡಿನ ನಾಡಿ; ಸಮಾಜದ ಜೀವಾಳ; ಸರಕಾರಕ್ಕೆ ಅಂಕುಶ. ಆಧುನಿಕ ಜೀವನದಲ್ಲಿ ವೃತ್ತಪತ್ರಗಳಿಗಿರುವ ಮಹತ್ವದ ಸ್ಥಾನ ಇನ್ನಾವುದಕ್ಕೂ ಇದ್ದಂತೆ ಕಂಡುಬರುವುದಿಲ್ಲ. ವೃತ್ತಪತ್ರಗಳಿಲ್ಲದ ಸಮಾಜ, ನಾಡು, ಮುಂದೆ ಬರುವುದು ಸಾಧ್ಯವಿಲ್ಲ. ವಿಸ್ತಾರವಾಗಿರುವ ಜಗತ್ತನ್ನು ನಮ್ಮ ಕರತಲಾಮಲಕವಾಗುವಂತೆ ಮಾಡುವುದು ವೃತ್ತಪತ್ರಿಕೆ. ನೂತನ ಸಮಾಜವನ್ನು ನಿರ್ಮಿಸುವುದು ಅದರ ಉದ್ದೇಶ. ಇಷ್ಟು ಮಹತ್ವದ ವೃತ್ತಪತ್ರಿಕೆಗಳ ನಿರ್ಮಾತೃ ಸಾಹಿತಿ. ಅನೇಕ ಕಡೆ ವೃತ್ತಪತ್ರಿಕೆಗಳಿಗೂ ಸಾಹಿತ್ಯಕ್ಕೂ ಏನೂ ಸಂಬಂಧವಿಲ್ಲವೆಂಬ ಭ್ರಮೆಯಿರುವಂತೆ ತೋರುತ್ತದೆ. ಪತ್ರಿಕಾಕರ್ತನು ಪ್ರಥಮತಃ ಸಾಹಿತಿ. ಅವನಿಗೆ ರಾಜಕಾರಣ, ವಿಜ್ಞಾನ, ಸುಜ್ಞಾನ—ಈ ಎಲ್ಲ ವಿಷಯಗಳ ಮೇಲೆಯೂ ಅಭಿರುಚಿ, ಅಧಿಕಾರ ಇದ್ದರೂ ಹೃದಯದಲ್ಲಿ ಆತನು ಸಾಹಿತ್ಯಕಾರನಾಗಿರುತ್ತಾನೆ; ಸಮಾಜದ ನಾಡಿಯನ್ನು ಕಂಡುಹಿಡಿಯುತ್ತಾನೆ; ಗುಣದೋಷಗಳನ್ನು ನಿಕಷವಿಟ್ಟು ಪರೀಕ್ಷಿಸುತ್ತಾನೆ. ಸುಂದರವಾದ ಸಮಾಜನಿರ್ಮಾಣವಾಗುವುದಕ್ಕೆ ಬೇಕಾದ ವ್ಯಕ್ತಿಗಳನ್ನೂ ಸಂಘ ಸಂಸ್ಥೆಗಳನ್ನೂ ಸರಕಾರವನ್ನೂ ಆತನೇ ನಿರ್ಮಿಸುತ್ತಾನೆ. ಇಷ್ಟು ಶಕ್ತಿವಂತ ವೃತ್ತಪತ್ರಿಕಾಕರ್ತ! ಸಮಾಜಕ್ಕೆ ಬೇಕಾದ ಸಾಹಿತ್ಯವನ್ನು ಆತನು ಪ್ರಕಟಿಸಿ, ಅದರ ಹೊಸ ನಿರ್ಮಿತಿಗೆ ಕಾರಣನಾಗುತ್ತಾನೆ. ಆದುದರಿಂದಲೇ ಸಾಹಿತ್ಯಕರಲ್ಲಿ ವೃತ್ತಪತ್ರಿಕಾಕರ್ತನಿಗೂ ಒಂದು ವಿಶಿಷ್ಟವಾದ ಸ್ಥಾನವುಂಟು. ಭಾಷೆ ಬೆಳೆಯುವಂತೆ ಮಾಡುವ ಶ್ರೇಯಸ್ಸಿನ ಹೆಚ್ಚಿನ ಪಾಲು ವೃತ್ತಪತ್ರಿಕಾಕರ್ತರಿಗೆ ಸಲ್ಲುತ್ತದೆ. ದಿನಬೆಳಗೂ ಧಾರೆಧಾರೆಯಾಗಿ ಬರುತ್ತಿರುವ ನೂತನ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಸಮರ್ಥವಾಗುವಂತೆ ಹೊಸಹೊಸ ಶಬ್ದಗಳನ್ನುನಿರ್ಮಿಸುವ ಕಾರ್ಯವನ್ನು ಮಾಡುವವರೆಂದರೆ ಪತ್ರಿಕಾಕರ್ತರು; ಅವರ ಭಾಷೆ ತಿಳಿಯಾಗಿದ್ದಷ್ಟೂ ಶುದ್ಧವಾಗಿದ್ದಷ್ಟೂ ಜನತೆಗೆ ಒಳ್ಳೆಯದು. ಏಕೆಂದರೆ, ಅವರ ಭಾಷೆಯೇ ಜೀವನದಲ್ಲಿ ಬೆರೆಯುತ್ತದೆ.

ಕನ್ನಡ ವೃತ್ತಪತ್ರಿಕೆಗಳು ಭಾರತೀಯ ಪತ್ರಿಕಾ ವ್ಯವಸಾಯದಲ್ಲಿ ಗಣ್ಯವಾದ ಸ್ಥಾನವನ್ನು ಪಡೆದಿವೆಯೆಂದು ಹೇಳಲು ಅಭಿಮಾನವೆನಿಸುತ್ತದೆ. ಸಂಯುಕ್ತಕರ್ನಾಟಕ, ವಿಶ್ವವಾಣಿ, ಪ್ರಜಾವಾಣಿ, ತಾಯಿನಾಡು, ಜನವಾಣಿ ಮುಂತಾದ ದಿನಪತ್ರಿಕೆಗಳು ಕನ್ನಡನಾಡಿನ ಸರ್ವಾಂಗೀಣ ಉನ್ನತಿಗೆ ಪೋಷಕವಾಗಿವೆ. ಉತ್ತಮ ಸಾಹಿತ್ಯ ಪ್ರಕಟನೆಗೂ ಅವು ಎಡೆಕೊಟ್ಟಿವೆ. ಉದ್ವೇಗ, ರಭಸ, ಏಕಪಕ್ಷೀಯತೆಗಳಿಗೆ ಎಡೆಗೊಡದೆ ನಮ್ಮ ಪತ್ರಿಕೆಗಳು ವಿಶಾಲವಾದ ದೃಷ್ಟಿಯನ್ನಿಟ್ಟುಕೊಂಡಿರುವುದು ಗಮನಾರ್ಹವಾಗಿದೆ. ಈ ಭಾವನೆ ಇನ್ನೂ ಬಲಿದು ನಮ್ಮ ವೃತ್ತಪತ್ರಿಕೆಗಳು ಯಾವ ಜಾತಿ, ಮತ, ಪಕ್ಷ, ಪಂಗಡಗಳಿಗೆ ಅಂಟಿಕೊಳ್ಳದೆ, ಸಮಗ್ರ ನಾಡಿನ ಹಿತವನ್ನೇ ಮುಂದಿಟ್ಟುಕೊಂಡು ಹೋಗುವಂತೆ ಆಗಲೆಂದು ಹಾರೈಸುತ್ತೇನೆ.

ವಿಮರ್ಶೆ

ಉತ್ತಮ ವಿಮರ್ಶೆಯಿಲ್ಲದೆ ಉತ್ತಮ ಸಾಹಿತ್ಯ ನಿರ್ಮಾಣವಾಗಲಾರದು. ಸಾಹಿತ್ಯವಿಮರ್ಶಕನು, ಸಹೃದಯನಿಗೆ ಕೃತಿಯ ರಸಾಸ್ವಾದನೆ ಮಾಡಲು ಅನುಕೂಲವಾಗುವಂತೆ, ಕಾವ್ಯದ ಇಂಗಿತವನ್ನೆಲ್ಲ ಬಿಚ್ಚಿ ಬಿಚ್ಚಿ, ಹಿಂಜಿ ಹಿಂಜಿ ತೋರಿಸುತ್ತಾನೆ. ಇದು ಹಲವು ಸಲ ಅತ್ಯಾವಶ್ಯಕ. ಭಾವಗರ್ಭಿತನಾದ ಕವಿಯ ವಿಚಾರಗಳು ಅನೇಕ ಸಲ ಸೂಚ್ಯವಾಗಿರುತ್ತವೆ. ಸಾಮಾನ್ಯ ಸಹೃದಯನಿಗೆ ಅದರ ವ್ಯಂಗ್ಯ ಅನೇಕ ಸಲ ಅರ್ಥವಾಗದಿರುವ ಸಂಭವವುಂಟು. ವಿಮರ್ಶಕನು ತನ್ನ ಹೃದಯದಲ್ಲಿ ಕವಿಯ ಶಕ್ತಿಯನ್ನು ಹುದುಗಿಸಿಕೊಂಡಿರುವುದರಿಂದ ಅವನಿಗೆ ಆ ವ್ಯಂಗ್ಯದ ಅರ್ಥವಾಗುತ್ತದೆ. ಕವಿಯ ಇಂಗಿತವನ್ನು, ಕಾವ್ಯದ ಅಂತರಾಳವನ್ನು ವಿಮರ್ಶಕನು ಮಿಕ್ಕವರಿಗಿಂತಲೂ ಹೆಚ್ಚು ಅರ್ಥಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ಜೊತೆಗೆ ಅದನ್ನು ಹೆಚ್ಚು ಸ್ಪಷ್ಟವಾಗುವಂತೆ ಅಭಿವ್ಯಕ್ತಮಾಡುವ ಶಕ್ತಿಯನ್ನು ಪಡೆದಿರುತ್ತಾನೆ ಕವಿ ಮತ್ತು ವಿಮರ್ಶಕರು ಒಂದು ನಾಣ್ಯದ ಎರಡು

ಮುಖಗಳಿದ್ದಂತೆ. ಅವರಿಬ್ಬರಿಗೆ ಇರುವ ಅಂತರ ತೀರ ಕಡಿಮೆ. ವಿಮರ್ಶನ ಶಕ್ತಿ ಇಲ್ಲದ ಕವಿ, ಕಾವ್ಯಶಕ್ತಿ ಇಲ್ಲದ ವಿಮರ್ಶಕ— ಇಬ್ಬರೂ ಘನತೆಯನ್ನು ಪಡೆಯಲಾರರು. ಅಂತೆಯೇ ಒಂದು ಸಾಹಿತ್ಯ ಪರಿಪೂರ್ಣವಾಗಬೇಕಾದರೆ ಕವಿ, ವಿಮರ್ಶಕರಿಬ್ಬರೂ ಅಲ್ಲಿ ಹುಟ್ಟಿ ಬರಬೇಕು. ವಿಮರ್ಶಕನಿಂದ ಕವಿಯ ಕಾವ್ಯ, ಸಹೃದಯರ ಮನ ಮುಟ್ಟುವಂತಾಗುತ್ತದೆ. ಈ ಕಾರ್ಯವನ್ನು ಮಾಡುವುದರ ಜೊತೆಗೆ ವಿಮರ್ಶಕನು ಕವಿಯ ಓರೆ ಕೋರೆಗಳನ್ನು ಕತ್ತರಿಸಿ, ಅದು ಸುಂದರವಾಗುವಂತೆ ಮಾಡುತ್ತಾನೆ. ಈ ಕ್ರಿಯೆ ಕಾವ್ಯನಿರ್ಮಿತಿಗೆ, ಅಭಿವೃದ್ಧಿಗೆ ಅತ್ಯಾವಶ್ಯಕ. ಕವಿ ಸೃಷ್ಟಿಗೆ ಮಾನವಪ್ರಪಂಚ ಆಧಾರವಾದರೆ, ವಿಮರ್ಶಕನ ಸೃಷ್ಟಿಗೆ ಕವಿಸೃಷ್ಟಿ ಆಧಾರ. ಇವೆರಡೂ ಸೃಷ್ಟಿಗಳು ನೂತನ ಸೃಷ್ಟಿಗೆ ಪೋಷಕವಾಗುತ್ತವೆ.

ವಿಮರ್ಶೆ, ಸಾಹಿತ್ಯದಲ್ಲಿ ಇಷ್ಟು ಘನತರವಾದ ಪಾತ್ರವನ್ನಾಡುತ್ತದೆ. ಕನ್ನಡ ಸಾಹಿತ್ಯದಲ್ಲಿ ವಿಮರ್ಶೆಯ ಕೊರತೆಯಿದೆ ಎಂಬುದನ್ನು ಒಕ್ಕೊರಲಿನಿಂದ ಹೇಳಬೇಕಾಗುತ್ತದೆ. ಪ್ರಾಚೀನ ಕನ್ನಡದಲ್ಲಿ ವಿಮರ್ಶಕರನ್ನು ಕವಿಗಳು ಹೇಗೆ ಕಾಣುತ್ತಿದ್ದರೆಂಬುದು ಸಂಶೋಧನೆಯ ವಿಷಯವಾಗಿದೆ. ಕಾವ್ಯವನ್ನು ಬರೆದು ಮುಗಿಸಿದ ಮೇಲೆ ಹಲವು ಜನ ಪಂಡಿತರ ಕಡೆಯಿಂದ ತಿದ್ದಿಸಿದ ಉದಾಹರಣೆಗಳೂ ಇವೆ.

ರತ್ನಪರೀಕ್ಷಕನಾಂ ಕೃತಿ ।
ರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾ ।
ರತ್ನಮುಮಂ ರನ್ನನ ಕೃತಿ ।
ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೇ ॥

ಎಂದು ವಿಮರ್ಶಕರನ್ನು ಬೆದರಿಸಿದ ರನ್ನನು, ಕೇಶಿಯೆಂಬ ಪಂಡಿತನಿಂದ ತನ್ನ ಗದಾಯುದ್ಧವನ್ನು ತಿದ್ದಿಸಿಕೊಂಡಿದ್ದಾನೆ! ಹಲವು ಜನ ಉದ್ದಾಮ ಕವಿಗಳು ತಮ್ಮ ಕೃತಿರಚನೆಗೆ ಪಂಡಿತರು ಪ್ರೇರಕರಾದುದನ್ನು ಸೂಚಿಸಿರುತ್ತಾರೆ—

"ಪಂಡಿತರೆ ತಗುಳ್ದು ಬಿಚ್ಚಳಿಸೆ" ತನ್ನ ಕೃತಿಯನೊರೆದೆನೆಂದು ಪಂಪನು ಹೇಳುತ್ತಾನೆ.

"ಎರವಿನ ಪಚ್ಚಮುಂ ತಳೆದಿದಕ್ಕೆಣೆವಾರದಿದೆಂದು ಲೋಗರಾ ।
ಭರಣಮನೇಳಿಪಂತೆ ತನಗಿಲ್ಲದೆ ಸಾರಕವಿತ್ವಮುನ್ಕ ಕಾ- ।
ವ್ಯರುಚಿರಪದ್ಯಮಂ ಪಠಿಸಿ ಸತ್ಕವಿನಿರ್ಮಿತ ಪದ್ಯಮಿಂತಿದ ।
ಕ್ಕೊರೆಯೆಯೆನುತ್ತೆ ಕಾಳ್ಗೆಡೆವನಂ ನಗದಿರ್ಪರೇ ಬಲ್ಲ ಸಜ್ಜನರ್ ॥

ಎಂದು ಮಹಾಕವಿ ಷಡಕ್ಷರದೇವನು ಕಾವ್ಯಶಕ್ತಿ ಇಲ್ಲದ ವಿಮರ್ಶಕನನ್ನು ಹೀಗಳೆದಿದ್ದಾನೆ. ವಿಮರ್ಶೆಯ ಕುರುಹುಗಳೂ, ಬೀಜಗಳೂ ಅಲ್ಲಲ್ಲಿ ಗೋಚರಿಸಿದರೂ ಅದು ಒಂದು ಸಾಹಿತ್ಯ ಪ್ರಕಾರವಾಗಿ ಪ್ರಾಚೀನ ಕನ್ನಡದಲ್ಲಿ ಬೆಳೆದು ಬಂದಿಲ್ಲವೆಂದೇ ಹೇಳಬೇಕಾಗುತ್ತದೆ. ವಿಮರ್ಶೆಗೆ ನಮ್ಮ ಸಾಹಿತ್ಯದಲ್ಲಿ ಸ್ವತಂತ್ರ ಸ್ಥಾನ ಬಂದುದು ೨೦ನೆಯ ಶತಮಾನದಲ್ಲಿಯೇ. ಈ ಕಾರ್ಯ ಪ್ರಕಟವಾದುದು ಮೂರು ದೃಷ್ಟಿಗಳಿಂದ.

ಮೊದಲನೆಯದು, ಆಧುನಿಕ ಸಾಹಿತ್ಯದ ನವೋದಯ ಕಾಲದಲ್ಲಿ, ಪುರಾತನ ಕಾವ್ಯಗಳನ್ನು ಬೆಳಕಿಗೆ ತರಬೇಕೆಂಬ ಸದುದ್ದೇಶದಿಂದ ಆ ಕೃತಿಗಳನ್ನು ಪ್ರಕಟಿಸಿ, ಅವುಗಳ ಬಗೆಗೆ ವಿಮರ್ಶಾತ್ಮಕವಾದ ಮುನ್ನುಡಿಯನ್ನು ಬರೆಯುವುದು. ಎರಡನೆಯದಾಗಿ, ಮಹತ್ವದ ಕವಿಗಳನ್ನು ಕುರಿತು ಪ್ರಶಸ್ತಿಗ್ರಂಥಗಳನ್ನೂ ವಿಮರ್ಶಾಗ್ರಂಥಗಳನ್ನೂ ಪ್ರಕಟಿಸುವುದು. ಮೂರನೆಯದಾಗಿ, ಬೆಳೆಯುತ್ತಿರುವ ಹೊಸ ಸಾಹಿತ್ಯವನ್ನು ಸಮೀಕ್ಷಣೆ ಮಾಡುವುದು; ಪ್ರಕಟವಾಗುತ್ತಿರುವ ಗ್ರಂಥಗಳನ್ನು ವಿಮರ್ಶಿಸುವುದು. ಈ ಮೂರು ದಿಶೆಗಳಲ್ಲಿಯೂ ಕಾರ್ಯ ಕನ್ನಡದಲ್ಲಿ ಸ್ವಲ್ಪ ಮಟ್ಟಿಗೆ ನಡೆದಿದೆ.

ಪ್ರಾಚೀನ ಗ್ರಂಥಗಳನ್ನು ಸಂಸ್ಕರಣಗೊಳಿಸಿ ಪ್ರಕಟಿಸುವ ಕಾರ್ಯವನ್ನು ಟಿ. ಎಸ್. ವೆಂಕಣ್ಣಯ್ಯ, ಡಾ. ಪಿ. ಜಿ. ಹಳಕಟ್ಟಿ, ರಾಮಾನುಜ ಅಯ್ಯಂಗಾರ್, ಎಸ್. ಜಿ. ನರಸಿಂಹಾಚಾರ್, ಶಿ. ಶಿ. ಬಸವನಾಳ, ತೀ. ನಂ. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ, ಡಾ. ಆರ್. ಸಿ. ಹಿರೇಮಠ, ಸಂ. ಶ್ರೀ. ಭೂಸನೂರಮಠ ಎಚ್. ದೇವೀರಪ್ಪ, ಎನ್. ಬಸವಾರಾಧ್ಯ, ಪಂಡಿತ ಬಸಪ್ಪ, ಎಂ. ಮರಿಯಪ್ಪ ಭಟ್ಟ, ಎಲ್. ಬಸವರಾಜು, ಮೊದಲಾದವರು ನೆರವೇರಿಸಿರುವರು. ಆದರೆ ನಮ್ಮ ಪ್ರಾಚೀನ ಸಾಹಿತ್ಯ ಅಪಾರವಾಗಿರುವುದರಿಂದ ಈ ಕಾರ್ಯ ಕೆಲವೇ ವ್ಯಕ್ತಿಗಳಿಂದ ಮುಗಿಯುವಂತಿಲ್ಲ. ಸಹಸ್ರಾರು ಪಂಡಿತರು ಅವಿಶ್ರಾಂತ ಪರಿಶ್ರಮಪಟ್ಟು ಈ ಸಾಹಿತ್ಯವನ್ನು ಬೆಳಕಿಗೆ ತರಬೇಕಾಗಿದೆ.

ನಮ್ಮಲ್ಲಿ ಪ್ರಶಸ್ತಿಗ್ರಂಥಗಳನ್ನೂ, ವಿಮರ್ಶೆಗ್ರಂಥಗಳನ್ನೂ ಬರೆಯುವ ಕಾರ್ಯ ಸ್ವಲ್ಪ ಸಾವಧಾನವಾಗಿಯೇ ನಡೆದಿದೆ. ಪ್ರಶಸ್ತಿಗಳು ಕಡಿಮೆಯಾಗಿ ನಿಜವಾದ ವಿಮರ್ಶೆಗಳು ಬೆಳಕಿಗೆ ಬಂದರೆ ನಮ್ಮ ಸಾಹಿತ್ಯದ ನೈಜ ಬೆಲೆ ಗೊತ್ತಾಗುತ್ತದೆ. ನಮ್ಮಲ್ಲಿ ಹುಟ್ಟಿಬಂದ ಪ್ರಶಸ್ತಿ, ವಿಮರ್ಶೆ ಗ್ರಂಥಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಹೆಸರಿಸಬಹುದು. ಕುಮಾರವ್ಯಾಸ ಪ್ರಶಸ್ತಿ, ಹರಿಹರದೇವ, ಕವಿ ಲಕ್ಷ್ಮೀಶ, ಮುದ್ದಣ, ಅಭಿನವ ಪಂಪ, ಮಹಾಕವಿ ರಾಘವಾಂಕ ಇತ್ಯಾದಿ.

ನೂತನ ಸಾಹಿತ್ಯದ ವಿಮರ್ಶೆ ಇನ್ನೂ ಕಡಿಮೆ ಪ್ರಮಾಣದಲ್ಲಿ ಬಂದಿದೆ. ಆಗಾಗ ಬರುವ ಪುಸ್ತಕಗಳನ್ನು ಸಾದರ ಸ್ವೀಕಾರವೆಂದೋ, ಸಂಗ್ರಾಹ್ಯ ವಿಮರ್ಶೆಯೆಂದೋ ಹಲವು ಸಲ ವಿಮರ್ಶಿಸುವುದುಂಟು. 'ಈಚೆಗೆ ನಡೆದು ಬಂದ ದಾರಿ' ಪ್ರಕಟವಾಗಿದೆ. ಆದರೆ ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಪ್ರಾಂಜಲ ಮನಸ್ಸಿನ ವಿಮರ್ಶೆಗಿಂತಲೂ ಏಕಪಕ್ಷೀಯತೆಯೇ ಹೆಚ್ಚಾಗಿದ್ದುದು ಕಂಡು ಬರುತ್ತದೆ. ಕೃತಿವಿಮರ್ಶೆ ಮಾಡುವಲ್ಲಿ ಕೃತಿಯಲ್ಲಿರುವ ಗುಣದೋಷಗಳಿಗೆಹೆಚ್ಚು ಗಮನಕೊಡದೆ, ಆ ಕೃತಿಕಾರನ ಜಾತಿಮತ ಪಂಥಗಳ ಕಡೆಗೆ ವಿಶೇಷ ಲಕ್ಷ್ಯ ಹಾಕುತ್ತಿರುವುದು ಆಗಾಗ ಕಂಡುಬರುತ್ತದೆ. ಇಂಥ ಟೀಕೆ-ಟಿಪ್ಪಣಿಗಳು ನಿಂತು, ಶುದ್ಧ ವಿಮರ್ಶೆ ಹುಟ್ಟಿ ಬಂದರೆ ನಮ್ಮ ಸಾಹಿತ್ಯ ಹೆಚ್ಚು ಶುದ್ಧವಾಗುತ್ತದೆ, ಪ್ರಬಲವಾಗುತ್ತದೆ. ಈ ದಿಸೆಯಲ್ಲಿ ಎಸ್. ವಿ. ರಂಗಣ್ಣ, ಎಲ್. ಎಸ್. ಶೇಷಗಿರಿರಾವ್, ಶ್ರೀ ಕುರ್ತಕೋಟಿ, ವಿ. ಸೀ., ಕುವೆಂಪು, ಮುಗಳಿ, ಗೋಕಾಕ, ಕೆ. ನರಸಿಂಹಮೂರ್ತಿ, ಮಿರ್ಜಿ ಅಣ್ಣಾರಾಯ ಮುಂತಾದವರು ಶ್ರೇಷ್ಠ ಸೇವೆ ಸಲ್ಲಿಸಿದ್ದಾರೆ.

ಜ್ಞಾನ ಸಾಹಿತ್ಯ

ಭಾವಪೂರ್ಣವಾದ ಸಾಹಿತ್ಯವೇ ಪ್ರಧಾನವಾದ ಕಾಲ ಒಂದಿತ್ತು. ಆದರೆ, ಇದು ಜ್ಞಾನ ಪ್ರಧಾನವಾದ ಯುಗ. ನಮ್ಮ ಜ್ಞಾನಪ್ರಪಂಚ ಸಹಸ್ರ ಮುಖವಾಗಿ ಬೆಳೆಯುತ್ತಲಿದೆ. ವಿಜ್ಞಾನದ ಗಂಡುದಾಳಿಗೆ ಹಳೆಯ ಮೌಢ್ಯಗಳು ತೊಲಗಿ ಹೋಗಿ, ತರ್ಕಬದ್ಧವಾದ ಯುಗ ಈಗ ಆರಂಭವಾಗಿದೆ. ಇಂತಹ ಕಾಲದಲ್ಲಿ ವಾಙ್ಮಯದ ವ್ಯಾಪ್ತಿಯೂ ದೊಡ್ಡದಾಗಿದೆ. ಮಾನವನ ಜಿಜ್ಞಾಸೆ ನಾನಾಬಗೆಯಾಗಿ ಬೆಳೆಯುತ್ತಲಿದೆ. ಆತನ ಸರ್ವತೋಮುಖ-ವಾದ ಜ್ಞಾನ ಲಾಲಸೆಯನ್ನು ವಾಙ್ಮಯವು ಪೂರೈಸಿಕೊಡಬೇಕು. ಅಂತೆಯೇ ಇಂದು ಜಗತ್ತಿನಲ್ಲಿ ಸಾಹಿತ್ಯವನ್ನು ಎರಡು ದೃಷ್ಟಿಯಿಂದ ವಿಭಾಗಿಸುವುದುಂಟು:- ಒಂದು, ಶುದ್ಧಸಾಹಿತ್ಯ; ಇನ್ನೊಂದು, ಜ್ಞಾನಸಾಹಿತ್ಯ. ಈ ಎರಡು ವಿಭಾಗಗಳು ಪರಿಪೂರ್ಣಗೊಂಡಾಗಲೇ, ಸಾಹಿತ್ಯ ಜನಾಂಗದ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸಲು ಸಮರ್ಥವಾಗುತ್ತದೆ. ಇಂದು ಆಂಗ್ಲಭಾಷೆಯನ್ನು ಸಮೀಕ್ಷಣ ಮಾಡಿದರೆ ಜಗತ್ತಿನ ಪ್ರತಿಯೊಂದು ಜ್ಞಾನಾಂಶ-ವನ್ನು ಆ ಭಾಷೆಯ ಮುಖಾಂತರ ಅರಿಯಬಹುದಾಗಿದೆ. ಅಷ್ಟು ಹದಗೊಳಿಸಿದ್ದಾರೆ ಆಂಗ್ಲಭಾಷೆಯನ್ನು. ಆಂಗ್ಲಭಾಷೆ ಜಗತ್ತಿನ ಪ್ರಮುಖ ಭಾಷೆಗಳಲ್ಲಿ ಒಂದಾಗಿ, ಮಹಾಮೇಧಾವಿಗಳು ನೂತನ ವಿಚಾರಗಳನ್ನು ಆ ಭಾಷೆಯಲ್ಲಿಯೇ ವಿಚಾರಿಸುತ್ತಿರುವರು. ಅದರ ಮುಖಾಂತರವಾಗಿಯೇ ಅಭಿವ್ಯಕ್ತಮಾಡುತ್ತಿರುವರು. ಹೀಗಾಗಿ ಆಂಗ್ಲಭಾಷೆಯ ಶಕ್ತಿ ಹೆಚ್ಚಾಗಿದೆ; ವಾಙ್ಮಯದ ವ್ಯಾಪ್ತಿ ಹಿರಿದಾಗಿದೆ. ಅಂತಹ ಭಾಷೆಗಳನ್ನು ನೋಡಿ ಭಾರತೀಯ ಭಾಷೆಗಳ ಕಡೆಗೆ ನಾವು ಲಕ್ಷ್ಯಹಾಕಿದರೆ, ನಮ್ಮಲ್ಲಿ ಜ್ಞಾನಸಾಹಿತ್ಯದ ಕೊರತೆ ಬಹಳವಾಗಿದೆ ಎಂಬುದನ್ನು ನಾವು

ಒಪ್ಪಿಕೊಳ್ಳಬೇಕಾಗುತ್ತದೆ. ಆದರಲ್ಲಿಯೂ ಕನ್ನಡವು ತೀರಾ ಹಿಂದುಳಿದಿದೆ. ಅದು ಈಗ ತಾನೇ ಜ್ಞಾನ ಸಾಹಿತ್ಯದ ಕಡೆಗೆ ಕಣ್ದೆರೆಯತೊಡಗಿದಂತಿದೆ.

ನಮ್ಮಲ್ಲಿ ಜ್ಞಾನಸಾಹಿತ್ಯದ ಗಾತ್ರ ತೀರ ಚಿಕ್ಕದಾಗಿದೆ. ಇದ್ದ ಕೆಲವು ಗ್ರಂಥಗಳು ಭಾಷಾಂತರ, ಅವೂ ಪಠ್ಯಪುಸ್ತಕರೂಪದಲ್ಲಿ ಇರುವವು. ಕರ್ನಾಟಕ ಹಾಗೂ ಮೈಸೂರ ವಿಶ್ವವಿದ್ಯಾಲಯಗಳ ನೆರವಿನಿಂದ ರಸಾಯನಶಾಸ್ತ್ರ, ಭೌತಶಾಸ್ತ್ರ, ರೇಖಾಶಾಸ್ತ್ರ, ಪ್ರಾಣಿಶಾಸ್ತ್ರಗಳಿಗೆ ಸಂಬಂಧಪಟ್ಟ ಕೆಲವು ಪಠ್ಯಪುಸ್ತಕಗಳು ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಹೊರಬಂದಿವೆ. ಅರ್ಥಶಾಸ್ತ್ರವನ್ನು ಕುರಿತು ಹಣಪ್ರಪಂಚದಂತಹ ಒಂದೆರಡು ಗ್ರಂಥಗಳು ಬಂದಿವೆ. ಎನ್. ಎಸ್. ವೀರಪ್ಪ, ಆರ್. ಎಲ್. ನರಸಿಂಹಯ್ಯ ಮೊದಲಾದವರು ವಿಜ್ಞಾನಸಾಹಿತ್ಯದ ಕೆಲವು ಗ್ರಂಥಗಳನ್ನು ಕನ್ನಡದಲ್ಲಿ ಬರೆಯಲು ಪ್ರಯತ್ನ ಮಾಡಿರುವರು. ಆದರೆ ಒಟ್ಟಾರೆ ನೋಡಿದಾಗ ಜ್ಞಾನ ಸಾಹಿತ್ಯ ನಮ್ಮಲ್ಲಿ ಇನ್ನೂ ತೀರ ಶೈಶವಾವಸ್ಥೆಯಲ್ಲಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದು ಬೆಳೆಯಬೇಕಾದರೆ ಕೆಲವು ಅಂಶಗಳನ್ನು ನಾವು ಅವಶ್ಯವಾಗಿ ಗಮನಿಸಬೇಕಾಗುವದು. (೧) ನಮ್ಮಲ್ಲಿ ವೈಜ್ಞಾನಿಕ ವಿಚಾರವನ್ನು ಮಾಡುವ ಬುದ್ಧಿ ಮತ್ತೆ ಬೆಳೆಯಬೇಕು. ವೈಜ್ಞಾನಿಕ ಸಂಶೋಧಕರ ಸಂಖ್ಯೆ ಹೆಚ್ಚಾಗಿ, ಅವರು ಕನ್ನಡದಲ್ಲಿಯೇ ವಿಚಾರಿಸಲು ಪ್ರಯತ್ನ ಮಾಡಬೇಕು. ಈ ಹಿನ್ನೆಲೆಯಲ್ಲಿ ನೋಡಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ನಮ್ಮಲ್ಲಿ ಈಗ ನಾಡಿನ ಬಗೆಗೆ ಅಭಿಮಾನವೇನೋ ಜಾಗೃತವಾಗಿದೆ. ಆದರೆ ನುಡಿಯ ಬಗೆಗೂ ಅಭಿಮಾನ ಇನ್ನೂ ಜಾಗೃತವಾದಂತೆ ಕಂಡುಬರುವುದಿಲ್ಲ. ಪರಕೀಯ ಭಾಷೆಗಳಲ್ಲಿ ಮಾತನಾಡಿದರೆ, ಪರಕೀಯರ ಮಾತಿನಲ್ಲಿ ವಿಚಾರ ಮಾಡಿದರೆ, ತಮ್ಮ ಘನತೆ ಗೌರವಗಳು ಹೆಚ್ಚುತ್ತಿವೆಯೆಂದೂ, ಕನ್ನಡವು ತೀರಾ ಕ್ಷುಲ್ಲಕ ಭಾಷೆಯೆಂದೂ ಅನೇಕ ಜನರ ಅಭಿಪ್ರಾಯವಿದ್ದಂತೆ ತೋರುತ್ತದೆ. ಎಷ್ಟೇ ಹರಕುಮುರುಕಾಗಿಯಾದರೂ ಚಿಂತೆಯಿಲ್ಲ, ಆಂಗ್ಲ ಭಾಷೆಯ ಕಡೆಗೇ ಶರಣು ಹೋಗುವ ಪ್ರವೃತ್ತಿ ಇನ್ನೂ ನಮ್ಮಲ್ಲಿದೆ. ಆದರೆ ನಿಜವಾಗಿಯೂ ವಿಚಾರ ಮಾಡಿದರೆ ಜಗತ್ತಿನಲ್ಲಿ ಒಂದು ಭಾಷೆ ಕ್ಷುಲ್ಲಕವಾದುದೆಂದೂ, ಇನ್ನೊಂದು ಭಾಷೆ ಹಿರಿದಾದುದೆಂದೂ ಹೇಳಲು ಬರುವಂತಿಲ್ಲ. ಹಲವು ಶತಮಾನಗಳ ಹಿಂದೆ ಆಂಗ್ಲಭಾಷೆಯೂ ಕನ್ನಡ ಮೊದಲಾದ ಭಾರತೀಯ ಭಾಷೆಗಳ ಸ್ಥಿತಿಯಲ್ಲಿಯೇ ಇದ್ದಿತು. ಆಂಗ್ಲ ಸಾಮ್ರಾಜ್ಯದೊಡನೆ ಆ ಭಾಷೆ ಸುತ್ತಲೆಲ್ಲ ಪಸರಿಸಿತು. ಎಲ್ಲಕ್ಕೂ ಮೇಲಾಗಿ ಆಂಗ್ಲರು ಪ್ರಾಂಜಲ ಮನಸ್ಸಿನಿಂದ ತಮ್ಮ ಭಾಷೆಗೆ ಅನ್ಯಭಾಷೆಯ ಶಬ್ದ, ಪ್ರಯೋಗ, ವಿಚಾರಗಳಿಗೆ ಆಸ್ಪದ ಮಾಡಿಕೊಟ್ಟರು. ಹೀಗಾಗಿ ಅವರ ಭಾಷೆ ಬೆಳೆಯಿತು. ಭಾರತೀಯ ಭಾಷೆಗಳು ಹಾಗೆ ಧೈರ್ಯಮಾಡಿ ದೇಶವಿದೇಶಗಳ ಪಾರಿಭಾಷಿಕಗಳನ್ನೂ ಶಬ್ದಗಳನ್ನೂ ಸ್ವೀಕರಿಸಿ ನಮ್ಮ ಭಾಷೆಗಳನ್ನು ಹದಗೊಳಿಸಿದರೆ, ಅವು ಸಹ ಹಿರಿದಾಗುವದರಲ್ಲಿ ಸಂದೇಹವಿಲ್ಲ. ಮುಖ್ಯತಃ ಅಂತಹ ಮನಸ್ಸು ಬೇಕು. ಆಂಗ್ಲ ಭಾಷೆಯಿಂದಲೇ ನಮಗೆ ವೈಜ್ಞಾನಿಕಮೋಕ್ಷ ದೊರೆಯಬಹುದೆಂದು ಕೈಮುಚ್ಚಿಕೊಂಡು ಕುಳಿತುಕೊಳ್ಳುವವರಿಗೆ ನಾವು ಏನನ್ನೂ ಹೇಳಬಯಸುವದಿಲ್ಲ. ಕೆಲವು ಐರೋಪ್ಯದ ಚಿಕ್ಕ ಚಿಕ್ಕ ದೇಶಗಳು ಆಂಗ್ಲ ಭಾಷೆಯನ್ನು ಮುಟ್ಟದೆ, ತಮ್ಮ ಭಾಷೆಗಳ ಮುಖಾಂತರವಾಗಿಯೇ ಜಗತ್ತಿನ ಜ್ಞಾನಭಾಂಡಾರವನ್ನು ಒದಗಿಸಿಕೊಳ್ಳುತ್ತಿರುವದನ್ನು ನಾವು ಗಮನಿಸಬೇಕು. ಆಂಗ್ಲಭಾಷೆಯನ್ನು ಬಿಡಬೇಕೆಂದು ನಾನು ಪ್ರತಿಪಾದಿಸುವದಿಲ್ಲ. ನೂರೈವತ್ತು ವರ್ಷಗಳ ಸತತ ಪ್ರಯತ್ನದಿಂದ ವಿಶ್ವವ್ಯಾಪ್ತಿಯನ್ನು ಪಡೆದ ಆ ಭಾಷೆ ನಮ್ಮ ದೇಶದಲ್ಲಿ ನೆಲೆನಿಂತಿದೆ. ನಮಗೆ ಸ್ವಾತಂತ್ರ್ಯದ ಮಂತ್ರೋಪದೇಶ ಮಾಡಿದೆ. ಜಗತ್ತಿನ ಜ್ಞಾನ ಭಾಂಡಾರದ ಅನೇಕ ದ್ವಾರಗಳನ್ನೂ ತೆರೆದು ಕೊಟ್ಟದೆ. ಎಲ್ಲಕ್ಕೂ ಮೇಲಾಗಿ ಆ ಭಾಷೆಯ ಮೇಲೆ ವಾಕ್‌ಪ್ರೌಢಿಮೆಯನ್ನೂ ಲೇಖನ ಪ್ರೌಢಿಮೆಯನ್ನೂ ವಿಶ್ವವೇ ಅಚ್ಚರಿದಳೆವಂತೆ ಹಲವು ಭಾರತೀಯ ಮೇಧಾವಿಗಳು ಪಡೆದುಕೊಂಡಿದ್ದಾರೆ. ಆದುದರಿಂದ, ಇಂತಹ ದೊಡ್ಡ ಭಾಷೆಯನ್ನು ನಾವು ಬಿಡಬೇಕೆಂದು ಹೇಳುವ ಸಾಹಸಕ್ಕೆ ಕೈಹಾಕಲಾರೆವು. ಆದರೆ ಭಾರತೀಯ ಭಾಷೆಗಳನ್ನು ಕಡೆಗಣಿಸಿ ಆಂಗ್ಲಭಾಷೆಯ ಮೇಲೆ ಹಲವರಿಗಿರುವ ವ್ಯಾಮೋಹವನ್ನು ನಾವು ಖಂಡಿಸುತ್ತೇವೆ. ಕನ್ನಡ, ಇಂಗ್ಲೀಷ ಈ ಭಾಷೆಗಳು ಒಂದಕ್ಕೊಂದು ಪೂರಕವಾಗುವಂತೆ ನಮ್ಮ ನಾಡಿನಲ್ಲಿ ನೆಲೆಗೊಳ್ಳಬೇಕು. ವ್ಯಕ್ತಿತ್ವದ ಪೂರ್ಣವಿಕಾಸ, ರಾಷ್ಟ್ರೀಯ ಐಕ್ಯತೆ—ಇಂತಹ ಮಹತ್ವದ ಸೂತ್ರಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಜೀವನದಲ್ಲಿ ಆಯಾ ಭಾಷೆಗಳ ಸ್ಥಾನಮಾನ-

ವೇನೆಂಬುದನ್ನು ಸರಿಯಾಗಿ ತಿಳಿದುಕೊಂಡು ಮುಂದೆ ಸಾಗುವದು ವಿಹಿತ. ಅಂಧಶ್ರದ್ಧೆ ಈ ದಿಶೆಯಲ್ಲಿ ಅಹಿತಕಾರಿಯಾದುದು.

ಇನ್ನೊಂದು ವಿಷಯ : ಭಾರತೀಯ ಭಾಷೆಗಳಲ್ಲಿ—ಪಾರಿಭಾಷಿಕ ಶಬ್ದಗಳ ಕೊರತೆಯಿದೆಯೆಂಬ ಕೂಗು ಪ್ರಬಲವಾಗಿ ಕೇಳಬರುತ್ತಿದೆ. ಇದು ನಿಜ. ಯಾವುದೇ ವಿಶಿಷ್ಟ ಜ್ಞಾನವನ್ನು ವ್ಯಕ್ತಮಾಡಬೇಕಾದರೆ ಆ ಕ್ಷೇತ್ರಗಳ ಪರಿಭಾಷೆಗಳನ್ನೂ, ಸಂಕೇತಗಳನ್ನೂ, ಬಳಸಲೇಕಾಗುತ್ತದೆ. ಅದುದರಿಂದ ನಮ್ಮ ಭಾಷೆಗಳಲ್ಲಿ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಅಣುಶಾಸ್ತ್ರಗಳಂತಹ ಹೊಸ ವಿಚಾರಗಳನ್ನು ವ್ಯಕ್ತಮಾಡಲು ಪ್ರಯತ್ನಿಸಿದರೆ ಪಾರಿಭಾಷಿಕ ಶಬ್ದಗಳ ಕೊರತೆ ಸಹಜವಾಗಿಯೇ ಕಂಡುಬರುತ್ತದೆ. ಈ ದಿಸೆಯಲ್ಲಿ ಸಮಗ್ರ ಭಾರತೀಯ ಭಾಷೆಗಳಿಗೆ ಸಾಮಾನ್ಯವಾಗಬಹುದಾದ ಒಂದು ಪಾರಿಭಾಷಿಕ ಕೋಶವನ್ನು ಸಿದ್ಧಪಡಿಸಿಕೊಳ್ಳುವುದು ವಿಹಿತವಾದುದು. ಹೀಗೆ ಮಾಡುವಲ್ಲಿ ಅಂತರರಾಷ್ಟ್ರೀಯ ಪಾರಿಭಾಷಿಕ ಕೋಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಈಗ ಜ್ಞಾನ, ವಿಲಕ್ಷಣಗತಿಯಿಂದ ಮುಂದುವರಿಯುತ್ತಿದೆ. ಜಗತ್ತೆಲ್ಲ ಒಂದೇ ಕುಟುಂಬವಾಗುವಷ್ಟು ಚಿಕ್ಕದಾಗುತ್ತ ನಡೆದಿದೆ. ವಸ್ತುಸ್ಥಿತಿ ಹೀಗಿರುವಾಗ, ಪ್ರತಿಯೊಬ್ಬರೂ ನಮ್ಮ ನಮ್ಮ ಭಾಷೆಯ ಪಾರಿಭಾಷಿಕ ಶಬ್ದಗಳನ್ನೇ ಬಳಸುತ್ತ ನಡೆದರೆ ಅಷ್ಟು ಮಟ್ಟಿಗೆ ಜ್ಞಾನ ಪ್ರವಾಹಕ್ಕೆ ತಡೆಯನ್ನು ಹಾಕಿದಂತಾಗುತ್ತದೆ. ಆದುದರಿಂದ, ವಿಶಾಲವಾದ ಮನೋಭಾವನೆಯಿಂದ ನಾಡಿನ ತಜ್ಞಜನರ ಸಮಿತಿಯೊಂದನ್ನು ನಿಯಮಿಸಿ ಇಂತಹ ಪಾರಿಭಾಷಿಕ ಕೋಶವೊಂದನ್ನು ನಿರ್ಮಿಸುವುದು ತೀರ ಅವಶ್ಯವಾಗಿದೆ. ಇದು ಕೇಂದ್ರ ಸರಕಾರದ ಹೊಣೆ ಎಂಬುದನ್ನು ನಾವು ಬೇರೆ ಹೇಳಬೇಕಾಗಿಲ್ಲ.

ಇದುವರೆಗೆ ನಮ್ಮ ಸಾಹಿತ್ಯದ ನಾನಾ ಪ್ರಕಾರಗಳ ಸ್ಥಿತಿಯೇನೆಂಬುದನ್ನೂ ಅವುಗಳ ಗತಿಗೆ ಅವಶ್ಯಕವಾದ ಒಂದೆರಡು ಸೂಚನೆಗಳನ್ನೂ ಕೊಟ್ಟುದಾಯಿತು. ಈಗ ನಮ್ಮ ನಾಡಿನ ಅಭಿವೃದ್ಧಿಗೆ, ಸಂಸ್ಕೃತಿಯ ಬೆಳವಣಿಗೆಗೆ ಸಹಾಯಕವಾಗಬಹುದಾದ ಕೆಲವು ವಿಚಾರಗಳನ್ನು ಮಹಾಜನಗಳ ಮುಂದೆ ಇಡಬಯಸುತ್ತೇನೆ.

ಭಾವೈಕ್ಯತೆ

ಭಾರತವು ಇಂದು ಎಂದಿಲ್ಲದ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ನಮ್ಮ ನಾಡಿನ ನೆರೆಹೊರೆಯ ರಾಷ್ಟ್ರಗಳು ಭಾರತದ ಮೇಲೆ ಆಕ್ರಮಣ ಮಾಡುವ ಪ್ರವೃತ್ತಿಗಳನ್ನು ತೋರಿಸುತ್ತಲಿವೆ. ಉತ್ತರದಲ್ಲಿ ಚೀನ, ವಾಯವ್ಯದಲ್ಲಿ ಪಾಕಿಸ್ತಾನ ಭಾರತವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ಸ್ವಾರ್ಥಸಾಧನೆಗಾಗಿ ಪ್ರಕ್ಷುಬ್ಧ ವಾತಾವರಣವನ್ನು ಹುಟ್ಟಿಸಹತ್ತಿವೆ. ಭಾರತವು ಈಗ ಮುಕ್ಕಣ್ಣವಿರಾಟಪುರುಷನ ಸ್ವರೂಪವನ್ನು ತಳೆಯಬೇಕಾಗಿದೆ. ತನ್ನ ಅಂತಃಶಕ್ತಿ, ಆತ್ಮಬಲ ಏನೆಂಬುದನ್ನು ಜಗತ್ತಿಗೆ ತೋರಿಸಿಕೊಡಬೇಕಾಗಿದೆ. ಇಂಥ ಸಮಯದಲ್ಲಿ ನಾವೆಲ್ಲರೂ ಐಕ್ಯಭಾವನೆಯಿಂದಿರುವದು ಅವಶ್ಯವಾಗಿದೆ. ನಮ್ಮ ದೇಶದ ವಿವಿಧ ರಾಜಕೀಯ ಪಕ್ಷಗಳಾಗಲೀ ಬೇರೆಬೇರೆಯ ಜನರಾಗಲೀ ಎಲ್ಲರೂ ತಮ್ಮ ತಮ್ಮ ವೈಯಕ್ತಿಕತೆಯನ್ನು ಸ್ವಲ್ಪ ಕೆಳಗಿರಿಸಿ, ರಾಷ್ಟ್ರೀಯ ಭಾವನೆಯನ್ನೇ ಮುಂದೆ ಮಾಡಿಕೊಳ್ಳುವ ಕಾಲ ಈಗ ಬಂದಿದೆ. ಈ ಸಮಯದಲ್ಲಿ ಮಹಾಭಾರತದ ಒಂದು ಸನ್ನಿವೇಶ ಸ್ಮರಣೆಗೆ ಬರುತ್ತದೆ. ಗಂಧರ್ವನಾದ ಚಿತ್ರಾಂಗದನು ದುರ್ಯೋಧನನನ್ನು ಎತ್ತಿಕೊಂಡು ಹೋಗಿದ್ದಾನೆ. ವನವಾಸದಲ್ಲಿದ್ದ ಪಾಂಡವರಿಗೆ ಆ ಸಂಗತಿ ವೇದ್ಯವಾಗುತ್ತದೆ. ಕಣ್ಣೀರು ಸುರಿಸುತ್ತ ನಿಂತ ಭಾನುಮತಿಗೆ ಧರ್ಮರಾಯನು ಹೇಳುವ ಮಾತುಗಳಿವು:

> ಸುರಿಯಲ್ವೇಡಮುದರ್ಕೆಬಾಷ್ಪಜಳಮಂ ನಿನ್ನಾಣ್ಮನಂ ನಿನ್ನೊಳಿಂ
> ದಿರದಾಂ ಕೂಡುವೆವೆಮ್ಮೊಳಾದ ಕಲಹಕ್ಕಿಂತಾದೊಡಂ ಕೇಳ ನೂ
> ರ್ವರೆದಲ್ ಕೌರವರಾಮುಮಯ್ವರೆವಲಂ ಮತ್ತೊರ್ವರೊಳ್‌ತೊಟ್ಟ ಸಂ
> ಗರರಂಗಕ್ಕೆ ಜಸಕ್ಕೆಕೂಡುವೆಡೆಯೊಳ್‌ನೂಱಯ್ವರಾವಲ್ಲವೇ ॥

(ಪಂಪಭಾರತ ಆ. ೭ ಪ. ೩೬)

ಹೀಗೆ ಇಂದು ಪರಕೀಯ ಶಕ್ತಿಗಳು ನಮ್ಮ ಮೇಲೆ ಆಕ್ರಮಣ ಮಾಡುತ್ತಿರುವಾಗ, ಮೇಗಣ ಮನೋಭಾವನೆಯನ್ನು ತಳೆದು, ಭಾರತರಾಷ್ಟ್ರವೆಲ್ಲ ಒಂದು ಕಟ್ಟಾಗಬೇಕು; ಒಂದು ನಿಟ್ಟಾಗಬೇಕು. ನಾವೆಲ್ಲರೂ ಒಕ್ಕಟ್ಟಾದರೆ ಜಗತ್ತಿನ ಯಾವ ಶಕ್ತಿಯೂ ನಮ್ಮನ್ನು ಎದುರಿಸಲಾರದು. ಇನ್ನು ನಮ್ಮ ರಾಜ್ಯದತ್ತ ನಾವು ಹೊರಳಿದರೆ ನಮ್ಮಲ್ಲಿಯೂ ಅನೇಕ ಬಗೆಯ ತೊಡಕುಗಳು ತಲೆದೋರುತ್ತಿವೆ. ಒಡಕೇ ಕೆಡುಕಿನ ಮೂಲವೆಂಬುದನ್ನು ಕೇಳಿ, ಕಂಡು, ಅರಿತಿದ್ದರೂ ಅದೇ ಭಾವನೆಯಿಂದ ರಾಜಕೀಯ ಪಕ್ಷಗಳು ಮುಂದುವರಿಯತೊಡಗಿವೆ. ಜಾತಿ-ಜಾತಿಗಳ ಗಲಭೆ; ಪ್ರಾದೇಶಿಕ ಮನೋವೃತ್ತಿ ಇಂತಹ ಒಂದೇ, ಎರಡೇ, ಹಲವಾರು ವಿಷಮ ಪರಿಸ್ಥಿತಿಗಳು ನಮ್ಮಲ್ಲಿ ತಲೆದೋರುತ್ತಿವೆ. ಜಾತೀಯತೆಯ ಆರೋಪವನ್ನು ಹೆರವರ ಮೇಲೆ ಹೊರಿಸುವವರೇ ಅದಕ್ಕೆ ಕಾರಣರಾಗಿ, ಅಂತಹ ಪ್ರವೃತ್ತಿಗಳನ್ನು ತೋರಿಸುತ್ತಲಿರುತ್ತಾರೆ. ಹೀಗಾದರೆ ನೂತನವಾಗಿ ನಿರ್ಮಾಣಗೊಂಡ ನಮ್ಮ ರಾಜ್ಯ ಬಲವಾಗುವದೆಂತು? ಹಳೆಯ ಮೈಸೂರು, ಹೊಸ ಮೈಸೂರು, ಉತ್ತರ, ದಕ್ಷಿಣ ಎಲ್ಲವೂ ಕನ್ನಡವೇ. ಒಬ್ಬ ತಾಯಿಯ ಅಂಗಾಂಗಗಳಂತೆ ನಮ್ಮ ರಾಜ್ಯದ ನಾನಾಪ್ರದೇಶಗಳಿವೆ. ಯಾವುದು ಹೆಚ್ಚು? ಯಾವುದು ಕಡಿಮೆ? ಆಕೆಯ ಉಸುರಿನ ನಾನಾಪ್ರಭೇದಗಳಂತೆ, ನಮ್ಮ ಭಾಷೆಯ ಹಲವಾರು ವ್ಯತ್ಯಾಸಗಳಿವೆ. ಇದನ್ನು ಮನದಂದು ಕನ್ನಡದ ನೆಲ ಒಂದು; ಜಲ ಒಂದು; ಕುಲ ಒಂದು ಎಂಬ ಭಾವನೆ ನಮ್ಮಲ್ಲಿ ಬೇರೂರಿ, ಬಲವಾಗಬೇಕು. ನಿಜವಾದ ಕನ್ನಡದ ರಾಜ್ಯೋದಯವಾಗಬೇಕು. ಇಂತಹ ಪ್ರಾಂಜಲ ಮನಸ್ಸಿನಿಂದ, ಪರಿಶುದ್ಧ ಭಾವನೆಯಿಂದ ವಿಚಾರಿಸಿದರೆ ಈ ನಾಡಿನ ಹೆಸರು ಕರ್ನಾಟಕವೆಂದು ಏಕೆ ಆಗಬಾರದು? ನಾಡಿನ ಇತಿಹಾಸಕ್ಕೆ ಸತ್ಯವಾದಿಗಳಾಗಿ, ಆ ಸಂಸ್ಕೃತಿಯ ಪುರೋಗಾಮಿಗಳಾಗಿ ಜೀವಿಸುತ್ತಿರುವ ನಾವು ನಮ್ಮನ್ನು ಆ ಹೆಸರಿನಿಂದ ಕರೆದುಕೊಂಡರೆ ನಿಜವಾಗಿಯೂ ಅದೊಂದು ಭಾವೈಕ್ಯತೆಯ ಕುರುಹಾಗಬಲ್ಲದು. ಆ ಸಮಯ ಬೇಗನೇ ಸನ್ನಿಹಿತವಾಗಲೆಂದು ಪ್ರಾರ್ಥಿಸುತ್ತೇನೆ.

ಕರ್ನಾಟಕ ಗಡಿಗಳು

ನವರಾಜ್ಯೋದಯವಾದನಂತರ ಹಲಕೆಲವು ಕನ್ನಡ ಪ್ರದೇಶಗಳು ಇನ್ನೂ ಹೊರಗುಳಿದಿವೆ. ಸೊಲ್ಲಾಪೂರ, ಜತ್ತ, ಅಕ್ಕಲಕೋಟ, ಮಿರಜ, ಸಾಂಗ್ಲಿ, ಕಾಸರಗೋಡ, ನೀಲಗಿರಿ, ಅನಂತಪುರ, ಕರ್ನೂಲ ಮೊದಲಾದ ಗಡಿಪ್ರದೇಶಗಳಲ್ಲಿರುವ ಕನ್ನಡಿಗರು ನಮ್ಮ ರಾಜ್ಯದಲ್ಲಿ ಸೇರಿಕೊಳ್ಳಲು ಕಾತುರರಾಗಿದ್ದಾರೆ. ಈ ಸಮಯದಲ್ಲಿ ಎಲ್ಲರಿಗೂ ನ್ಯಾಯದೊರೆಯುವಂತೆ ಸಮದೃಷ್ಟಿಯಿಂದ, ಸಮ್ಯಕ್‌ದೃಷ್ಟಿಯಿಂದ ನಾವು ಪ್ರಯತ್ನಿಸಬೇಕು. ಗಡಿಪ್ರದೇಶ ವಿಷಯದಲ್ಲಿ ಹಲವು ಕಡೆ ಭಾವೋದ್ರೇಕ್ತವಾದ ಸನ್ನಿವೇಶಗಳು ಕಂಡುಬಂದಿವೆ. ಇದು ವಿಹಿತವಲ್ಲ. ಇದರಿಂದ ನಮ್ಮ ದೇಶದ ಐಕ್ಯತೆಗೆ ಭಂಗಬರುವ ಪ್ರಸಂಗವುಂಟು. ಇದನ್ನು ಲಕ್ಷದಲ್ಲಿಟ್ಟುಕೊಂಡು ಉಭಯ ರಾಜ್ಯಗಳು ಶಾಂತಚಿತ್ತರಾಗಿ ಈ ಸಮಸ್ಯೆಯನ್ನು ಬಿಡಿಸಿಕೊಳ್ಳಬೇಕು. ಕನ್ನಡ ಪ್ರದೇಶಗಳು ಕನ್ನಡರಾಜ್ಯದಲ್ಲಿ ಸಮಾವೇಶಗೊಳ್ಳಲೇಬೇಕು. ಸಮಾವೇಶಗೊಂಡಾಗಲೇ ಸರ್ವರಿಗೂ ಸಮೃದ್ಧಿ, ಸಂತುಷ್ಟಿ. ಭುವನೇಶ್ವರಿಯ ಹೃದಯ ವಿಶಾಲವಾಗಿದೆ. ಗಡಿನಾಡಿನ ಕನ್ನಡಿಗರ ಮೇಲೆಯೂ ಕರುಣಾನಿಧಿಯ ಕೃಪಾಕಟಾಕ್ಷ ಬೀಳದಿರದೆಂಬುದನ್ನು ಮರೆಯಲಾಗದು.

ಗೋವೆ

ರಾಷ್ಟ್ರನಾಯಕರ ಮುತ್ಸದ್ದಿತನ ಹಾಗೂ ನಮ್ಮ ಸೇನೆಯ ಸಾಹಸಗಳಿಂದ ನಾಲ್ಕುನೂರು ವರ್ಷಗಳಿಂದ ಭಾರತವನ್ನಗಲಿದ್ದ ಗೋವಾ ಮತ್ತೆ ತಾಯ್ನಾಡಿಗೆ ಸೇರಿದುದು ಸಂತಸದ ವಿಷಯ. ಕಾಲವನ್ನು ಭೇದಿಸಿ ಸ್ವಲ್ಪದೂರ ನೋಡಬೇಕು ನಾವು. ಗೋವೆ ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದಿತು. ಕದಂಬ ಮನೆತನ,

ಕರ್ನಾಟಕದ ಅತ್ಯಂತ ಪ್ರಾಚೀನ ರಾಜ ಮನೆತನಗಳಲ್ಲಿ ಒಂದೆಂಬುದನ್ನು ಹಿಂದೆ ನಾವು ನೋಡಿದ್ದೇವೆ. ಅವರು ಕರ್ನಾಟಕದ ಇತಿಹಾಸದಲ್ಲಿ ಕ್ರಿ. ಶ. ೪ನೆಯ ಶತಮಾನದಿಂದ ೧೨ನೆಯ ಶತಮಾನದ ವರೆಗೆ ಮಹತ್ವದ ಪಾತ್ರನ್ನಾಡಿದ್ದಾರೆ. ಬನವಾಸಿಯ ಕದಂಬರು, ಹಾನಗಲ್ಲಿನ ಕದಂಬರು, ಪಲಾಸಿ ಕದಂಬರು ಅಥವಾ ಗೋವೆಯ ಕದಂಬರು—ಎಲ್ಲರೂ ಒಂದೇ ಮನೆತನದವರು. ಗೋವೆ ಅಂದಿನಿಂದಲೂ ಕರ್ನಾಟಕದ ಅವಿಭಾಜ್ಯ ಅಂಗವಾಗಿ ಕನ್ನಡ ರಾಜರ ವಶದಲ್ಲಿತ್ತು. ಗೋವೆಯ ವರ್ತಕರು ಕ್ರಿ. ಶ. ೧೮೮೦ ರವರೆಗೂ ತಮ್ಮ ಲೆಕ್ಕಪತ್ರಗಳನ್ನು ಕನ್ನಡದಲ್ಲಿಯೇ ಇಡುತ್ತಿದ್ದರು. ವಿಜಯನಗರದ ಕಾಲದಲ್ಲಿ ಗೋವೆ ಕನ್ನಡರಾಜ್ಯದ ಒಂದು ಪ್ರಾಂತವಾಗಿದ್ದಿತು. ಮುಂದೆ ಅದು ಕೆಳದಿಯರಾಜರ ಆಧಿಪತ್ಯಕ್ಕೆ ಒಳಗಾಗಿದ್ದಿತು. ಈಗಲೂ ಸ್ವಾದಿಯ ಅರಸು ಮನೆತನದವರು ಗೋವೆಯಲ್ಲಿಯೇ ಇದ್ದಾರೆ. ಹೀಗೆ ಕನ್ನಡದ ಹೃದಯಕ್ಕೆ ಸಮೀಪವರ್ತಿಯಾದ, ಭೌಗೋಲಿಕ ಹಾಗೂ ಚಾರಿತ್ರಿಕ ಸಾಮೀಪ್ಯವನ್ನು ಪಡೆದ, ಗೋವಾ ಕರ್ನಾಟಕದ ಅವಿಭಾಜ್ಯ ಅಂಗವಾಗಲೆಂದು ಹಾರೈಸುತ್ತೇನೆ.

ನಮ್ಮ ಸರಕಾರ ಹಾಗೂ ಸಂಸ್ಕೃತಿ ಪ್ರಸಾರ

ನಮ್ಮ ಮೈಸೂರು ಸರಕಾರದ ಅಂಗವಾಗಿರುವ ಸಂಸ್ಕೃತಿ ಸಂವರ್ಧನ ಶಾಖೆ ಕಳೆದ ಹಲವಾರು ವರ್ಷಗಳಲ್ಲಿ ಅತ್ಯಂತ ಪ್ರಶಂಸನೀಯವಾದ ಕಾರ್ಯಮಾಡುತ್ತಿರುವದನ್ನು ನಾನು ಅತ್ಯಂತ ಅಭಿಮಾನದಿಂದ ಮಹಾಜನರಿಗೆ ತಿಳಿಸಬಯಸುತ್ತೇನೆ. ಮೈಸೂರು ಸರಕಾರವು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭಿವೃದ್ಧಿಗಾಗಿ ಕೈಕೊಂಡ ಕೆಲವು ಯೋಜನೆಗಳನ್ನು ಇಲ್ಲಿ ಸೂಚಿಸಬಹುದು.

(೧) **ಕನ್ನಡ ವಿಶ್ವಕೋಶ:—** ಕನ್ನಡ ಭಾಷೆಗೊಂದು ವಿಶ್ವಕೋಶದ ಕೊರತೆ ಇದೆ ಎಂಬುದನ್ನು ಪ್ರಾಯಶಃ ಹಿಂದಿನ ಸಮ್ಮೇಳನಾಧ್ಯಕ್ಷರು ತಿಳಿಸುತ್ತ ಬಂದಿದ್ದಾರೆಂಬುದನ್ನು ನಾವು ಸ್ಮರಿಸಬೇಕು. ಅಂದರೆ, ಅದು ಎಷ್ಟು ಮಹತ್ವದ ವಿಷಯವಾಗಿದೆ ಎಂಬುದರ ಅರಿವಾಗುತ್ತದೆ. ಈ ಕೊರತೆಯನ್ನು ಹೋಗಲಾಡಿಸಲು ನಮ್ಮ ಸರಕಾರದ ಶಿಕ್ಷಣಶಾಖೆಯ ಸಚಿವರೂ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳೂ ಸಂಸ್ಕೃತಿಶಾಖೆಯವರೂ ವಿಶೇಷವಾಗಿ ಪ್ರಯತ್ನಿಸುತ್ತಿರುವುದು ಸ್ತೋತ್ರಾರ್ಹವಾಗಿದೆ. ವಿಶ್ವಕೋಶದ ಬೃಹದ್‌ರೂಪರಚನೆಯಾಗಿದೆ; ಅನೇಕ ಸಮಿತಿಗಳು ರೂಪುಗೊಂಡಿವೆ; ರೂಪುಗೊಂಡ ಸಮಿತಿಗಳೆಲ್ಲವೂ ರಂಗಕ್ಕಿಳಿದಿವೆ. ನಾಡಿನ ಗಣ್ಯವಿದ್ವಾಂಸರ ಬರೆಹಗಳಿಗೆ ಆಹ್ವಾನವನ್ನೀಯಲಾಗಿದೆ. ಮಹತ್ವಪೂರ್ಣಲೇಖನಗಳು ಬರತೊಡಗಿವೆ. ಈ ಮಹಾಯೋಜನೆಯ ಸಾಧನೆಗಾಗಿ ಸರಕಾರವು ೨೫ ಲಕ್ಷ ರೂ. ಗಳನ್ನು ತೆಗೆದಿಟ್ಟಿದೆ. ಮಾದರಿಯ ಪ್ರಥಮ ಪುಟಗಳನ್ನು ಅಚ್ಚುಹಾಕಿಸಿ ವಿದ್ವಾಂಸರ ಅಭಿಪ್ರಾಯಕ್ಕೆ ಕಳಿಸಿದ್ದಾರೆ. ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಬೃಹತ್‌ಕೋಶ ಮುಗಿಯಬೇಕಾಗಿದೆ. ಅದಕ್ಕೆ ನಾಡಿನ ವಿದ್ವಾಂಸರು ಸರಿಯಾದ ಸಹಕಾರ ಸಹಾನುಭೂತಿಗಳನ್ನು ನೀಡಬೇಕೆಂದು ಪ್ರಾರ್ಥಿಸುತ್ತೇನೆ. ಅಂದರೆ ಕನ್ನಡ ನಾಡು, ನುಡಿ ತನ್ನ ಬಹುದೊಡ್ಡ ಕೊರತೆಯನ್ನು ಶೀಘ್ರದಲ್ಲಿಯೇ ತುಂಬಿಕೊಂಡಂತಾಗುತ್ತದೆ.

(೨) **ಗ್ರಂಥಪ್ರಕಟನೆ:—** ಮೈಸೂರು ಸರಕಾರದ ಅಂಗವಾದ ಸಂಸ್ಕೃತಿ ಪ್ರಕಾಶನ ಶಾಖೆಯು ಹಲವು ಮಹತ್ವದ ಗ್ರಂಥಗಳನ್ನು ಪ್ರಕಟಿಸುವ ಯೋಜನೆಯನ್ನು ಕೈಕೊಂಡು, ಆ ಗ್ರಂಥಗಳನ್ನು ಕಡಿಮೆ ಬೆಲೆಗೆ ಮಾರುತ್ತಿರುತ್ತಾರೆ. ಈಗಾಗಲೇ ಕುಮಾರವ್ಯಾಸನ ಭಾರತ, ಜೈಮಿನಿ ಭಾರತ, ಹರಿಶ್ಚಂದ್ರ ಕಾವ್ಯ, ಸರ್ವಜ್ಞನ ವಚನಗಳು, ಲೋಕಗೀತೆ ಮೊದಲಾದ ಕಾವ್ಯಗಳನ್ನೂ ಉಪನಿಷತ್ತು, ದ್ವೈತವೇದಾಂತ, ಶಕ್ತಿವಿಶಿಷ್ಟಾದ್ವೈತ ಮೊದಲಾದ ತಾತ್ವಿಕ ಗ್ರಂಥಗಳನ್ನೂ ಪ್ರಕಟಿಸಿರುವರು. ಶಿವಶರಣರ ವಚನಗಳು, ಹರಿದಾಸರ ಕೀರ್ತನೆಗಳು

ಇಷ್ಟರಲ್ಲಿಯೇ ಪ್ರಕಟವಾಗಲಿವೆ. ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಸಮಗ್ರವಾಗಿ ಬರೆಸುವ ಮಹತ್ವದ ಯೋಜನೆಯನ್ನು ನಮ್ಮ ಸರಕಾರವು ಕೈಕೊಂಡಿದೆ. ಆರುನೂರು ಪುಟಗಳ ಪ್ರಥಮ ಸಂಪುಟ ಆಂಗ್ಲಭಾಷೆಯಲ್ಲಿ ಇದೇ ಜಾನೇವರಿ ೨೬ರಂದು ಪ್ರಕಟವಾಗಲಿದೆ. "Karnatak through the Ages" ಎಂಬ ಗ್ರಂಥರಚನೆಯು ನಡೆದಿರುವುದೂ ತುಂಬಾ ಸಂತೋಷಕರ. ಪ್ರತಿವರ್ಷ ಲೇಖಕರಿಗೆ ಸಹಾಯಧನವನ್ನೂ ಬಹುಮಾನಧನವನ್ನೂ ಕೊಡುವ ಯೋಜನೆಯನ್ನೂ ನಮ್ಮ ಸರಕಾರ ಕೈಕೊಂಡಿದೆ. ಇದಕ್ಕಾಗಿ ಸರಕಾರವು ಪ್ರತಿವರ್ಷ ಸು. ೩೫೦೦೦ ರೂಪಾಯಿಗಳನ್ನು ವೆಚ್ಚ ಮಾಡುತ್ತದೆ. ಪ್ರಾಯಶಃ ಇಷ್ಟು ಹಣವನ್ನು ಲೇಖಕರ ಸಹಾಯಾರ್ಥವಾಗಿ ವೆಚ್ಚಮಾಡುತ್ತಿರುವಲ್ಲಿ ಮೈಸೂರು ಸರಕಾರವು ಅತ್ಯಂತ ಪುರೋಗಾಮಿಯಾಗಿದೆ ಎಂದು ತೋರುತ್ತದೆ. ಈ ಸಾಹಿತ್ಯ— ಸಂಸ್ಕೃತಿಯ ಕಾರ್ಯ ನಿರಂತರ ನಡೆಯಲೆಂದು ಸರಕಾರವು ರಾಜ್ಯ ಸಾಹಿತ್ಯ ಅಕಾದೆಮಿಯೊಂದನ್ನು ನಿರ್ಮಿಸಿದೆ. ಕನ್ನಡ-ಕನ್ನಡ ಕೋಶಕ್ಕೆ ೧೫ ಲಕ್ಷ ರೂಪಾಯಿಗಳ ಸಹಾಯಧನವನ್ನು ಸರಕಾರವು ಕನ್ನಡ ಸಾಹಿತ್ಯ ಪರಿಷತ್ತಿಗೆ ನೀಡಿದೆ. ಇವೆಲ್ಲವುಗಳ ಮುಖಾಂತರ ನಮ್ಮ ಸಾಹಿತ್ಯ— ಸಂಸ್ಕೃತಿಯ ಪ್ರಸಾರಕಾರ್ಯ ಭರದಿಂದ ನಡೆಯಬೇಕಾಗಿದೆ. ಈ ಎಲ್ಲ ಚಟುವಟಿಕೆಗಳಿಗೆ ನೆರವು ನೀಡುತ್ತಿರುವ ಸರಕಾರವನ್ನು ನೆನೆಯದಿರಲಾರೆ. ಇಷ್ಟರಿಂದಲೇ ನಾವು ತೃಪ್ತಿಗೊಳ್ಳದೆ ಅಪಾರವೂ, ಅಪರಿಮಿತವೂ ಆದ ನಮ್ಮ ನಾಡಿನ ಸಾಹಿತ್ಯ— ಸಂಸ್ಕೃತಿಗಳ ಪ್ರಸಾರಕಾರ್ಯವನ್ನು ಸರಕಾರವು ಶೀಘ್ರಗತಿಯಲ್ಲಿ ಮಾಡುತ್ತ ಹೋಗಿ ನಮ್ಮ ನಾಡಿಗೆ ಭೂಷಣಪ್ರದವಾಗಲೆಂದು ಹಾರೈಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಗೆ ಮೈವೆತ್ತ ಸಂಸ್ಥೆಗಳಲ್ಲಿ ಹಿರಿಯ ಸಂಸ್ಥೆ. ಅದು ತನ್ನ ಪಾಲಿನ ಕರ್ತವ್ಯವನ್ನು ಕಾಲಕಾಲಕ್ಕೆ ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುತ್ತ ಬಂದಿದೆ. ಏಕೈಕ ಕರ್ನಾಟಕ ಅಸಾಧ್ಯವೆಂದು ಅನೇಕರ ಮನದಲ್ಲಿದ್ದಾಗ, ಪರಿಷತ್ತು ಅದರ ಕನಸು ಕಂಡು, ಕೊನೆಗೆ ಅದು ನಿರ್ಮಾಣಗೊಂಡುದನ್ನೂ ಕಂಡಿತು ! ನಾಡಿನ ಪುಣ್ಯದ ಪೂರ್ವದಿಗಂತದಲ್ಲಿ ನವರಾಜ್ಯಭಾನು ಉದಯವಾದನು. ರಾಜ್ಯೋದಯವಾದ ಮೇಲೆ ಪರಿಷತ್ತು ತನ್ನ ಕರ್ತವ್ಯವನ್ನು ಇನ್ನೂ ಹೆಚ್ಚು ದಕ್ಷತೆಯಿಂದ ನೆರವೇರಿಸುತ್ತಿದೆ ಎಂಬುದಕ್ಕೆ ಅದು ಕೈಕೊಂಡ ಕೆಳಗಿನ ಯೋಜನೆಗಳೇ ಸಾಕ್ಷಿ.

(೧) **ಕನ್ನಡ— ಕನ್ನಡ ಕೋಶ:—** ಕನ್ನಡ ವಾಙ್ಮಯದ ಅಭ್ಯಾಸಕ್ಕೆ ಒಂದ ಸಮರ್ಪಕ ಕೋಶದ ಆವಶ್ಯಕತೆ ವಿಶೇಷವಾಗಿದೆಯೆಂದು ಪಂಡಿತರೆಲ್ಲರ ನಿದರ್ಶನಕ್ಕೆ ಬಂದ ಮಾತು. ರೆ. ಕಿಟೆಲ್ ಅವರ ಕನ್ನಡ-ಇಂಗ್ಲಿಷ ಕೋಶ, ಭಾರತೀಯ ಭಾಷೆಗಳಲ್ಲಿದ್ದ ಕೋಶಗಳಲ್ಲಿಯೇ ಅತ್ಯಂತ ಗಣನೀಯವಾದುದಾಗಿದ್ದರೂ ಅದು ಇನ್ನೂ ಅಸಮರ್ಪಕವಾಗಿದೆ. ಕಿಟೆಲ್ಲರ ಕಾಲಕ್ಕೆ ಅನೇಕ ಕನ್ನಡಗ್ರಂಥಗಳು ಪ್ರಕಟವಾಗಿರಲಿಲ್ಲ. ಉದಾಹರಣೆಗಾಗಿ, ಪಂಪಭಾರತ, ವಚನವಾಙ್ಮಯದಂತಹ ಸಾಹಿತ್ಯಕೃತಿಗಳನ್ನು ಅಳವಡಿಸಿಕೊಳ್ಳುವ ಯೋಗ ಆ ಕಾಲಕ್ಕೆ ಬಂದಿರಲಿಲ್ಲ. ಕಳೆದ ೭೫ ವರುಷಗಳ ಅವಧಿಯಲ್ಲಿ ಅನೇಕ ಕನ್ನಡ ಉದ್ಗ್ರಂಥಗಳು ಬೆಳಕುಕಂಡಿವೆ; ಭಾಷಾಶಾಸ್ತ್ರದ ಪ್ರಗತಿಯಾಗಿದೆ. ಆದುದರಿಂದ ಆಧುನಿಕ ತತ್ವಗಳನ್ನು ಅಳವಡಿಸಿಕೊಂಡು ಶಬ್ದಗಳ ನಿಷ್ಪತ್ತಿ, ಅರ್ಥವಿಶೇಷ, ಪ್ರಯೋಗ ಮೊದಲಾದವುಗಳನ್ನು ಒಳಗೊಂಡ ಒಂದು ಕೋಶವನ್ನು ನಿರ್ಮಿಸಬೇಕೆಂಬ ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಕಳೆದು ಎರಡು ದಶಕಗಳ ಹಿಂದೆಯೇ ಕೈಕೊಂಡಿತು. ಆ ಯೋಜನೆ ಮೊನ್ನೆ ಮೊನ್ನೆಯವರೆಗೆ ಬಹುಮಂದಗತಿಯಿಂದ ಸಾಗಿದ್ದಿತು. ಪರಿಷತ್ತು ವಿಶ್ವ ಪ್ರಯತ್ನ ಮಾಡಿ ಈ ಕೋಶದ ಮಹತ್ವವನ್ನು ಸರಕಾರದ ಅವಗಾಹನೆಗೆ ತಂದುಕೊಟ್ಟು, ಅದರಿಂದ ೧೫ ಲಕ್ಷ ರೂಪಾಯಿಗಳ ಸಹಾಯಧನವನ್ನು ಪಡೆದಿದೆ. ಕೋಶದ ಕೆಲಸ ಈಗ ಬಹುವೇಗದಿಂದ ನಡೆದಿದೆ. ನಾಡಿನ ನಾನಾ ಭಾಗದ ಗಣ್ಯವಿದ್ವಾಂಸರನ್ನು

ಕೋಶದ ಸಂಪಾದಕ-ಮಂಡಲಿಯಲ್ಲಿ ಸೇರಿಸಿಕೊಂಡು, ಕೋಶದಕಾರ್ಯವನ್ನು ಶಾಸ್ತ್ರೀಯವಾಗಿಯೂ ತೀವ್ರವಾಗಿಯೂ ಮುಂದುವರೆಸಿರುವುದು. ೫ ಲಕ್ಷದಷ್ಟು ಪಟ್ಟಿಕೆಗಳು ಈಗಾಗಲೇ ಸಿದ್ಧವಾಗಿವೆ. ಪ್ರಕಟವಾಗಿರುವ ಪ್ರತಿಯೊಂದು ಹಳಗನ್ನಡ ಗ್ರಂಥವನ್ನೂ ಅಚ್ಚಾಗದೆ ಇರುವ ಅನೇಕ ತಾಳೆಯೋಲೆಯ ಗ್ರಂಥಗಳನ್ನೂ ಸಹಸ್ರಾರು ಶಾಸನಗಳನ್ನೂ ಈ ಕಾರ್ಯಕ್ಕಾಗಿ ಉಪಯೋಗಿಸಿಕೊಂಡಿರುವದು ಈ ಕೋಶದ ವೈಶಿಷ್ಟ್ಯ. ಈ ಕೋಶಕ್ಕಾಗಿಯೇ ಹೊಸ ಅಚ್ಚುಕೂಟವೊಂದನ್ನು ಪರಿಷತ್ತು ಕೊಂಡಿದೆ. ಮೊದಲಿನ ೯೬ ಪುಟಗಳು ಈ ಮಾರ್ಚದೊಳಗಾಗಿಯೇ ತಪ್ಪದೆ ಅಚ್ಚಾಗಲಿವೆ. ಮುಂದಿನ ಕಾರ್ಯ ಭರದಿಂದ ನಡೆದು ೫೦೦೦ ಪುಟಗಳ ನಾಲ್ಕು ಸಂಪುಟಗಳು ಬಹುಬೇಗನೆ ಪ್ರಕಟವಾಗಲಿರುವುವು. ಇದಕ್ಕಾಗಿ ವಿದ್ಯಾಸಚಿವರಾದ ಶ್ರೀ ಗಣಮುಖಿ ಅಣ್ಣಾರಾಯರನ್ನು, ಪರಿಷತ್ತಿನ ಅಧ್ಯಕ್ಷರಾದ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳನ್ನು, ಕೋಶ ಸಮಿತಿಯ ಸಂಪಾದಕ ಮಂಡಲಿಯನ್ನು, ಪರಿಷತ್ತಿನ ಕಾರ್ಯಕಾರಿ ಮಂಡಳಿಯನ್ನು, ಇದಕ್ಕೆ ಸಂಬಂಧಪಟ್ಟ ಇನ್ನಿತರ ಸರಕಾರಿ ಅಧಿಕಾರಿಗಳನ್ನೂ, ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

(೨) **ಗ್ರಂಥ ಪ್ರಕಟನೆ:—** ಕರ್ನಾಟಕ ಕವಿಚರಿತೆಗಳು ನಮ್ಮ ಸಾಹಿತ್ಯದ ಅಮೌಲ್ಯ ಕೃತಿಗಳು. ಕಳೆದ ಅನೇಕ ವರ್ಷಗಳಿಂದ ಅವು ದೊರೆಯದಾಗಿದ್ದುವು. ಅದರಿಂದ ಸಾಹಿತ್ಯಾಭ್ಯಾಸಿಗಳಿಗೂ ಸಂಶೋಧಕರಿಗೂ ವಿಶೇಷ ತೊಂದರೆಯಾಗಿದ್ದಿತು. ಪರಿಷತ್ತು ಈ ಕೊರತೆಯನ್ನು ಪೂರೈಸಲು ಮುಂದೆ ಬಂದು ಕರ್ನಾಟಕ ಕವಿಚರಿತೆಗಳನ್ನು ಪ್ರಕಟಿಸುವ ಯೋಜನೆಗೆ ಅಣಿಯಾಗಿದೆ. ಈಗಾಗಲೇ ಕವಿಚರಿತೆಯ ಪ್ರಥಮ ಸಂಪುಟ ಪ್ರಕಟವಾಗಿದೆ. ಅದು ಮೊದಲಿನ ಕವಿಚರಿತೆಯ ವಿಷಯದೊಡನೆ ಈಚೆಗೆ ಬಂದ ಹೊಸ ವಿಷಯಗಳನ್ನು ಒಳಗೊಂಡಿದೆ. ದ್ವಿತೀಯ ಸಂಪುಟವೂ ಅಚ್ಚಿನಲ್ಲಿದೆ. ಇದಲ್ಲದೆ ಪರಿಷತ್ತು ವಿವೇಕಚಿಂತಾಮಣಿ, ಸೂಕ್ತಿಸುಧಾರ್ಣವದಂತಹ ಉದ್ಗ್ರಂಥಗಳನ್ನು ಪ್ರಕಟಿಸುವ ಒಂದು ಯೋಜನೆಯಿಟ್ಟುಕೊಂಡಿರುವದು ಸ್ತುತ್ಯವಾಗಿದೆ. ಈ ಕಾರ್ಯವನ್ನು ಅದು ತೀವ್ರಗೊಳಿಸಲಿ.

(೩) **ಸಾಹಿತ್ಯ ಸಮ್ಮೇಲನಗಳು:—** ಕನ್ನಡ ಸಾಹಿತ್ಯ ಪರಿಷತ್ತು ನಾಡಿನ ನಾನಾಭಾಗಗಳಲ್ಲಿ ೪೨ ಸಾಹಿತ್ಯ ಸಮ್ಮೇಳನಗಳನ್ನು ಜರುಗಿಸಿ ಈಗ ೪೩ನೆಯ ಸಾಹಿತ್ಯ ಸಮ್ಮೇಲನಕ್ಕೆ ಸಿದ್ಧವಾಗಿ ನಿಂತಿದೆ. ಹಿಂದೆ ಕನ್ನಡಿಗರು ಇನ್ನೂ ಜಾಗೃತವಾಗಿರದ ಕಾಲದಲ್ಲಿ ಅವರನ್ನು ಬಡಿದೆಬ್ಬಿಸುವ ಮಹತ್ಕಾರ್ಯವನ್ನು ಸಮ್ಮೇಲನಗಳು ಮಾಡುತ್ತಿದ್ದುವು. ಉತ್ಸಾಹಿ ಯುಗದಲ್ಲಿ, ಸಂಭ್ರಮ, ಸನ್ಮಾನ, ಮೆರವಣಿಗೆ ಮುಂತಾದುವೆಲ್ಲ ನಡೆದುವು. ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ಮಹನೀಯರನ್ನು ಗೌರವಿಸಿ, ಅವರನ್ನು ಸತ್ಕರಿಸಿದುದೂ ಆಯಿತು. ಸಮ್ಮೇಲನಗಳನ್ನು ನೆರವೇರಿಸುವದು ಒಂದು ದೃಷ್ಟಿಯಿಂದ ನೋಡಿದರೆ ಬಹು ಸುಲಭವಾದ ಕಾರ್ಯವಲ್ಲ. ಅದಕ್ಕಾಗಿ ಸಹಸ್ರಾರು ರೂಪಾಯಿಗಳನ್ನು ವ್ಯಯಮಾಡಬೇಕಾಗುತ್ತದೆ; ಕಾರ್ಯಕರ್ತರಲ್ಲಿ ಸಂಘಟನೆ ಮೂಡಬೇಕಾಗುತ್ತದೆ. ಪರಿಷತ್ತು ಹಾಗೂ ಸ್ವಾಗತಸಮಿತಿಗಳೂ ೪–೬ ತಿಂಗಳೂ ಇದೇ ಕಾರ್ಯವನ್ನು ಮಾಡಬೇಕಾಗುತ್ತದೆಯೆಂದರೂ ಸಲ್ಲುವುದು. ಸಂಭ್ರಮ, ಸನ್ಮಾನಗಳ ಹೊರತಾಗಿ ಇದರ ಫಲಶೃತಿ ಏನು ಎಂಬುದನ್ನು ವಿಚಾರಿಸುವ ಕಾಲ ಈಗ ಸಂಪ್ರಾಪ್ತವಾಗಿದೆ. ಇದು ಬುದ್ಧಿಮತ್ತೆಯ ಯುಗ. ಭಾವನಾಪ್ರಧಾನವಾದ ಉತ್ಸವಯುಗ ನಿಂತುಹೋಗಿದೆ. ಇನ್ನು ಮುಂದೆ ನಮ್ಮ ಸಮ್ಮೇಲನಗಳ ಬೌದ್ಧಿಕಮಟ್ಟ ಮೇಲಕ್ಕೇರಬೇಕು. ನಮ್ಮ ನಾಡಿನಲ್ಲಿ ಸಂಶೋಧನೆ, ಲಲಿತವಾಙ್ಮಯ ಇವು ಯಾವ ಯಾವ ದಿಸೆಯಲ್ಲಿ ನಡೆದಿವೆಯೆಂಬುದರ ಮಾಪನವಾಗಿ, ಅವುಗಳಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡುವ ಯೋಜನೆ ಸಮ್ಮೇಲನಗಳ ಕಾಲದಲ್ಲಿ ನಡೆಯಬೇಕು. ಸಂಶೋಧಕರು, ಬರೆಹಗಾರರು ಸುಸಂಘಟಿತರಾಗಿ ನಮ್ಮ ಜ್ಞಾನದ ಪ್ರತಿಯೊಂದು ಕ್ಷೇತ್ರದ ಸಮೀಕ್ಷೆಯನ್ನು ಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿ ೨ ವರ್ಷಕ್ಕೊಮ್ಮೆ ನಡೆಯುತ್ತಿರುವ ಅಖಿಲ ಭಾರತ ಪ್ರಾಚ್ಯ ಸಮ್ಮೇಲನವನ್ನು ನೆನಪಿಗೆ ತಂದುಕೊಳ್ಳಬಹುದು. ಎರಡು ವರ್ಷಗಳ ಪೂರ್ವದಲ್ಲಿಯೇ ಮುಂದಿನ ಸಮ್ಮೇಲನದ ಸ್ಥಳ ಅಧ್ಯಕ್ಷರ ಆಯ್ಕೆ ಯಾವ ಗಲಭೆಯಿಲ್ಲದೆ ಆಗಿಹೋಗುತ್ತದೆ. ಸಮ್ಮೇಲನದ ಅಂಗವಾಗಿ ನಡೆಯುವ ವಿವಿಧ ಶಾಖೆಗಳನ್ನು ಅವುಗಳ

ಅಧ್ಯಕ್ಷರನ್ನೂ ಭಾಷಣಕಾರರನ್ನೂ ಮೊದಲೇ ಗೊತ್ತುಮಾಡುತ್ತಾರೆ. ಎರಡು ವರ್ಷಗಳ ಅಭ್ಯಾಸ ಸಮೀಕ್ಷಣಗಳ ಬಲದಿಂದ ಆ ಸಮ್ಮೇಲನವು ಕೆಲಮಟ್ಟಿಗೆ ಶಾಶ್ವತವಾದ ಫಲಗಳನ್ನು ಒದಗಿಸಿಕೊಡುತ್ತದೆ. ನಮ್ಮ ಸಾಹಿತ್ಯ ಸಮ್ಮೇಲನಗಳೂ ಹೀಗೆ ನೆರವೇರಬಹುದೇ ? ಸಂಬಂಧಪಟ್ಟವರು ಸಮಾಲೋಚನೆ ಮಾಡಿ ಸೂಕ್ತ ಕ್ರಮಗಳನ್ನು ಕೈಕೊಂಡರೆ ಈಗ ಅನವಶ್ಯಕವಾಗಿ ಏಳುತ್ತಿರುವ ಯಾವ ಗಲಭೆಗಳಿಗೂ ಮುಂದೆ ಆಸ್ಪದವಾಗಲಿಕ್ಕಿಲ್ಲವೆನಿಸುತ್ತದೆ.

ನಮ್ಮ ವಿಶ್ವವಿದ್ಯಾಲಯಗಳು

ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯಗಳೆರಡೂ ಕನ್ನಡ ನಾಡಿನ ಎರಡು ಕಣ್ಣುಗಳಿದ್ದಂತೆ. ಈ ಎರಡೂ ವಿಶ್ವವಿದ್ಯಾಲಯಗಳ ಆಶ್ರಯದಲ್ಲಿ ಕನ್ನಡ ಗ್ರಂಥಗಳು ಪ್ರಕಟವಾಗಿವೆ. ಮೈಸೂರು ವಿಶ್ವವಿದ್ಯಾಲಯವು ಕಳೆದ ೨೫ ವರ್ಷಗಳಲ್ಲಿ ಕನ್ನಡಕ್ಕೆ ಬಹುಬೆಲೆಯುಳ್ಳ ಗ್ರಂಥಗಳನ್ನು ಒದಗಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯವು ಈ ದಿಸೆಯಲ್ಲಿ ಅಪ್ರತಿಮವಾದ ಕಾರ್ಯವನ್ನು ಮಾಡುತ್ತಿದೆ. ಆ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಪ್ರಾಚೀನ ಕನ್ನಡ ಕಾವ್ಯಮಾಲೆಯೊಂದನ್ನು ಆರಂಭಿಸಿ, ರಾಜಶೇಖರ ವಿಳಾಸದಂತಹ ಬೃಹದ್ಗ್ರಂಥಗಳನ್ನು ಪ್ರಕಟಿಸುತ್ತಿರುವುದು ಸ್ತೋತ್ರಾರ್ಹವಾದುದು. ಇದಲ್ಲದೆ ಸಮಗ್ರ ವಚನ ವಾಙ್ಮಯವನ್ನೇ ಶಾಸ್ತ್ರೀಯವಾಗಿ ಪ್ರಕಟಿಸುವ ಯೋಜನೆಯೊಂದನ್ನು ಕನ್ನಡ ವಿಭಾಗದವರು ಕೈಕೊಳ್ಳುವರೆಂದು ಕೇಳಿದ್ದೇನೆ. ಕನ್ನಡ ಸಾಹಿತ್ಯದ ಇತಿಹಾಸ ಹಾಗೂ ಕನ್ನಡ ಭಾಷೆಯ ಚರಿತ್ರೆಗಳ ಪ್ರಕಟನೆಯ ಯೋಜನೆಯನ್ನೂ ಈ ವಿಭಾಗದವರು ಕೈಕೊಂಡಿರುವರೆಂದು ತಿಳಿದು ಬರುತ್ತದೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ನಮ್ಮ ಪ್ರಾಚೀನ ಸಾಹಿತ್ಯದ ಪ್ರಕಟನೆಯ ಕಾರ್ಯವನ್ನು ಎರಡೂ ವಿಶ್ವವಿದ್ಯಾಲಯಗಳು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಮಾಡುತ್ತ ಹೋಗುವರೆಂದು ಆಶಿಸುತ್ತೇನೆ. ಈ ವಿಶ್ವವಿದ್ಯಾಲಯಗಳು ಬೆಳೆದಷ್ಟು ನಮ್ಮ ನಾಡಿನ ಘನತೆದೊಡ್ಡದಾಗುತ್ತದೆ. ಕರ್ನಾಟಕ ವಿಶ್ವವಿದ್ಯಾಲಯವು ಕಳೆದ ೬-೭ ವರ್ಷಗಳ ಅವಧಿಯಲ್ಲಿ ವ್ಹಾಯಿಸ್-ಛಾನ್ಸಲರ ರ್‍ಯಾಂಗ್ಲರ್ ದಾದಾಸಾಹೇಬ ಪಾವಟೆಯವರ ನೇತೃತ್ವದಲ್ಲಿ ಅದ್ಭುತವಾಗಿ ಬೆಳೆಯತೊಡಗಿದೆ. ಅದು ಭಾರತದ ಪ್ರಥಮ ಶ್ರೇಣೀಯ ನಾಲ್ಕೈದು ವಿಶ್ವವಿದ್ಯಾಲಯಗಳಲ್ಲಿ ಒಂದಾಗಿ ಅಖಿಲಭಾರತದ ಕೀರ್ತಿಯನ್ನು ಪಡೆದಿದೆ. ಅಲ್ಲಿ ದೇಶವಿದೇಶಗಳ ಪಂಡಿತರು ಪ್ರಾಧ್ಯಾಪಕರಾಗಿ ಬಂದು ನಿಂತು ನಮ್ಮ ಸಂಶೋಧನೆಯ ಮಟ್ಟವನ್ನು ಮೇಲಕ್ಕೇರಿಸುತ್ತಿರುವರು. ಸಹಸ್ರಾರು ವಿದ್ಯಾರ್ಥಿಗಳು ವಿವಿಧ ಶಾಖೆಗಳಲ್ಲಿ ಅದ್ಯಯನ ಮಾಡುತ್ತಿರುವರು. ಅಲ್ಲಿಯ ಸಂಶೋಧನೆಯ ಮಟ್ಟ, ಶಿಸ್ತು, ಸಂಘಟನೆ ಇವು ಪ್ರಶಂಸನೀಯವಾಗಿವೆ. ಇದಕ್ಕಾಗಿ ಶ್ರೀಮಾನ್ ಡಿ. ಸಿ. ಪಾವಟೆಯವರನ್ನೂ ಸಿಂಡಿಕೇಟ ಸದಸ್ಯರನ್ನೂ ಅಭಿನಂದಿಸುತ್ತೇನೆ. ನಮ್ಮ ಮೈಸೂರ ವಿಶ್ವವಿದ್ಯಾಲಯವು ಹಳೆಯ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದ್ದು ಅದು ಸ್ತೋತ್ರಾರ್ಹವಾದ ಕೆಲಸಮಾಡುತ್ತದೆ.

ಈ ಸನ್ನಿವೇಶದಲ್ಲಿ ನಮ್ಮ ವಿಶ್ವವಿದ್ಯಾಲಯಗಳೆಲ್ಲ ಕನ್ನಡದ ಸ್ಥಾನಮಾನವೇನೆಂಬುದನ್ನು ಕುರಿತು ಸಮಾಲೋಚನೆ ಮಾಡುವದು ಸೂಕ್ತವೆನಿಸಿದೆ. ಮುಂಬೈ ವಿಶ್ವವಿದ್ಯಾಲಯದಲ್ಲಿ ಅನೇಕ ವರ್ಷಗಳವರೆಗೆ ಕನ್ನಡ ಮೊದಲಾದ ದೇಶಭಾಷೆಗಳ ಅಭ್ಯಾಸಕ್ಕೆ ಆಸ್ಪದವೇ ಇರಲಿಲ್ಲ. ಕಾಲೇಜದ ಯಾವ ವರ್ಗದ ಅಭ್ಯಾಸ ಕ್ರಮದಲ್ಲಿಯೂ ದೇಶಭಾಷೆಗಳಿಗೆ ಸ್ಥಾನವಿರಲಿಲ್ಲ. ಸಾಹಸಿಗಳಾದವರು ತಾವೇ ಓದಿ, ಮಾತೃಭಾಷೆಗಳಲ್ಲಿ ಎಮ್. ಎ. ಪದವಿಯನ್ನು ಪಡೆಯಬಹುದಾಗಿದ್ದಿತು. ಮುಂದೆ ಅನೇಕ ದಿವಸಗಳ ಹೋರಾಟದ ನಂತರ, ಕನ್ನಡಕ್ಕೆ ಸ್ವಲ್ಪಮಟ್ಟಿಗೆ ಸ್ಥಾನ, ಅಭ್ಯಾಸಕ್ರಮದಲ್ಲಿ ದೊರಕಿದ್ದಿತು. ಕರ್ನಾಟಕ ವಿಶ್ವವಿದ್ಯಾಲಯವಾದ ಮೇಲೆ ವಿಶ್ವವಿದ್ಯಾಲಯದ ಅಭ್ಯಾಸಕ್ರಮದಲ್ಲಿ ಕನ್ನಡಕ್ಕೆ ಹೆಚ್ಚಿನ ಸ್ಥಾನ ದೊರೆಯಬಹುದೆಂದು ಆಶಿಸಲಾಗಿದ್ದಿತು. ಆದರೆ ಅಂತಹ ಪರಿಸ್ಥಿತಿ ಇನ್ನೂ ಬಂದಂತೆ ಕಾಣುವುದಿಲ್ಲ. ಕಾಲೇಜದ ಬಿ. ಎ. ಮೊದಲನೆಯ ಭಾಗದಲ್ಲಿ

ದೇಶಿಯ ಭಾಷೆಗಳ ಜೊತೆಗೆ ಹಿಂದಿಯನ್ನೂ ಸೇರಿಸಿಬಿಟ್ಟಿರುವದರಿಂದ ಹಿಂದೀ ಕಲಿಯಬೇಕೆನ್ನುವ ಉತ್ಸಾಹದ ಈ ಕಾಲದಲ್ಲಿ, ಅನೇಕ ವಿದ್ಯಾರ್ಥಿಗಳು ಕನ್ನಡವನ್ನು ಬಿಟ್ಟು ಹಿಂದಿಯ ಕಡೆಗೆ ಹೊರಳಿರುವುದು ಕಂಡುಬರುತ್ತದೆ. ಹೀಗಾಗಬಾರದು. ಹಿಂದಿಯನ್ನು ನಮ್ಮ ವಿದ್ಯಾರ್ಥಿಗಳು ಕಲಿಯಬಾರದೆಂದು ನನ್ನ ಮತವಲ್ಲ. ಆದರೆ, ಅವರು ಕನ್ನಡವನ್ನು ಕಲಿತು ಜೊತೆಗೆ ಹಿಂದಿಯನ್ನು ಕಲಿಯುವಂತಾಗಲಿ. ಇದು ಬಿ. ಎ. ಮೊದಲನೆಯ ಭಾಗದ ಮಾತು. ಮುಂದಿನ ಎರಡು ವರ್ಷಗಳ ಅಭ್ಯಾಸಕ್ರಮದಲ್ಲಿ, ಕನ್ನಡವನ್ನು ನೂರಾರು ವಿಷಯಗಳೊಡನೆ ಸೇರಿಸಿ, ಅದನ್ನು ಬೇಕಾದವರು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಳ್ಳುವ ಯೋಜನೆ ಮೊದಲಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಹಿಂದೆ ಮುಂಬೈ ವಿಶ್ವವಿದ್ಯಾಲಯದ ಅಭ್ಯಾಸಕ್ರಮದಲ್ಲಿಯೇ ಕನ್ನಡಕ್ಕೆ ಹೆಚ್ಚಿನ ಸ್ಥಾನವಿದ್ದಿತೇನೋ ಎಂಬಂತೆ ಭಾಸವಾಗುತ್ತದೆ. ಹೀಗಾಗದೆ, ಬಿ. ಎ., ಬಿ. ಎಸ್‌ಸಿ. ವಿದ್ಯಾರ್ಥಿಗಳೆಲ್ಲರಿಗೂ ಇಂಗ್ಲಿಷ್ ಕಡ್ಡಾಯ-ವಾಗಿರುವಂತೆ, ಜೊತೆಗೆ ಮಾತೃಭಾಷೆಯನ್ನೂ ಕಡ್ಡಾಯವಾಗಿ ಮಾಡಿದರೆ, ಕನ್ನಡ ಭಾಷೆ, ಸಾಹಿತ್ಯ ಬೆಳೆಯುತ್ತದೆ. ವಿವಿಧ ವಿಷಯಗಳನ್ನು ಕಲಿಯುವ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ವಿಚಾರಿಸುವ, ಬರೆಯುವ ಶಕ್ತಿ ಹೆಚ್ಚಾಗುತ್ತದೆ. ಕನ್ನಡ ನಾಡುನುಡಿಗಳ ಸಂವರ್ಧನೆಯು ತಮ್ಮ ಮುಖ್ಯಗುರಿಗಳಲ್ಲೊಂದಾದ ನಮ್ಮ ವಿಶ್ವವಿದ್ಯಾಲಯಗಳಿಂದ ಇದನ್ನು ಅಪೇಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ. ಮೈಸೂರು ವಿಶ್ವವಿದ್ಯಾನಿಲಯವು ಈ ದಿಕ್ಕಿನಲ್ಲಿ ಆದರ್ಶವಾದ ಕಾರ್ಯವನ್ನು ಕೈಕೊಂಡಿದೆ. ಅಲ್ಲದೆ ಈ ಕಾರ್ಯವನ್ನು ಇನ್ನೂ ವಿಸ್ತೃತಗೊಳಿಸಬೇಕೆಂದು ಹಾರೈಸುತ್ತೇನೆ.

ಭೂಸಂಶೋಧನೆ

ಕನ್ನಡ ಭೂಸಂಶೋಧನೆಯ ಕೆಲಸ ನಡೆದಿಲ್ಲವೆಂದೇ ಹೇಳಬೇಕು. ಆದದ್ದು, ತೀರ ಸ್ವಲ್ಪ ಪ್ರಮಾಣದಲ್ಲಿ ಮಾತ್ರ. ಆದರೆ, ಅದಕ್ಕೆ ಅವಕಾಶವೇನೋ ಬೇಕಾದಷ್ಟಿದೆ ಈ ನಾಡಿನಲ್ಲಿ. ನಾಡಿನ ಇತಿಹಾಸದ ಮೇಲೆ ಅದ್ಭುತವಾದ ಬೆಳಕನ್ನು ಬೀರುವ ಸಾಧನ–ಸಾಹಿತ್ಯವು ಈ ಭೂಸಂಶೋಧನೆಯಲ್ಲಿ ದೊರೆಯಬಹುದಾಗಿದೆ. ನಮ್ಮ ಪ್ರಾಚ್ಯ ಸಂಶೋಧನ ಇಲಾಖೆಯ ಕೆಲಸ ತೃಪ್ತಿಕರವಾಗಿ ಸಾಗಿರುವುದಿಲ್ಲ. ಆ ಸಂಸ್ಥೆ ಹೆಚ್ಚು ಚೇತರಿಸಿಕೊಳ್ಳಬೇಕು. ವಿಶ್ವವಿದ್ಯಾಲಯಗಳು ಇತ್ತ ಗಮನ ಪೂರೈಸಬೇಕು. ಕೇಂದ್ರ ಸರಕಾರ, ರಾಜ್ಯ ಸರಕಾರಗಳು ಇದಕ್ಕಾಗಿ ಉದಾರ ಧನಸಹಾಯ ಮಾಡಬೇಕು.

ಕೇಂದ್ರ ಸಂಶೋಧನ ಸಂಸ್ಥೆ

ಕರ್ನಾಟಕದಲ್ಲಿ ಸಂಶೋಧನೆ ಇನ್ನೂ ನಾನಾಮುಖವಾಗಿ ನಡೆಯಬೇಕಾಗಿದೆ. ಸಾವಿರಾರು ವರ್ಷಗಳ ಅಪಾರವಾದ ಸಾಹಿತ್ಯದ ಬಹುಭಾಗ ಇನ್ನೂ ಕಣ್ಮರೆಯಾಗಿ ಕುಳಿತಿದೆ. ಬಹುಬೆಲೆಯುಳ್ಳ ತಾಳೆಯೋಲೆ ಗ್ರಂಥಗಳು ಮನೆ–ಮಠಗಳ ಗದ್ದುಗೆಯ ಮೇಲೆ ಕುಳಿತು ಹುಳುಗಳಿಗೆ ತುತ್ತಾಗತೊಡಗಿವೆ. ಆ ಗ್ರಂಥಗಳನ್ನು ಒಂದೆಡೆ ಶೇಖರಿಸಿ, ಸರಿಯಾಗಿ ಜೋಪಾನ ಮಾಡದೆ ಹೋದರೆ, ನಾವು ಬಹುಬೆಲೆಯುಳ್ಳ ಆಸ್ತಿಯನ್ನು ಕಳೆದು ಕೊಂಡಂತಾಗುತ್ತದೆ. ಒಂದು ಕೇಂದ್ರ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ ನಾಡಿನ ನಾನಾ ಮೂಲೆಗಳಲ್ಲಿರುವ ಓಲೆಗರಿಗಳನ್ನು ಶೇಖರಿಸಿಟ್ಟರೆ ಸಂಶೋಧನೆಗೆ ತುಂಬಾ ಸಹಾಯವಾಗುತ್ತದೆ.

ಶಾಸನಗಳು ಕನ್ನಡ ನಾಡಿನಲ್ಲಿ ದೊರೆಯುವಷ್ಟು, ಭಾರತದ ಇನ್ನಾವ ಭಾಗದಲ್ಲಿಯೂ ದೊರೆಯುವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಶಾಸನಸಂಪತ್ತು ವಿಪುಲವಾಗಿದೆ. ನಮ್ಮನಾಡಿನ ಚರಿತ್ರೆ, ಸಾಹಿತ್ಯ, ಭಾಷೆ, ಜನಜೀವನ ಇವುಗಳ ತಿಳುವಳಿಕೆಗೆ ಶಾಸನಗಳಿಂದಾಗುವಷ್ಟು ಸಹಾಯ ಬೇರೆ ಇನ್ನಾವುದರಿಂದಲೂ ಆಗಲಿಕ್ಕಿಲ್ಲ-ವೆನಿಸುತ್ತದೆ. ಈ ಶಾಸನಗಳ ಸಂಗ್ರಹಕಾರ್ಯ ನಮ್ಮಲ್ಲಿ ಕೆಲಮಟ್ಟಿಗೆ ಆಗಿದೆ. ಡಾ|| ಫ್ಲೀಟ, ಲುಯಿಸ್,

ರಾಯಿಸ್, ಇಲಿಯಟ್, ಎಂ. ಎಚ್. ಕೃಷ್ಣ, ಪಂಚಮುಖಿ, ಪಿ. ಬಿ. ದೇಸಾಯಿ ಮೊದಲಾದವರು ಈ ದಿಶೆಯಲ್ಲಿ ಕೆಲಸ ಮಾಡಿರುವದನ್ನು ನಾನು ಸ್ಮರಿಸುತ್ತೇನೆ. ಎಪಿಗ್ರಾಫಿಕಾ ಕರ್ನಾಟಿಕಾ, ಎಫಿಗ್ರಾಫಿಕಾ ಇಂಡಿಕಾ, ಮೊದಲಾದ ಗ್ರಂಥಗಳು ಕನ್ನಡ ಶಾಸನಗಳನ್ನು ಒಳಗೊಂಡಿರುವುದೇನೋ ನಿಜ. ಆದರೆ ಇನ್ನೂ ಅಪ್ರಕಟಿತವಾಗಿರುವ ಶಾಸನಗಳೇ ಬಹಳ. ಪುನಃ ಸಮಸ್ತ ಕನ್ನಡ ನಾಡಿನ ಶಾಸನಗಳ ಸಮೀಕ್ಷಣೆ ಮಾಡಿ ಇವುಗಳನ್ನು ಶುದ್ಧವಾಗಿ ಪ್ರಕಟಿಸಿದರೆ ನಮ್ಮ ಸಂಶೋಧನೆ ಬೆಳೆಯುತ್ತದೆ; ನಮ್ಮ ತಿಳಿವು ಬಲಿಯುತ್ತದೆ.

ಇದಲ್ಲದೆ ನಮ್ಮ ನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳ ಸಂಶೋಧನೆಗೆ ಸಹಾಯಕವಾಗುವ ಅನೇಕ ಸಾಧನಗಳೂ ಲೇಖನಗಳೂ ದೇಶವಿದೇಶಗಳ ಬೇರೆ ಬೇರೆ ಗ್ರಂಥ ಭಂಡಾರಗಳಲ್ಲಿ ದೊರೆಯುತ್ತವೆ. ಇಂಡಿಯಾ ಹೌಸ್, ಬ್ರಿಟಿಶ್‌ಮ್ಯೂಜಿಯಂ, ಲಂಡನ್ ವಿಶ್ವವಿದ್ಯಾಲಯದ ವಾಚನಾಲಯಗಳೇ ಮೊದಲಾದ ವಿದೇಶೀಯ ಗ್ರಂಥ ಭಂಡಾರಗಳಲ್ಲಿ ಕನ್ನಡ ನಾಡಿಗೆ ಸಂಬಂಧಪಟ್ಟ ಮಹತ್ವದ ಉಲ್ಲೇಖಗಳಿವೆ. ಆ ಉಲ್ಲೇಖಗಳ ಪುನರ್ಮುದ್ರಣ ಪ್ರತಿಯನ್ನೋ ಮಾಯಕ್ರೋಫಿಲ್ಮ ಪ್ರತಿಗಳನ್ನೋ ಕೇಂದ್ರಸಂಶೋಧನಸಂಸ್ಥೆಯ ಆಶ್ರಯದಲ್ಲಿ ಸಂಗ್ರಹಿಸುವುದು ಅತ್ಯಾವಶ್ಯಕ. ಇಂತಹ ಮಹತ್ವದ ಆಧಾರಗ್ರಂಥಗಳನ್ನು ಒಂದೆಡೆ ಕೂಡಿಸದೆ ಹೋದರೆ ಸಂಶೋಧಕರಿಗೆ ತುಂಬಾ ತೊಂದರೆಯಾಗುತ್ತದೆ. ಮೈಸೂರು ಸರಕಾರದ ಅವಗಾಹನೆಗೆ ಇಂತಹ ಸಂಸ್ಥೆಯೊಂದರ ವಿಚಾರ ಬಂದು, ಅದಕ್ಕಾಗಿ ಅವರು ಈಗಾಗಲೇ ಒಂದು ಸಮಿತಿಯನ್ನು ಏರ್ಪಡಿಸಿರುವರು. ಇಂತಹ ಕೇಂದ್ರ ಸಂಶೋಧನ ಸಂಸ್ಥೆ ಕನ್ನಡನಾಡಿಗೆ ಅತ್ಯಾವಶ್ಯಕವಾಗಿದೆಯೆಂದು, ಆ ಸಮಿತಿಯವರಿಗೂ ಸರಕಾರಕ್ಕೂ ಸೂಚಿಸಬಯಸುತ್ತೇನೆ.

ಕೊನೆಯ ಮಾತು

ಮಹಾಜನರೇ,

ನಿಮ್ಮೆಲ್ಲರ ಅಮೌಲ್ಯವಾದ ವೇಳೆಯನ್ನು ಬಹಳವಾಗಿ ತೆಗೆದುಕೊಂಡುದಕ್ಕೆ ನಾನು ಕ್ಷಮೆಯಾಚಿಸುತ್ತೇನೆ. ಎನ್ನ ತಪ್ಪು ಅನಂತಕೋಟಿ; ನಿಮ್ಮ ಸೈರಣೆಗೆ ಮಿತಿ ಇಲ್ಲದಿರಲಿ. ಈ ಸಮ್ಮೇಲನವನ್ನು ಯಶಸ್ವಿಯಾಗಿ ಪೂರೈಸುವ ಹೊಣೆ ನಿಮ್ಮೆಲ್ಲರ ಮೇಲಿದೆ. ಸ್ವಾಗತಸಮಿತಿಯ ಅಧ್ಯಕ್ಷರಿಗೂ, ಪರಿಷತ್ತಿನ ಅಧ್ಯಕ್ಷರಿಗೂ, ಅದರ ಕಾರ್ಯಕಾರಿ ಮಂಡಲಕ್ಕೂ, ಮಹಾಜನಗಳಾದ ತಮ್ಮೆಲ್ಲರಿಗೂ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಿ ವಿರಮಿಸುತ್ತೇನೆ.

ಜೈ ಹಿಂದ ! ಜೈ ಭುವನೇಶ್ವರಿ !

ಶುಭಾಶೀರ್ವಚನ

ಸಮ್ಮೇಳನ ಆರಂಭವಾಗುವ ಮುನ್ನ ಶ್ರೀ ಮ. ನಿ. ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳು ಅದು ಯಶಸ್ವಿಯಾಗುವಂತೆ ಹಾರೈಸಿ ಹೀಗೆ ಹೇಳಿದರು:

"ಕನ್ನಡಮ್ಮನ ಕರುಣೆಯು ಕಂದರೇ; ನಿಮಗೂ ನಿಮ್ಮ ತಾಯಿಗೂ ಅಖಂಡ ಕಲ್ಯಾಣವಾಗಲಿ. ಈ ಮಹಾಮಂಗಲಾಶೀರ್ವಾದವು ನಿಮ್ಮ ಮೇಲಿನ ಸದಭಿಮಾನದ ಸಂಕೇತವಾಗಿದೆ.—ಆಳು, ಅರಸ, ಸ್ವಾಮಿ, ಸೇವಕ, ಬಡವ, ಬಲ್ಲಿದ, ಪಂಡಿತ, ಪಾಮರ, ಸ್ತ್ರೀ–ಪುರುಷ ಇವರೇ ಮೊದಲಾದವರಿಗೆ ತಮ್ಮ ನಾಡು ತಮ್ಮವರು ಎಂದರೆ ಅಭಿಮಾನವೆನಿಸದಿರಲಾರದು.

"ಅನನ್ಯಸಾಧಾರಣ ಬಹುಮುಖ ಶ್ರೇಯೋಽಭಿಽಭಿವೃದ್ಧಿಗೆ, ಭಾವಸಮಾಧಿ, ಹೃದಯ ಪರಿವರ್ತನ, ವಾಕ್ಪರಿಶೋಧನ ಇವುಗಳ ಸಂಪೂರ್ಣಸಿದ್ಧಿಗೆ, ಹೃದಯಂಗಮವಾದ ಹಿತೋಪದೇಶ ಬುದ್ಧಿಗೆ, ನಮ್ಮ ಕನ್ನಡ ಭಾಷಾ ಸಾಹಿತ್ಯವು ತಾಯುಮನೆಯಾಗಿಜೆ. ಇದರ ಸೊಬಗು, ಇಂತಹ ಸೌಂದರ್ಯ, ಇದರಲ್ಲಿಯ ಕಳಾಪ್ರಪೂರ್ಣತೆ, ಇಲ್ಲಿಯ ಸೌಭಾಗ್ಯ, ಈದೃಶಸಾರಸ್ವತ ಸಿದ್ಧಿ, ಶಬ್ದಾರ್ಥರಸಭಾವ ಇತ್ಯಾದಿ ಸಂಪತ್ತನ್ನು ಸಂಸ್ಕೃತ ಸಾಹಿತ್ಯವೊಂದನ್ನು ಬಿಟ್ಟು ಬೇರೆ ಯಾವದಾದರೂ ಸಾಹಿತ್ಯದಲ್ಲಿ ಕಾಣಬೇಕೆಂದರೆ, ಅದು "ಕರಭಮನುಸರಾಮಃ ಕಾಮಧೇನೌಸಿತಾಯಾಂ" ಎಂದಂತೆ ಆಗುತ್ತದೆ. ಇಷ್ಟು ಸುಲಭಸಾಧ್ಯವಾದ ಕನ್ನಡ ಸಾಹಿತ್ಯ ಸಂಪತ್ತು ನಮ್ಮವರಿಗೆ ೨೦೦೦ ವರ್ಷಗಳ ಪೂರ್ವದಲ್ಲಿಯೇ ದೊರಕಿತ್ತು ಎಂಬುದು ನೃಪತುಂಗನ ಕವಿರಾಜಮಾರ್ಗವೆಂಬ ಲಕ್ಷಣ ಗ್ರಂಥದಿಂದ ತಿಳಿದುಬರುವಹಾಗಿದೆ. ಈ ಸಾಹಿತ್ಯ ವೃಕ್ಷವನ್ನು ಜೈನ ಮಹಾಕವಿಗಳು, ೯–೧೦ ನೇ ಶತಮಾನದವರೆಗೆ ರಸವಾರದಂತೆ, ಹುಳಮುಟ್ಟದಂತೆ, ಸಿಡಿವಡೆಯದ ಹಾಗೆ ತತ್ತ್ವ (ತಪ್ಪಲ) ಉದುರದಂತೆ ಚನ್ನಾಗಿ ಪೋಷಿಸಿ ಬಿಸಿಲು ಹತ್ತಿ ಬಂದವರಿಗೆ ನೆರಳು ನೀಡುವಂತೆ ಮಾಡಿದರು. ನಂತರ ವೀರಶೈವ ಕವಿಗಳಲ್ಲಿ ದೇವರ ದಾಸಿಮಯ್ಯ ಶಂಕರದಾಸಯ್ಯನವರು ಆ ಮೇಲೆ ಬಸವಾದಿ ಶಿವಶರಣರು ಗದ್ಯವೂ ಅಲ್ಲದ ಪದ್ಯವಾಗದ ಹೃದ್ಯವಾದ ವಚನಾಮೃತ ಫಲಗಳಿಂದ ಆ ಸಾಹಿತ್ಯವೃಕ್ಷವು ಕಲ್ಪವೃಕ್ಷವಾಗುವಂತೆ ಅದನ್ನ ಪೋಷಿಸಿದರು.

"ಬಸವಾದಿ ಪ್ರಮಥರ ವಚನ ಭಾಂಡಾರವು ಪ್ರತಿಯೊಬ್ಬ ಮನುಷ್ಯನ ಆತ್ಮ ಕಲ್ಯಾಣಕ್ಕೆ ತೆರೆದಿಟ್ಟ ನಿಧಿಯಾಗಿದೆ. ತನ್ನನ್ನು ತಾನು ತಿಳಿಯಬೇಕಾಗಿದ್ದರೆ, ತನ್ನಿಂದಲೇ ತನಗೆ ಸದ್ಗತಿಯು ದೊರೆಯಬೇಕಾಗಿದ್ದರೆ ತಾನೇ ತಾನಾಗುವ ಬಯಕೆ ಇದ್ದರೆ ಅದಕ್ಕೆ ಅವಶ್ಯವಾದ ಜ್ಞಾನಸಂಪತ್ತು ವಚನ ಭಾಂಡಾರದಲ್ಲಿರುವದು. ಅದರ ಸದುಪಯೋಗವನ್ನು ಸಮಾಜವು ಸರಿಯಾಗಿ ತೆಗೆದುಕೊಳ್ಳದೇ ಇದ್ದಂತಹ ಸಮಯದಲ್ಲಿ ಹದಿನೈದನೆಯ ಶತಮಾನದಲ್ಲಿ ಶ್ರೀ ಜಗದ್ಗುರು ಸಿದ್ಧಲಿಂಗ ತೋಂಟದಾರ್ಯರ ಅವತಾರವಾಯಿತು. ಅವರು ತಮ್ಮ ಅಗಾಧವಾದ ಶಿವಾನುಭವಜ್ಞಾನ, ಶಿವಯೋಗಸಂಪತ್ತು, ದಯಾಭಾವ, ಅನುಪಮ ಸಾರಸ್ವತ ಸಿದ್ಧಿ ಇವುಗಳಿಂದ ಅನೇಕ ಜನ ಶಿಷ್ಯರನ್ನು ನಿರ್ಮಾಣಮಾಡಿ, ಬಸವಾದಿ ಪ್ರಮಥರಿಗಿಂತಲೂ ಅಧಿಕವಾಗಿ ಧರ್ಮ ಮತ್ತು ಸಾಹಿತ್ಯ ಇವುಗಳ ಉದ್ಧಾರ ಕಾರ್ಯವನ್ನೆಸಗಿ ಸಮಾಜಕ್ಕೆ ಪರಮೋಪಕಾರಿಗಳಾದರು. ಇವರಿಂದಲೂ ಇವರ ಶಿಷ್ಯ ಪ್ರಶಿಷ್ಯರಿಂದಲೂ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅನುಭವಪೂರ್ಣ ಹೃದಯಂಗಮ ಲಲಿತ ಕಲೆಗಳಿಂದ ಕೂಡಿದ ಷಟ್ಸ್ಥಲಜ್ಞಾನ ಸಾರಾಮೃತ (ಸಿದ್ಧೇಶ್ವರ ವಚನ) ಶೂನ್ಯಸಂಪಾದನೆ, ಸಿದ್ಧೇಶ್ವರಪುರಾಣ, ಸ್ವತಂತ್ರ ಸಿದ್ಧಲಿಂಗೇಶ್ವರ ವಚನ, ವೀರಶೈವಾನಂದ ಚಂದ್ರಿಕೆ (ಸಂಸ್ಕೃತ) ವೀರಶೈವಾಚಾರ ಕೌಸ್ತುಭ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಕರ್ಣಾಟಕಶಬ್ದಮಂಜರಿ, ಮನೋವಿಜಯಾದಿ ಷಟ್ಕಾವ್ಯಗಳು, ಘನಲಿಂಗಿಯ ವಚನಗಳು, ಸಿದ್ಧಾಂತ ಶಿಖಾಮಣಿ ಟೀಕೆ (ಸಂಸ್ಕೃತ) ಇತ್ಯಾದಿ ಉದ್ಗ್ರಂಥಗಳು ನಿರ್ಮಾಣ ಹೊಂದಿ ರಾರಾಜಿಸುತ್ತವೆ. ಇದು ಶ್ರೀ ಜಗದ್ಗುರು ತೋಂಟದಾರ್ಯ ಪೀಠದಿಂದ ನಡೆದ ಸಾಹಿತ್ಯೋದ್ಧಾರ ಸುಪ್ರಸಂಗದ ಸವಿನೆನಪು.

“ಕನ್ನಡ ಸಾಹಿತ್ಯ ಮಹಾವೃಕ್ಷದ ಪೋಷಣೆಯನ್ನು ಮುನ್ನಿನ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಸೋಮ, ಭೀಮ, ಚಾಮರಸ, ವಿರೂಪಾಕ್ಷ ಪಂಡಿತ ಇವರೇ ಮೊದಲಾದವರು ಒಂದುರೀತಿಯಿಂದ ಚನ್ನಾಗಿ ಮಾಡಿದ್ದರೆ ಶ್ರೀ ಜಗದ್ಗುರು ತೋಂಟದಾರ್ಯ ಪೀಠದವರು ಮತ್ತೊಂದು ರೀತಿಯಲ್ಲಿ ವಿಶಿಷ್ಟತೆಯನ್ನು ಕಾಯ್ದುಕೊಂಡು ಮಾಡಿದ್ದಾರೆ. ಇದು ಸರ್ವರಿಗೂ ವಿದಿತವಾಗಬೇಕು.

“ವೈಷ್ಣವ ಮಹಾಕವಿಗಳು ಕನ್ನಡ ಭಾಷಾ ಸಾಹಿತ್ಯವು ಧರ್ಮಬೋಧಕ, ನೀತಿಬೋಧಕ; ಚಾರಿತ್ರ್ಯಬೋಧಕ, ವಸ್ತುಕ, ವರ್ಣಕ, ಪ್ರಬಂಧಾದಿಗಳ ಮೂಲಕ ಭಕ್ತಿಪ್ರವಾಹದಲ್ಲಿ ನಲಿನಲಿದಾಡುವಂತೆ ಅದರ ಸೇವೆಯನ್ನು ಮನಮುಟ್ಟಿ ಮಾಡಿ ಕನ್ನಡ ತಾಯಿಯ ಮಸ್ತಕದ ಮೇಲೆ ಕೀರ್ತಿಕಲಶವನ್ನಿಟ್ಟು ಪರಿಶೋಭಿಸಿದರು.

“ಹೀಗೆ ಓದುಗಬ್ಬಗಳಿಂದ ಕನ್ನಡನುಡಿಯು ಪ್ರಜ್ವಲಿಸುತ್ತಿರುವಾಗ ಹಾಡುಗಬ್ಬಗಳಿಂದಲೂ ಅದರ ಸೊಬಗು ಸೌಂದರ್ಯಗಳು ಹೆಚ್ಚುವಂತೆ ನಿಜಗುಣ ಶಿವಯೋಗಿಗಳು, ಪುರಂದರದಾಸರು, ಮುಪ್ಪಿನ ಷಡಕ್ಷರಿ ಮೊದಲಾದವರು ಅಚ್ಚಳಿಯದ ಸೇವೆಯನ್ನು ಮಾಡಿ ಕೀರ್ತಿಕಾಯರಾದರು. ಇವರೆಲ್ಲರು ಮಾಡಿದ ಸೇವೆಯು ಸಾಮಾನ್ಯರಿಗೂ ಸುಲಭವಾಗಿ ದೊರೆಯಲೆಂದು. ಜನಪದಸಾಹಿತ್ಯ ಸಾಮ್ರಾಟನೆಂದೆನಿಸಿದ ಸರ್ವಜ್ಞ ಕವಿಯೂ ಸಾಹಿತ್ಯ ಸೇವಾಕಾರ್ಯದಲ್ಲಿ ಕೃತಕೃತ್ಯನಾಗಿದ್ದಾನೆ.

“ತೀರ ಇತ್ತೀಚೆಗೆ ಕನ್ನಡ ತಾಯಿಯು ಮಹಾಮೇಧಾವಿಗಳೂ, ರಸಜ್ಞರೂ, ತತ್ತ್ವವೇತ್ತರೂ, ದಾರ್ಶನಿಕರೂ, ಕವಿಕುಲ ಕಂಠೀರವರೂ ಆದ ಮಕ್ಕಳನ್ನು ಹೆತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಮುಖಾಂತರವಾಗಿ ವಿವಿಧ ರೀತಿಯಿಂದ ತನ್ನ ಸೇವೆಯನ್ನು ಸ್ವೀಕರಿಸುತ್ತ ತಾನು ಹೆತ್ತದ್ದು ಸಾರ್ಥಕವಾಯಿತೆಂದು ಸಂತೋಷಿಸುತ್ತಲಿದ್ದಾಳೆ. ಸುದೈವದಿಂದ ಈಗ ೪೨ ಕನ್ನಡ ಸಾಹಿತ್ಯ ಸಮ್ಮೇಳನಗಳು ಸಮರ್ಥ ಅಧ್ಯಕ್ಷರುಗಳ ಮೇಲ್ವಿಚಾರಣೆಯಲ್ಲಿ ನಿರ್ವಿಘ್ನತೆಯಿಂದ ಸಾಹಿತ್ಯ ಸೇವೆಯನ್ನು ಮಾಡುತ್ತ ಬಂದದ್ದು ಸಂತೋಷದ ಸಂಗತಿಯು.

“ಚಾಮರಸ, ಕುಮಾರವ್ಯಾಸರ ಸಾಹಿತ್ಯ ಕ್ರೀಡಾಂಗಣವೆಂದೆನಿಸಿಕೊಂಡ ಶ್ರೀ ತೋಂಟದಾರ್ಯರ ಪುಣ್ಯಸ್ಥಾನವಾದ ಮತ್ತು ಇವರಿಂದಲೇ ಕೃತಪುರವು ಗದಗು ಎನಿಸಿಕೊಂಡ ಈ ನಮ್ಮ ಪಟ್ಟಣದಲ್ಲಿ ಈಗ ೪೩ನೇ ಕನ್ನಡ ಸಾಹಿತ್ಯ ಸಮ್ಮೇಲನವು ನಡೆಯುತ್ತಿರುವದು, ನಮಗೆಲ್ಲರಿಗೂ ಅಭಿಮಾನದ ಸಂಗತಿಯಾಗಿದೆ. ಈ ಸಮ್ಮೇಲನದ ಉದ್ಘಾಟನೆಯನ್ನು ಶಿಕ್ಷಣ ತತ್ತ್ವದಲ್ಲಿ ಆಧುನಿಕತೆಯನ್ನನುಸರಿಸಿದ ಮಹಾ ಮುತ್ಸದ್ದಿಗಳಾದ ರಾಷ್ಟ್ರಸೇವಾ ಧುರಂಧರ ಶ್ರೀಯುತ ಅಣ್ಣಾರಾವ ಗಣಮುಖಿ ವಿದ್ಯಾಮಂತ್ರಿವರ್ಯರು ಮಾಡುತ್ತಲಿದ್ದಾರೆ. ಈ ಸಮ್ಮೇಲನದ ಅಧ್ಯಕ್ಷ ಸ್ಥಾನವನ್ನು ಕನ್ನಡ ನಾಡಿನ ಹಿರಿಯ ಸಾಹಿತಿಗಳು ತಮ್ಮ ಜ್ಞಾನ ಶಕ್ತಿಯಿಂದ ಅನೇಕ ಪ್ರಬುದ್ಧ ಪ್ರಬಂಧಗಳನ್ನು ರಚಿಸಿ ಅಲ್ಲಲ್ಲಿ ವಿದ್ವಾಂಸರಾದ ಹಲವು ಜನ ಶಿಷ್ಯ—ಪ್ರಶಿಷ್ಯರನ್ನು ನಿರ್ಮಾಣ ಮಾಡಿದ ಮಹಾಮೇಧಾವಿಗಳಾದ ಶ್ರೀಯುತ ಕೆ. ಜಿ. ಕುಂದಣಗಾರರವರು ಅಲಂಕರಿಸುತ್ತಿದ್ದಾರೆ.

“ಅಲ್ಲದೆ, ಈ ಸಮ್ಮೇಲನಕ್ಕೆ ಸ್ಥಳೀಯ ಮುಂದಾಳುಗಳಾದ ಕೆ. ಎಚ್. ಪಾಟೀಲರು ಸ್ವಾಗತವನ್ನು ಬಯಸುತ್ತಿದ್ದಾರೆ. ಈ ಸಾಹಿತ್ಯ ಸಮ್ಮೇಲನದಲ್ಲಿ ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿಗಳೂ, ಹಲವುಜನ ವಿದ್ವಾಂಸರೂ ಭಾಗವಹಿಸಿದ್ದನ್ನು ನೋಡಿ ಮಹಾಸನ್ನಿಧಿಗೆ ಅತೀವ ಆನಂದವಾಗಿದೆ. ಇವರೆಲ್ಲರಿಗೂ, ಈ ೪೩ ನೆಯ ಕನ್ನಡ ಸಾಹಿತ್ಯ ಸಮ್ಮೇಲನಕ್ಕೂ ಶ್ರೀ ಮಹಾಸನ್ನಿಧಿಯು ಅಖಂಡ ಕಲ್ಯಾಣವನ್ನೀಯಲೆಂದೂ ಇಂಥ ಸಮ್ಮೇಲನಗಳು ನಮ್ಮ ಪುಣ್ಯಕ್ಷೇತ್ರವಾದ ಗದುಗಿನಲ್ಲಿ ಪದೇಪದೇ ನಡೆಯಲೆಂದೂ ಇಚ್ಛಿಸಿ ಎಲ್ಲವೂ ಶುಭಪ್ರದವಾಗಲೆಂದು ಶುಭಾಶೀರ್ವಾದವು.”

ಸ್ವಾಗತಾಧ್ಯಕ್ಷರ ಭಾಷಣ

ಸ್ವಾಗತ ಬಯಸುತ್ತಾ, ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಎಚ್‌. ಪಾಟೀಲರು ಹೀಗೆ ನುಡಿದರು.

"ನಲವತ್ತು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಈ ಜ್ಞಾನ ಸತ್ರದಲ್ಲಿ ಭಾಗವಹಿಸುವದಕ್ಕೆ ಆಗಮಿಸಿದ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುವದಕ್ಕೆ ನನಗೆ ಅಪಾರ ಆನಂದವೂ ಆತ್ಮೀಯ ಅಭಿಮಾನವೂ ಅನಿಸುತ್ತದೆ. ಈ ದಿವ್ಯ ಭವ್ಯ ಕುಮಾರವ್ಯಾಸ ಮಂಟಪದಲ್ಲಿ ಸಮ್ಮಿಳಿತವಾದ ಈ ಸಾರಸ್ವತ ಪ್ರಪಂಚವನ್ನು ಸ್ವಾಗತಿಸುವ ಸೌಭಾಗ್ಯವು ನನಗೆ ಪ್ರಾಪ್ತವಾದದ್ದಕ್ಕೆ ನಾನೇ ಧನ್ಯನೆಂದು ತಿಳಿಯುತ್ತೇನೆ.

"ಚಿನ್ನದ ಗಣಿಗಳು ಮತ್ತು ವನಸ್ಪತ್ಯೌಷಧಗಳಿಂದ ತುಂಬಿದ ಹಾಗೂ ತಪೋಭೂಮಿಯಾಗಿ ಮೆರೆಯುವ ಕಪೋತ ಪರ್ವತಶ್ರೇಣಿ, ಶಿಬಿಚಕ್ರವರ್ತಿಯ ಲಕ್ಕುಂಡಿ, ಬೆಳಧಡಿ ಹಾಗೂ ಸ್ವಯಂಭೂ ವೆಂಕಟರಮಣನ ಮೂರ್ತಿಯಿಂದೆಸೆವ ಭೂ ವೈಕುಂಠವೆಂದು ಖ್ಯಾತಿಪಡೆದ ವೆಂಕಟಾಪೂರ ಮೊದಲಾದ ಐತಿಹಾಸಿಕ ಹಾಗೂ ಆಧ್ಯಾತ್ಮಿಕ ಕೇಂದ್ರಗಳ ಮಧ್ಯದಲ್ಲಿ ದಕ್ಷಿಣ ,ಕಾಶಿ ಎಂದೆನಿಸಿದ ಈ ಸ್ಥಳವು ಪುರಾಣ ಪ್ರಸಿದ್ಧವಿದೆ. ಶ್ರೀ ತ್ರಿಕೂಟೇಶ್ವರ, ಶ್ರೀ ವೀರನಾರಾಯಣ ಮತ್ತು ಶ್ರೀ ಜಗದ್ಗುರು ತೋಂಟದಾರ್ಯ ಮಠಗಳ ಅಸ್ತಿತ್ವದಿಂದ ಗದುಗು ದ್ವೈತಾದ್ವೈತ ವಿಶಿಷ್ಟಾದ್ವೈತ ತತ್ವಗಳ ಸಮನ್ವಯ ಸಾಮರಸ್ಯಗಳನ್ನು ಅಳವಡಿಸಿಕೊಂಡ ಪವಿತ್ರ ಕ್ಷೇತ್ರವಾಗಿದೆ. ಗದುಗು ಚಾಮರಸನ ಪ್ರಭುಲಿಂಗಲೀಲೆಯ, ಕುಮಾರವ್ಯಾಸನ ಕನ್ನಡ ಮಹಾಭಾರತದ ಜನ್ಮಸ್ಥಳವಾಗಿದೆ. ಆರೇಳು ಶತಮಾನಗಳ ಹಿಂದೆ ಪ್ರವಹಿಸಿದ ಸಾಹಿತ್ಯ ಗಂಗೆಯು ಗುಪ್ತಗಾಮಿನಿಯಾಗಿ ಇಂದು ಸತ್ಕರಿಸಲ್ಪಡುತ್ತಿರುವ ಕನ್ನಡ ನಾಡಗೀತೆಯ ವರಕವಿಗಳಾದ ಹುಯಿಲಗೋಳ ನಾರಾಯಣರಾಯರ "ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು" ರಾಷ್ಟ್ರಗೀತೆಯಲ್ಲಿ ಪ್ರವಹಿಸಿದ್ದಾಳೆ.

"ಇಲ್ಲಿಯ ಪುರಾತನ ದೇವಾಲಯಗಳಾದ ಶ್ರೀ ತ್ರಿಕೂಟೇಶ್ವರ, ಶ್ರೀ ವೀರನಾರಾಯಣ, ಪ್ರಸನ್ನ ವೆಂಕಟರಮಣ ಮತ್ತು ಜುಮ್ಮಾ ಮಶೀದೆ ಮೊದಲಾದ ಹಿಂದೂ ಮುಸಲ್ಮಾನ ದೇವಾಲಯ ಮಶೀದೆಗಳಿಗೆ ಒಂದೇ ಒಂದು ಟ್ರಸ್ಟ ಕಮೀಟಿಯು ಇದ್ದು ಹಿಂದೂ ಮುಸಲ್ಮಾನ ಸದಸ್ಯರಿದ್ದುದನ್ನು ನೋಡಿದರೆ ಗದಗ-ಬೆಟಗೇರಿ ನಾಗರಿಕರಲ್ಲಿ ಸಹಜ ಸಿದ್ಧವಾಗಿ ಕಂಡುಬರುವ ಮತಸಹಿಷ್ಣುತೆ ಹಾಗೂ ಪರಸ್ಪರ ಸೌಹಾರ್ದತೆಗಳು ನಿಚ್ಚಳವಾಗಿ ಕಂಗೊಳಿಸುವಂತಿವೆ.

"ತನ್ನ ಹಿಂದಿನ ಭವ್ಯ ಪರಂಪರೆಯಲ್ಲಿಯೇ ಗದಗ-ಬೆಟಗೇರಿಯು ತನ್ನ ಉಜ್ವಲ ಭವಿಷ್ಯವನ್ನು ರೂಪಿಸುತ್ತಿರುವ ಇಂದಿನ ನೂರಾರು ಪ್ರಯತ್ನಗಳು ಜನಮನವನ್ನು ಸೆಳೆಯುವಂತಿವೆ. ಗದಗ-ಬೆಟಗೇರಿ ನಗರಸಭೆಯು ಮೊನ್ನೆಮೊನ್ನೆ ತನ್ನ ಜನ್ಮಶತಾಬ್ದಿಯನ್ನು ಆಚರಿಸಿ, ಉತ್ತರ ಕರ್ನಾಟಕದಲ್ಲಿಯೇ ಜನಪ್ರತಿನಿಧಿಗಳಿಂದ ಆಡಳಿತ ನಡಿಯಿಸಲ್ಪಟ್ಟ ಆದರ್ಶ ನಗರಸಭೆ ಎಂಬ ಖ್ಯಾತಿಯನ್ನು ಗಳಿಸಿದೆ. ಈಗ ೫-೬ ವರುಷಗಳಲ್ಲಿ ನಗರಸಭೆಯು ಹಿಂದೆ ಎಂದೂ ಆಗದಷ್ಟು ಸುಧಾರಣೆಗಳನ್ನು ಮಾಡಿದೆ.

"ಪೂಜ್ಯ ಗಾಂಧೀಜಿಯವರ ಅಸಹಕಾರ ಚಳವಳಿಯಲ್ಲಿ ಗದುಗು ಅಗ್ರಸ್ಥಾನವನ್ನು ವಹಿಸಿದ್ದನ್ನು ಐತಿಹಾಸಿಕವಾಗಿ ನೋಡಿದರೂ ಇಂದಿಗೂ ನ್ಯೈನವಿರೇಳುವದು. ಭಾರತೀಯ ಸಹಕಾರೀ ಆಂದೋಲನದಲ್ಲಿ ಗದುಗಿಗೆ ಪ್ರಥಮ ಸ್ಥಾನವಿದೆ ಅಂಬುವದನ್ನು ತಿಳಿಸಲು ಹೆಮ್ಮೆ ಅನಿಸುತ್ತದೆ. ಗದುಗು ಸಹಕಾರೀ ಆಂದೋಲನದ ತೊಟ್ಟಿಲು. ಸಾವಿರಾರು ನಿಸ್ಪೃಹ ಕೈಗಳು

ಈ ಸಹಕಾರಿ ತೊಟ್ಟಿಲನ್ನು ಸತತವಾಗಿ ತೂಗಿ ಅರ್ಧ ಶತಮಾನದ ನಂತರವೂ ಸಹಕಾರೀ ಪ್ರಪಂಚದಲ್ಲಿ ಗದಗು ತನ್ನ ಪ್ರಥಮ ಪ್ರಾಶಸ್ತ್ಯವನ್ನು ಕಾಯ್ದುಕೊಂಡು ಬಂದಿದೆ ಎಂದು ಹೇಳುವಾಗ ನನ್ನ ಹೃದಯವು ಅಭಿಮಾನದಿಂದ ಉಕ್ಕೇರುತ್ತದೆ.

"ಕೇವಲ ಯಾಂತ್ರಿಕ ಜ್ಞಾನ, ವಾಣಿಜ್ಯ, ಉದ್ದಿಮೆಗಳ ಅಭಿವೃದ್ಧಿಯಿಂದ ಜನಜೀವನಕ್ಕೆ ಕಮ್ಯುನಿಜಮ್‌ದ ರೋಗವು ಅಂಟಿಕೊಳ್ಳುವ ಸಂಭವವಿದೆ. ಕೇವಲ ರಾಜಕೀಯದಿಂದ ಜನಜೀವನ ಪರಿವರ್ತನವಾದೀತೆಂದು ನನಗೆ ಅನಿಸುವದಿಲ್ಲ. ಸಹಕಾರಿ ಸಂಘಗಳ ಅಂಕಿ ಸಂಖ್ಯೆಗಳ ಮೇಲಿಂದ ಸಹಕಾರೀ ತತ್ವವು ಅನುಷ್ಠಾನಕ್ಕೆ ಬರಲಾರದು. ಜನಜೀವನದ ಸರ್ವಾಂಗೀಣ ಸುಧಾರಣೆಯಾಗಬೇಕಾದರೆ, ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ಅಡಕವಾದ ನಿತ್ಯನೂತನ ಸನಾತನ ಭಾರತೀಯ ಸಂಸ್ಕೃತಿಯ ಉಪಾಸನೆಯನ್ನು ನಮ್ಮ ಸಾಹಿತಿಗಳು ಮಾಡುವುದವಶ್ಯವೆಂದು ನನಗೆ ಅನಿಸುತ್ತದೆ. ಸಾಹಿತಿಗಳು ಯಾವ ಸಾಹಿತ್ಯವನ್ನು ನಿರ್ಮಾಣ ಮಾಡಬೇಕೆಂದು ನಾನು ಹೇಳುವದು ಸಾಹಸದ ಮಾತೇ ಸರಿ. ನುರಿತ ಶಿಕ್ಷಕರೂ ಮತ್ತು ಪಳಗಿದ ಸಾಹಿತಿಗಳೂ, ಸರಳ ನಿರಾಡಂಬರ ಜೀವಿಗಳೂ ಆದ ಶ್ರೀ ಕೆ. ಜಿ. ಕುಂದಣಗಾರರ ಅಧ್ಯಕ್ಷತೆಯಲ್ಲಿ ಕೂಡಿದ ಯಾವತ್ತೂ ಸಾಹಿತಿಗಳೂ ವಿಚಾರ ವಿನಿಮಯ ಮಾಡಿ ಯೋಗ್ಯ ಮಾರ್ಗದರ್ಶನ ಮಾಡಿ ನಲವತ್ತುಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡ ಸಂತತಿಯ ಸ್ಮೃತಿಪಟಲದಲ್ಲಿ ಅಚ್ಚಳಿಯದೇ ಉಳಿಯುವಂತೆ ಮಾಡುವಿರೆಂಬ ಪೂರ್ಣ ಭರವಸೆಯು ನನಗಿದೆ.

"ಮತ್ತೊಮ್ಮೆ ತಮ್ಮೆಲ್ಲರಿಗೂ ಹೃತ್ಪೂರ್ವಕ ಸುಸ್ವಾಗತವನ್ನು ಬಯಸಿ ನನ್ನ ಸ್ವಾಗತ ಭಾಷಣವನ್ನು ಮುಗಿಸುತ್ತೇನೆ."

ಬಿ. ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19

ಉದ್ಘಾಟನಾ ಭಾಷಣ

ಸಮ್ಮೇಳನದ ಉದ್ಘಾಟಕರಾದ ವಿಶಾಲ ಮೈಸೂರಿನ ಮಾನ್ಯ ವಿದ್ಯಾಮಂತ್ರಿ
ಶ್ರೀ ಅಣ್ಣಾರಾವ್ ಗಣಮುಖಿಯವರು ಮಾಡಿದ ಭಾಷಣ

"ಕಾವ್ಯ-ಶಿಲ್ಪ-ಸಂಗೀತ ಕಲೆಗಳ ಕೇಂದ್ರವೂ, ವಿದ್ಯೆ-ವ್ಯಾಪಾರ-ವಿವೇಚನೆಗಳ ಆಗರವೂ, ಕನ್ನಡದ ಗಂಡುಮೆಟ್ಟೂ ಎನಿಸಿರುವ ಗದಗಿನಲ್ಲಿ 'ಕುಮಾರವ್ಯಾಸ ಮಂಟಪ'ದಲ್ಲಿ ಸಂಭ್ರಮದೊಡನೆ ಸೇರಿರುವ ಈ ೪೩ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಲು ನನಗೆ ಆಣತಿಯಿತ್ತು ತಾವೆಲ್ಲರೂ ನನಗೆ ತಮ್ಮ ಪ್ರೀತಿವಿಶ್ವಾಸಗಳ ಅಕ್ಷಯನಿಧಿಯನ್ನು ನೀಡಿ ಗೌರವಿಸಿದ್ದೀರಿ. ಆ ಅಮೂಲ್ಯನಿಧಿಗೆ ಅರ್ಹನಾಗುವಂತೆ ಕನ್ನಡತಾಯಿ ನನ್ನನ್ನು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇನೆ; ಮತ್ತು ತಮಗೆಲ್ಲ ತಲೆಬಾಗುತ್ತೇನೆ. ತಮ್ಮ ಈ ಪ್ರೀತಿ ವಿಶ್ವಾಸಗಳ ಸಾಸುವೆಯ ಷಡ್ಭಾಗಕ್ಕಾದರೂ ನಾನು ತಕ್ಕವನಾದರೆ ನನ್ನ ಜನ್ಮ ಸಾರ್ಥಕವಾದಂತೆಯೇ ಎಂದು ಭಾವಿಸಿದ್ದೇನೆ.

"ಕನ್ನಡಿಗರ ಈ ಸಾಹಿತ್ಯ ಸಮಾರಾಧನೆಗೆ ಕನ್ನಡಿಗರ ಸರಕಾರದ ಪ್ರತಿನಿಧಿಯನ್ನಾಗಿ ನನ್ನನ್ನು ತಾವು ಕರೆಸಿಕೊಂಡಿದ್ದೀರಿ. ಏಕೆ? ಕನ್ನಡಿಗರ ಆಶೋತ್ತರಗಳಂತೆ ಕನ್ನಡಿಗರ ಸರಕಾರ ನಡೆಯಬೇಕು. ಕನ್ನಡಿಗರ ಆಶೋತ್ತರಗಳೇನೆಂಬುದನ್ನು ಅರಿಯಲು ಕನ್ನಡ ಸಾಹಿತ್ಯ ಸಮ್ಮೇಳನವೂ ಸಮುಚಿತ ಸ್ಥಳವಾಗಿದೆ.

"ಯಾವುದೊಂದು ಜನಾಂಗದ ಸಾಹಿತ್ಯ ಆ ಜನಾಂಗದ ಇಚ್ಛಾಶಕ್ತಿಯ ಪ್ರತೀಕ; ಅವರ ವಿದ್ಯಾಮಂದಿರಗಳು ಅವರ ಜ್ಞಾನಶಕ್ತಿಯ ಸಂಕೇತ; ಅವರ ಸರಕಾರ ಅವರ ಕ್ರಿಯಾ ಶಕ್ತಿಯ ದ್ಯೋತಕ. ಈ ಮೂರರ ಮೇಳದಲ್ಲಿದೆ ಮೇಲ್ಮೆ. ವಿದ್ಯಾಮಂದಿರಗಳಿಂದಲೇ ಕೆಲವರು ಸರಕಾರದಲ್ಲಿ ಸೇರಿಕೊಂಡು ಕ್ರಿಯಾಶಕ್ತಿಯ ಸಾಧಕರಾಗುತ್ತಾರೆ; ಅಲ್ಲಿಂದಲೇ ಇನ್ನು ಕೆಲವರು ಸಾಹಿತ್ಯಕ್ಷೇತ್ರವನ್ನು ಸೇರಿ ಇಚ್ಛಾಶಕ್ತಿಯ ಆರಾಧಕರಾಗುತ್ತಾರೆ. ಇಬ್ಬರ ಗುರಿಯೂ ಒಂದೇ: ಜನಕಲ್ಯಾಣ, ಜನಮಂಗಲ, ಜನಹಿತ. ಇಬ್ಬರೂ ಒಬ್ಬರೊಬ್ಬರಿಗೆ ಪೂರಕರು. ವಿದ್ಯಾಮಂದಿರಗಳಲ್ಲಿ ಜ್ಞಾನಾರ್ಜನೆಯನ್ನು ನಡಸದಿದ್ದರೂ ಮಾನವಸಹಜವಾದ ಆಸೆ, ಅಭೀಪ್ಸೆ, ಆದರ್ಶ, ಸುಖದುಃಖ, ನಗೆನೋವು, ನಲವು ನಿಟ್ಟುಸಿರುಗಳಿಗೆ ಒಳಗಾಗಿ, ಅವುಗಳನ್ನು ಅಂತರಾಳದಲ್ಲಿ ಅನುಭವಿಸಿಯೂ ಅವುಗಳನ್ನು ಯಥೋಚಿತವಾಗಿ ವ್ಯಕ್ತಗೊಳಿಸುವ ಸಾಮರ್ಥ್ಯವಿಲ್ಲದೆ ಮೌನವನ್ನೇ ಮೊರೆಹೊಗುವ ಲಕ್ಷಾವಧಿ ಜನರ ಹೃದಯೇಂಗಿತವನ್ನು, ಮನೋಗತವನ್ನು ಯಾರು ಗುರುತಿಸಬೇಕು? ಯಾರು ಅವರ ಅವ್ಯಕ್ತ ಅಭಿಲಾಷೆಗಳಿಗೆ ವ್ಯಕ್ತರೂಪವನ್ನು ಕೊಡಬೇಕು? ಸಾಹಿತಿಯಲ್ಲವೆ? ಇನ್ನಾರೂ ಈ ಕಾರ್ಯವನ್ನು ಅವನಂತೆ, ಅವನಷ್ಟು ಪರಿಣಾಮಕಾರಿಯಾಗಿ ಮಾಡಲಾರರು. ಅವನು ಮೂಕಜನತೆಯ ವಾಣಿ. ಅದೇಕೆ? ದೊಡ್ಡ ದೊಡ್ಡ ವಾಗ್ಮಿಗಳಿಗೂ ಅವರಿಗೆ ಗೊತ್ತಿಲ್ಲದಂತೆ ಅವರಲ್ಲಿಯೇ ಅವಿತಿರುವ ಭಾವನಾಪ್ರಪಂಚದ ದರ್ಶನವನ್ನು ಮಾಡಿಸುವವನೂ ಸಾಹಿತಿಯೆ. ಅವನು ನಮ್ಮ ಅಂತರಂಗ ವನ್ನು ನಮಗೆ ತೆರೆದು ತೋರಿಸದಿದ್ದರೆ ಅಲ್ಲಿ ಅನವರತವೂ ನಡೆದಿರುವ ಅನೇಕ ವ್ಯಾಪಾರಗಳು ನಮ್ಮ ಗಮನಕ್ಕೆ ಬಾರದೆಯೇ ಹೋಗಬಹುದು, ಬಂದರೂ ಅರ್ಥವಾಗದೆ ಹೋಗಬಹುದು. ಆದುದರಿಂದ ಜೀವನ ಶಕ್ತಿಯ, ಇಚ್ಛಾಶಕ್ತಿಯ ಅನಂತ ರೂಪಗಳ ಅವ್ಯಕ್ತ ಪ್ರಪಂಚದಲ್ಲಿ ಸಂಚರಿಸಿ ಅಲ್ಲಿಂದ ಆಣಿಮುತ್ತುಗಳನ್ನು ಆಯ್ದು ನಮ್ಮ ಬಾಳಿಗೆ ಶೋಭೆಯಾಗುವಂತೆ ಅವು ಗಳನ್ನು ಸರ ಮಾಡಿ ನೀಡುವವನು ಸಾಹಿತಿ. ಹೀಗೆ ಮಾಡುವಾಗ ಅವನು ನಮ್ಮ ಸಂಸ್ಕೃತಿಯ, ನಮ್ಮ ಜನದ ಆಶೋತ್ತರಗಳ ಅಭಿವ್ಯಕ್ತಿಯಾಗುತ್ತಾನೆ. ಆ ಆಶೋತ್ತರಗಳಿಗೆ ತಕ್ಕಂತೆ,

ಅವು ಈಡೇರುವಂತೆ, ಸಫಲವಾಗುವಂತೆ, ಜನಕಲ್ಯಾಣ ಸಾಧಕವಾಗುವಂತೆ ಸರಕಾರವನ್ನು ಸಜ್ಜುಗೊಳಿಸಿ ಸಾಗಿಸಿಕೊಂಡು ಹೋಗುವುದು ಕ್ರಿಯಾಶಕ್ತಿಯ ಭಕ್ತರ ಕಾರ್ಯವಾಗಿದೆ. ಆದುದರಿಂದ ಸಾಹಿತಿ, ಸರಕಾರದ ಪ್ರತಿನಿಧಿ–ಇಬ್ಬರ ಗುರಿಯೂ ಒಂದೇ—ಜ್ಞಾನವ ಬೆಳಕಿನಲ್ಲಿ ಜನರ ಬೇಕು–ಬೇಡಗಳನ್ನು ಗುರುತಿಸಿ, ಬೇಕುಗಳು ಈಡೇರುವಂತೆಯೂ ಬೇಡಗಳು ಇಲ್ಲವಾಗುವಂತೆಯೂ ನಾಡಿನ ಕಾರ್ಯಗಳನ್ನು ನಡಸುವುದು.

"ಈ ಮಾತನ್ನು ನಾನು ಔಪಚಾರಿಕವಾಗಿ ಹೇಳುತ್ತಿಲ್ಲ. ಅತ್ಯಂತ ಪ್ರಗತಿಪರವೆನಿಸಿರುವ ಇತರ ದೇಶಗಳಲ್ಲಿಯೂ ಸಾಮಾಜಿಕ ಶಾಸನಗಳಿಗೆ, ಸಮಾಜ ಸಂಸ್ಕರಣ ಕಾರ್ಯಗಳಿಗೆ, ಆರ್ಥಿಕ ಪುನರ್ವ್ಯವಸ್ಥೆಗೆ ಪ್ರೇರಣೆ ಪ್ರಾಪ್ತವಾದುದು ಲೇಖಕರಿಂದ, ಆಲೋಚಕರಿಂದ, ತಜ್ಞರಿಂದ; ಅವರಿಗೆ ಪ್ರೇರಣೆ ದೊರೆತುದು ಸುತ್ತುಮುತ್ತಲಿನ ಸಮಾಜದಿಂದ, ಜನಜೀವನದಿಂದ, ಜನತೆಯ ಸುಖಸಂಕಷ್ಟಗಳಿಂದ. ನಮ್ಮಲ್ಲಿಯೂ ಸ್ವಾತಂತ್ರ್ಯದ ಕಹಳೆಯನ್ನು ಮೊದಲು ಮೊಳಗಿಸಿದವರು ಸಾಹಿತಿಗಳು. ಆ ಮೊಳಗನ್ನು ಕೇಳಿ ಜನ ಎದ್ದಿತು, ಜನ ಗೆದ್ದಿತು. 'ಹಿಂದಸ್ವರಾಜ್ಯ'ದಲ್ಲಿ ಹೊರಬಿದ್ದಿದ್ದ ಗಾಂಧೀಜಿಯವರ ಕನಸು ನನಸಾಯಿತು. ಕನ್ನಡ ನಾಡು ಒಂದಾದುದೂ ಹೀಗೆಯೆ. ಏಕೀಕರಣದ ಕನಸನ್ನು ಮೊದಲು ಕಂಡವರು ಸಾಹಿತಿಗಳು; ಅದನ್ನು ಕಾರ್ಯರೂಪಕ್ಕೆ ತಂದವರು ಜನರು, ಜನನಾಯಕರು.

"ಇದೇನೋ ಸರಿಯೆ. ಇನ್ನುಮುಂದೆ? ಇದುವರೆಗೆ ನಾಡನ್ನು ಒಂದುಗೂಡಿಸಿದುದಾಯಿತು, ಇನ್ನು ನಾಡ ಜನವನ್ನು ಒಂದುಗೂಡಿಸಬೇಕಾಗಿದೆ—ಅವರ ಹೃದಯದ ಹೊಲವನ್ನು ಹಸನುಗೊಳಿಸಿ. ಚಿಕುಪಾಧ್ಯಾಯನು ವರ್ಣಿಸಿದಂತೆ ಕನ್ನಡದ ನಾಡು 'ಪುಣ್ಯದೆಡೆ, ವಿನೋದದ ಗೊತ್ತು, ಸಿರಿಯ ಪೆರ್ಚುಗೆಗೆ ಒಳ್ಮನೆ'ಯಾಗುವಂತೆ, ಏಕಾಂಬರದೀಕ್ಷಿತರು ಕಂಡಂತೆ ಕರ್ಣಾಟಕ ದೇಶವು ಕಾಮಿತಾರ್ಥಗಳ ಕೋಶವಾಗುವಂತೆ ಈ ನಾಡನ್ನು ರೂಪಿಸಬೇಕಾಗಿದೆ; ಕನ್ನಡ ನುಡಿ ಜ್ಞಾನ ವಿಜ್ಞಾನಗಳ ಗಣಿಯಾಗುವಂತೆ, ಬೇಡಿದರ್ಥವನೀವ ಚಿಂತಾಮಣಿಯಾಗುವಂತೆ ಅದನ್ನು ಬೆಳೆಸಬೇಕಾಗಿದೆ; ಕನ್ನಡಿಗರು ಮತ್ತೆ ಕೈಲಾಸಮಂದಿರವನ್ನು ಕಟ್ಟಲು, ವಿಕ್ರಮಾರ್ಜುನವಿಜಯವನ್ನು ರಚಿಸಲು, ವಚನಗಳನ್ನು ಉಸಿರಲು, ಉಗಾಭೋಗಗಳನ್ನು ಹಾಡಲು, ಗೋಮಟೇಶ್ವರನನ್ನು ಕಂಡರಿಸಲು ಶಕ್ತರಾಗುವಂತೆ, ಸಮರ್ಥರಾಗುವಂತೆ, 'ತ್ಯಾಗದ, ಭೋಗದ, ಅಕ್ಕರದ, ಗೇಯದ, ಗೊಟ್ಟಿಯ, ಅಲಂಪಿನ ಇಂಪುಗಳಿಗೆ ಆಗರ'ವಾದ ಮಾನಿಸರಾಗುವಂತೆ ಅವರನ್ನು ಶಿಕ್ಷಣದಿಂದ ಸಜ್ಜುಗೊಳಿಸಬೇಕಾಗಿದೆ. ಈ ಮಹತ್ಕಾರ್ಯದಲ್ಲಿಯೂ ಸಾಹಿತಿಗಳು ಮುಂದಿನ ಸಾಲಿನಲ್ಲಿ ನಿಂತು ಮಾರ್ಗದರ್ಶನ ಮಾಡಬೇಕೆಂದು ಜನ ಬಯಸಿದರೆ, ನಿರೀಕ್ಷಿಸಿದರೆ ತಪ್ಪೇನಿಲ್ಲ.

"ಇದು ಸಾಹಿತಿಗಳಿಗೆ ಸಮಾಜವು ನೀಡಿರುವ, ನಾಡು ನೀಡಿರುವ, ಕಾಲ ನೀಡಿರುವ ಆಹ್ವಾನ. ಇದನ್ನವರು ಸ್ವೀಕರಿಸಲಿ; ತಮ್ಮ ಶಕ್ತಿದಾಯಕ ಸಾಹಿತ್ಯದಿಂದ ಕನ್ನಡ ಕುಲ ಒಂದಾಗುವಂತೆ ಬೆಸೆಯಲಿ, ಕನ್ನಡ ಧರ್ಮ ರೂಪುಗೊಳ್ಳುವಂತೆ ಎಸಗಲಿ, ಅವರಲ್ಲಿ ಅಲ್ಪ ಲಾಲಸೆಗಳು, ಕ್ಷಣಿಕ ಪ್ರಲೋಭನೆಗಳು, ಕ್ಷುಲ್ಲಕ ಕಾಮನೆಗಳು ಕೆರಳದೆ ಶಿವಸಂಕಲ್ಪಗಳು ಅರಳುವಂತೆ ಶ್ರಮಿಸಲಿ; ಕನ್ನಡ ನಾಡು ನಂದನವಾಗುವವರೆಗೆ, ಕನ್ನಡ ನುಡಿ ವಾಗ್ದೇವಿಯ ಭಾಂಡಾರವಾಗುವವರೆಗೆ ವಿರಮಿಸವೆಂಬ ಅದಮ್ಯ ಸಾಹಸೋತ್ಸಾಹಗಳನ್ನು ಅವರಲ್ಲಿ ಪ್ರಚೋದಿಸಲಿ; ಅವರೆಲ್ಲಿದ್ದರೂ, ಏನು ಮಾಡುತ್ತಿದ್ದರೂ ಈ ಹಿರಿಯ ಗುರಿಯನ್ನು ಮರೆಯದಂತೆ ಅವರನ್ನು ಜಾಗೃತಗೊಳಿಸಲಿ!

"ಯಾರು ಏನೇ ಹೇಳಲಿ, ಜನರು ಸಾಹಿತಿಗಳಿಂದ ನಿರೀಕ್ಷಿಸುತ್ತಲಿರುವುದು ಈ ಕಾರ್ಯವನ್ನು—ಬರಿ ಮನೋರಂಜನವನ್ನಲ್ಲ, ಬರಿ ಮನೋವಿಶ್ಲೇಷಣವನ್ನಲ್ಲ, ಜೀವನ ವಿಮರ್ಶೆ,

ಜೀವನದ ನಿದರ್ಶಗಳನ್ನು ಮಾತ್ರವಲ್ಲ—ಈ ಹಿರಿಯ ಗುರಿಯ ಹೆದ್ದಾರಿಯಲ್ಲಿ ಸರ್ವರನ್ನೂ ಕರೆದೊಯ್ಯುವ ಕಾರ್ಯವನ್ನು. ಸಾಹಿತಿಗಳೂ ಸಾಹಿತ್ಯ ಪ್ರೇಮಿಗಳೂ ಮನಸ್ಸು ಮಾಡಿದರೆ ರಸಿಕತೆಯ ಹೊಸ ಹೊನಲಿನಲ್ಲಿ ಪಶುತನವೆಲ್ಲ ಕೊಚ್ಚಿಹೋಗುವಂತೆ ಮಾಡಬಲ್ಲರು; ವಿಭಕ್ತವಾದುದು ಅವಿಭಕ್ತವಾಗುವಂತೆಸಗಬಲ್ಲರು; ನಿರಾಶೆಯನ್ನು ಆಶೆಯಲ್ಲಿ ಪರಿವರ್ತಿಸಬಲ್ಲರು; ಅಧಃಪಾತವನ್ನು ಅಭ್ಯುದಯದಲ್ಲಿ ಮಾರ್ಪಡಿಸಬಲ್ಲರು; ಅನ್ನಮಯವನ್ನು ಆನಂದಮಯವನ್ನಾಗಿ ರೂಪಾಂತರಿಸಬಲ್ಲರು.

"ಹಳೆಯ ನಂಬಿಕೆಗಳು ಕುಸಿದುಬೀಳುತ್ತಲಿರುವ ಈ ಕಾಲದಲ್ಲಿ ಬಾಳಿಗೆ ಬೆಳಕನ್ನೂ ಬಲವನ್ನೂ ಸ್ಫೂರ್ತಿಯನ್ನೂ ಪ್ರಚೋದನೆಯನ್ನೂ ನೀಡಬಲ್ಲ ಹೊಸ ನಂಬಿಕೆ, ಹೊಸ ಗುರಿ, ಹೊಸ ಆದರ್ಶವೊಂದು ಮೂಡಿ ಬರಬೇಕಾಗಿದೆ. ಅದು ಇಂಥ ಸಾಹಿತಿಗಳ, ಸಾಹಿತ್ಯ ಪ್ರೇಮಿಗಳ ಸಮ್ಮೇಳನದಲ್ಲಿಯೇ ಮೂಡಿ ಬರಬೇಕು. ನನ್ನಮಟ್ಟಿಗೆ ಹೇಳುವುದಾದರೆ ಕನ್ನಡ ಕುಲದ ಒಕ್ಕೂಟ, ಕನ್ನಡ ನುಡಿಯ ಪ್ರಗತಿ, ಕನ್ನಡ ನಾಡಿನ ಅಭ್ಯುದಯ—ಇವು ಮೂರು ಮುಪ್ಪುರಿಗೊಂಡು ನಮ್ಮ ಧ್ರುವತಾರೆಯಾಗಬಲ್ಲುವೆಂದು ತೋರುತ್ತದೆ. ಇದೇ ಆದರ್ಶವನ್ನೇ ಮುಂದಿಟ್ಟುಕೊಂಡು ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿತೆಂಬುದು ಅದರ ಮೊದಲನೆಯ ಸಮ್ಮೇಳನದ ಅಧ್ಯಕ್ಷರಾದ ರಾಜಮಂತ್ರಪ್ರವೀಣ ಶ್ರೀ ಎಚ್. ವಿ. ನಂಜುಂಡಯ್ಯನವರ ಭಾಷಣದಿಂದಲೇ ವ್ಯಕ್ತವಾಗುತ್ತದೆ.... "ಕನ್ನಡ ಭಾಷೆಯನ್ನೂ ಸಾಹಿತ್ಯವನ್ನೂ ಪುಷ್ಟಿಗೊಳಿಸಿ ಅಭಿವೃದ್ಧಿಗೆ ತಂದು ಕನ್ನಡ ನಾಡುಗಳ ಜನರೆಲ್ಲರನ್ನೂ ಒಟ್ಟುಗೂಡಿಸಿ ಅವರಲ್ಲಿ ಭಾಷಾವಿಷಯದಲ್ಲಿ ಪರಸ್ಪರ ಐಕಮತ್ಯವೂ ಸೌಹಾರ್ದವೂ ದಿನದಿನಕ್ಕೆ ಹೆಚ್ಚುವಂತೆ ಮಾಡುವುದೇ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶವಾಗಿದೆ" ಎಂದು ಘೋಷಿಸಿದರವರು. ನಾಲ್ಕನೆಯ ಸಮ್ಮೇಳನಾಧ್ಯಕ್ಷರೂ, ಕನ್ನಡ ಕವಿಚರಿತ್ರೆಯನ್ನು ಬರೆದು ಕನ್ನಡಕ್ಕೆ ಮಹೋಪಕಾರವನ್ನು ಮಾಡಿದವರೂ ಆದ ಆರ್. ನರಸಿಂಹಾಚಾರ್ಯರು ಎಚ್ಚರಿಸಿದರು: "ಭಿನ್ನ ಪ್ರಾಂತಗಳ ಕನ್ನಡಿಗರು ನಾನು ಹೆಚ್ಚು, ತಾನು ಹೆಚ್ಚು ಎಂದು ಮತ್ಸರದಿಂದ ಹೋರಾಡಿ ಅಲ್ಪಸ್ವಲ್ಪವಾದ ವ್ಯತ್ಯಾಸಗಳನ್ನು ಹೆಚ್ಚಿಸಿ ಕನ್ನಡ ನುಡಿಯ ಏಳಿಗೆಗೆ ಕುಂದಕವನ್ನುಂಟುಮಾಡಕೂಡದೆಂಬುದು ನನ್ನ ಪ್ರಾರ್ಥನೆ. ಅಲ್ಪಸ್ವಲ್ಪವಾದ ಅಭಿಪ್ರಾಯ ಭೇದಗಳಿದ್ದರೂ ಅವುಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಎಲ್ಲರೂ ಪರಸ್ಪರ ಮೈತ್ರಿಯಿಂದಲೂ ಐಕಮತ್ಯದಿಂದಲೂ ಭಾಷಾಸೇವೆಯನ್ನು ಉತ್ಸಾಹದೊಡನೆ ಮಾಡಬೇಕಾದುದು ಅತ್ಯಾವಶ್ಯಕ."

"ಈ ಚಿರಸ್ಮರಣೀಯವಾದ ಹಿತೋಕ್ತಿಗಳನ್ನು ನಾವೆಂದಿಗೂ ಮರೆಯಕೂಡದು. ಬೇರೆ ಸ್ವರಗಳು, ಬೇರೆ ಕರೆಗಳು ನಮ್ಮನ್ನು ಪ್ರತ್ಯೇಕಿಸಿದರೆ ಸಾಹಿತ್ಯದ ಸ್ವರ, ಸಾಹಿತ್ಯದ ಕರೆ ನಮ್ಮನ್ನು ಸಮೀಕರಿಸುತ್ತದೆ. ಅದರ ದೃಷ್ಟಿಯಿಂದ ನೋಡಿದಾಗ ಗುಡಿಸಿಲುಗಳಿಂದ ಅರಮನೆಗಳವರೆಗೆ ಎಲ್ಲ ಕಡೆಯಲ್ಲಿಯೂ ಉಸಿರಾಡಿಸುವ ಜೀವ, ನಡೆದಿರುವ ಜೀವನ ಒಂದೇ ಎಂಬುದು ಕಂಡುಬರುತ್ತದೆ; ಕೃತ್ರಿಮ ಭೇದಗಳೆಲ್ಲ ಮಾಯವಾಗಿ ಸಮಾನತೆಯ, ಸೋದರತೆಯ ಸೂತ್ರದಿಂದ ಸರ್ವರೂ ಒಂದು ಕುಲವಾಗಿ, ಒಂದು ಕುಟುಂಬವಾಗಿಬಿಡುತ್ತಾರೆ. ಆಗ ಪ್ರಾರಂಭವಾಗುತ್ತದೆ ಸಹಜೀವನ—ಒಬ್ಬರೊಬ್ಬರ ಸುಖದುಃಖಗಳಲ್ಲಿ ಪಾಲುಗೊಳ್ಳುವ ಸಹಜೀವನ, 'ಸಮಾನೀವ ಆಕೂತಿಃ ಸಮಾನಾ ಹೃದಯಾನಿ ವಃ . . . . . ಸಮವೋ ಪ್ರಪಾ ಸಹ ಅನ್ನಭಾಗಃ' ಎಂಬ ಋಷಿವಾಣಿ ನಿರೂಪಿಸಿದ ಸಹಜೀವನ. ಇಂಥ ಸಹಜೀವನವನ್ನು ಸಾಧ್ಯವಾಗಿಸಲೆಂದೇ ಸಾಹಿತ್ಯ ಶ್ರಮಿಸುತ್ತದೆ, ಶ್ರಮಿಸಬೇಕು. ಉಣ್ಣುವ ಅನ್ನದಲ್ಲಿ ಎಲ್ಲರಿಗೂ ಸಮಪಾಲು ಹೇಗೆ ಆವಶ್ಯಕವೋ ಪಡೆದ ಅರಿವು, ಅನುಭವಗಳಲ್ಲಿಯೂ ಸರ್ವರಿಗೂ ಸಮ

ಪಾಲು ಅಗತ್ಯ. ಸಾಹಿತ್ಯದ ಗುರಿಯೇ ಇದು. ಈ ಗುರಿ ಸಾಧಿಸಿದರೆ ಭಾವೈಕ್ಯತೆ ಬೇಕೆಂಬ ಸೊಲ್ಲು ಇಲ್ಲವಾಗುತ್ತದೆ, ನಾಡಿಗರು ಒಂದಾಗುತ್ತಾರೆ, ನಾಡು ನುಡಿ ಮುಂದಾಗುತ್ತವೆ.

"ಈ ಹಿರಿಯ ಗುರಿಯತ್ತ ಹೊರಟಿರುವ ಈ ಸಾಹಿತಿಗಳ ಸಮ್ಮೇಳನಕ್ಕೆ ಕನ್ನಡ ಸಂಸ್ಕೃತಿಯ ಪ್ರತೀಕದಂತಿರುವ, ವಿದ್ವತ್ತು-ವಿನಯ-ಔದಾರ್ಯಗಳ ಸಂಗಮದಂತಿರುವ ಪ್ರಾಧ್ಯಾಪಕ ಕೆ. ಜಿ. ಕುಂದಣಗಾರರು ಅಧ್ಯಕ್ಷರಾಗಿರುವುದು ಅತ್ಯಾನಂದದ ವಿಷಯ. ವಯೋವೃದ್ಧರೂ ಜ್ಞಾನವೃದ್ಧರೂ ಆಗಿರುವ ಅವರು ಕನ್ನಡ ತಪಸ್ವಿಗಳು, ಋಷಿಸದೃಶರು. ಅವರ ಸಾಹಿತ್ಯ ಸೇವೆ ಹಿರಿದಾದುದು; ಅವರ ಪಾಂಡಿತ್ಯ ಅದಕ್ಕೂ ಮಿಗಿಲಾದುದು; ಅವರ ವ್ಯಕ್ತಿತ್ವ ಅದಕ್ಕೂ ದೊಡ್ಡದು. ಅವರ ಅನುಭವಪೂರ್ಣ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಸರ್ವ ಕಾರ್ಯಕ್ರಮಗಳೂ ಸಂಪೂರ್ಣ ಸಫಲತೆಯನ್ನು ಪಡೆಯುವುದರಲ್ಲಿ ಸಂದೇಹವಿಲ್ಲ.

"ಸಮ್ಮೇಳನದ ಅಂಗವಾಗಿ ನಡೆಯಲಿರುವ ಗೋಷ್ಠಿಗಳಿಗೆ ಅಧ್ಯಕ್ಷರಾಗಿ ಆಯ್ಕೆಗೊಂಡಿರುವವರೂ, ಪ್ರಾಸ್ತಾವಿಕ ಭಾಷಣ ಮಾಡಲು ಒಪ್ಪಿ ಆಗಮಿಸಿರುವವರೂ ಎಲ್ಲರೂ ಹೆಸರಾಂತ ಕನ್ನಡ ವಿದ್ವಾಂಸರು, ಕನ್ನಡದ ಸೇವೆಯಲ್ಲಿ ನಿಷ್ಠೆಯಿಂದ ನಿರತರಾಗಿರುವವರು, ಕನ್ನಡಕುಲಕ್ಕೆ ಅಲಂಕಾರಪ್ರಾಯರು. ಈ ಗೋಷ್ಠಿಗಳಲ್ಲಿಯೂ ಸಮ್ಮೇಳನದ ವಿವಿಧ ಕಾರ್ಯಕಲಾಪಗಳಲ್ಲಿಯೂ ಭಾಗವಹಿಸಲು ನಾಡಿನ ಬೇರೆ ಬೇರೆ ಭಾಗಗಳಿಂದ ಬಂದಿರುವ ಹಿರಿಯ ಕಿರಿಯ ಸಾಹಿತಿಗಳೂ ವಿದ್ವಾಂಸರೂ ಈ ನಾಡಿನ ಆಶಾಂಕುರಗಳು, ಪ್ರತಿಭಾಂಕುರಗಳು. ಈ ಎಲ್ಲರ ಸಮ್ಮಿಳನದಲ್ಲಿ ಹೊಸ ಶಕ್ತಿ ಹುಟ್ಟಲೆಂದು, ಹೊಸ ನೋಟ ಮೂಡಲೆಂದು, ಹೊಸ ಬಾಳಿನ ಕಾಣ್ಕೆ ತಲೆದೋರಲೆಂದು ಹೃತ್ಪೂರ್ವಕವಾಗಿ ಹಾರೈಸಿ ಅತ್ಯಂತ ಸಂತೋಷದಿಂದ ಈ ಸಮ್ಮೇಳನವನ್ನು ಉದ್ಘಾಟಿಸುತ್ತೇನೆ. ಸಮ್ಮೇಳನಕ್ಕೆ ಗೆಲುವಾಗಲಿ, ಕನ್ನಡಕ್ಕೆ ಗೆಲುವಾಗಲಿ, ಭಾರತಕ್ಕೆ ಗೆಲುವಾಗಲಿ!"

ಸನ್ಮಾನ ಪತ್ರಗಳ ಸಮರ್ಪಣೆ

ಶ್ರೀ ಹುಯಿಲಗೋಳ ನಾರಾಯಣರಾಯರಿಗೆ

"ನಲವತ್ತು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಇಂದಿನ ಶುಭ ಪ್ರಸಂಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಮತ್ತು ಸಮ್ಮೇಳನಕ್ಕೆ ಆಗಮಿಸಿದ ಸಕಲ ಭಕ್ತರ ಪರವಾಗಿ ಮತ್ತು ಗದಗ–ಬೆಟಗೇರಿಯ ನಾಗರಿಕರ ಪರವಾಗಿ ತಮಗೆ ಈ ಸನ್ಮಾನ ಪತ್ರ ಸಮರ್ಪಣ ಮಾಡಲು ನಮಗೆ ಅಪಾರ ಸಂತೋಷವೂ ಅಭಿಮಾನವೂ ಆಗುತ್ತಿದೆ. ಸಮ್ಮೇಲನಕ್ಕಾಗಿಯೇ ನಿರ್ಮಿಸಲ್ಪಟ್ಟ ಭವ್ಯವಾದ ಈ ಕುಮಾರವ್ಯಾಸ ಮಂಟಪದಲ್ಲಿ ಸ್ವಯಂ ಸ್ಫೂರ್ತಿಯಿಂದ ಸಾಹಿತ್ಯ ರಸಿಕ ಕುಲ ಸಂತತಿಯಿಂದ ಸನ್ಮಾನ ಪತ್ರ ಸಮರ್ಪಿಸಲ್ಪಡುತ್ತಿರುವುದರಲ್ಲಿ ಒಂದು ದೈವಿಕ ಸಂಕಲ್ಪವು ಸಫಲವಾಗುತ್ತಿರುವುದೆಂದೇ ನಾವು ಭಾವಿಸುತ್ತೇವೆ. ನಲವತ್ತು ಮೂರನೆಯ ಸಾಹಿತ್ಯ ಸಮ್ಮೇಳನವು ವೀರನಾರಾಯಣನ ಗದುಗಿನಲ್ಲಿ ಸೇರುವದೊಂದು ಸಂಭ್ರಮ ಹಾಗೂ ಸಮ್ಮೇಳನದ ಅಂಗವಾಗಿ ತಮ್ಮಂಥ ಹಿರಿಯ ಸಾಹಿತಿಯನ್ನು ಗೌರವಿಸಿ ಆಶೀರ್ವಾದವನ್ನು ಪಡೆಯುತ್ತಿರುವುದು ಆ ಸಂಭ್ರಮದಲ್ಲಿ ಇನ್ನೂ ಹೆಚ್ಚಿನ ಸಂಭ್ರಮ.

"ವೃತ್ತಿಯಿಂದ ವಕೀಲರಾದಾಗ್ಯೂ ಸಾಹಿತ್ಯ ಭಕ್ತಿಯನ್ನು ಅಚ್ಚಳಿಯದೇ ಆರಾಧಿಸಿ ತಾವು ವರಕವಿಗಳಾಗಿ, ಬಂಗಾಲದ ಬಂಕೀಮ ಚಂದ್ರ ಚಟರ್ಜಿಯವರಂತೆ, ಕನ್ನಡ ನಾಡಿಗೆ ಅಮರ ರಾಷ್ಟ್ರ ಗೀತೆಯನ್ನು ದಯಪಾಲಿಸಿರುವಿರಿ. 'ವಜ್ರ ಮುಕುಟ' ಮೊದಲಾದ ಹದಿಮೂರು ನಾಟಕಗಳನ್ನು ಬರೆದು ಅದರಲ್ಲಿಯೂ 'ಸ್ತ್ರೀ ಧರ್ಮ ರಹಸ್ಯ' 'ಶಿಕ್ಷಣ ಸಂಭ್ರಮ' ಎಂಬ ಸಾಮಾಜಿಕ ನಾಟಕಗಳನ್ನು ಬರೆದು ಆದ್ಯ ಸಾಮಾಜಿಕನಾಟಕಕಾರರೆಂಬ ಖ್ಯಾತಿಯನ್ನು ಗಳಿಸಿರುವಿರಿ. ಅಂದಿನ ಕನ್ನಡ ರಂಗಭೂಮಿಯ ಅಸಡ್ಡೆಗಳನ್ನು ತೆಗೆದುಹಾಕಿ ರಂಗಭೂಮಿಗೆ ವಾಸ್ತವತೆಯನ್ನು ತಂದ ಕೀರ್ತಿಯು ತಮಗೇ ಸಲ್ಲಬೇಕು. ನಾಟಕ ಕಂಪನಿಗೆ ನಾಟಕವನ್ನು ಬರೆದುಕೊಟ್ಟು ಹಣಗಳಿಸುವ ಹವ್ಯಾಸಕ್ಕೆ ಬಲಿಬೀಳದೆ 'ಯಂಗಮೆನ್ಸ ಫುಟಬಾಲ ಕ್ಲಬ್ಬಿನ' ಆಟಗಾರರಿಂದಲೇ ನಾಟ್ಯ ವಿಲಾಸೀ ಸಂಘವನ್ನು ಸ್ಥಾಪಿಸಿ ತಾವು ಬರೆದ ನಾಟಕಗಳನ್ನು ಅಭಿನಯಿಸಿ ಬಂದ ಹಣದಿಂದ ಇಂದು ಹೆಮ್ಮರವಾಗಿ ಬೆಳೆದು ನಿಂತ ವಿದ್ಯಾದಾನ ಸಮಿತಿಯಂಥ ಮಹಾ ವಿದ್ಯಾ ಸಂಸ್ಥೆಯನ್ನು ಕಟ್ಟಿದಿರಿ. ಕುಮಾರವ್ಯಾಸನು ತನ್ನ ಅಮರ ಕೃತಿಯಿಂದ ಕನ್ನಡ ಕುಲಕ್ಕೆಲ್ಲ ಗದುಗಿನ ವೀರನಾರಾಯಣನ ದರ್ಶನವನ್ನು ಮಾಡಿಸಿದ್ದಾನೆ. ಅಂದಿನ ಕೋಳಿವಾಡ ನಾರಾಯಣಪ್ಪನಂತೆಯೇ ಇಂದಿನ ಹುಯಿಲಗೋಳ ನಾರಾಯಣರಾಯರು ಕನ್ನಡ ನಾಡಿಗೆ ಕವಿದಿದ್ದ ಕತ್ತಲೆಯನ್ನು ಹೊಡೆದೋಡಿಸಲೆಂದೇ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಉದಯ ರಾಗವನ್ನು ಹಾಡಿ ಕಾವ ಗದುಗಿನ ವೀರನಾರಾಯಣನ ಬೀಡನ್ನು ಅಮರಗೊಳಿಸಿದ್ದಾರೆ. ವೀರನಾರಾಯಣನ ಆತ್ಮೀಯ ಆರಾಧಕರಾದ ತಾವು ನೂರಾರು ಭಕ್ತಿಕಾವ್ಯಗಳನ್ನು ರಚಿಸಿ ಆತ್ಮ ಪ್ರಸನ್ನತೆಯನ್ನು ಪಡೆದಿದ್ದೀರಿ. "ಯಾವಲ್ಲಿ ಅಡಗಿರುವಿ ಕೃಷ್ಣಯ್ಯ" ಎಂಬ ದೇವರ ನಾಮವು ದೇವರನ್ನು ಅರಸುವ ಭಕ್ತರ ಹೃದಯಗಳನ್ನು ಸೂರೆಗೊಂಡಿದೆ. ಧಾರವಾಡದ ಕಲೋಪಾಸಕ ಮಂಡಲವು ಹತ್ತು ವರುಷದ ಹಿಂದೆಯೇ ತಮ್ಮನ್ನು ಯಥೋಚಿತವಾಗಿ ಸತ್ಕರಿಸಿ ಶ್ರೇಯೋಭಾಗಿಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಖಿಲ ಕನ್ನಡ ರಸಿಕ ಕುಲವೆಲ್ಲ ಇಂದಿನ ಅಪೂರ್ವ ಪ್ರಸಂಗದಲ್ಲಿ ತಮ್ಮನ್ನು ಸತ್ಕರಿಸಿ ತಮ್ಮ ಪಾಲಿನ ಪವಿತ್ರ ಕರ್ತವ್ಯವನ್ನು ನೆರವೇರಿಸುತ್ತಲಿವೆ.

"ಕನ್ನಡ ಸಾಹಿತ್ಯ ಭಂಡಾರಕ್ಕೆ ಅನಂತ ಉಪಕಾರವನ್ನು ಮಾಡಿದ ಗದುಗಿನ ವೀರನಾರಾಯಣನು ತಮಗೆ ದೀರ್ಘಾಯುರಾರೋಗ್ಯ ಭಾಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸಿ ಈ ಸನ್ಮಾನ ಪತ್ರವನ್ನು ಸಮರ್ಪಿಸುತ್ತೇವೆ."

ಎಂ. ಶ್ರೀ ಪ್ರತಿಷ್ಠಾನ ಗ್ರಂಥಾಲಯ ಬೆಂಗಳೂರು-19
2428 2434

ಶ್ರೀ ಪುಟ್ಟರಾಜಗವಾಯಿಗಳಿಗೆ

ಕೃತುಪುರ ಪುಣ್ಯಕ್ಷೇತ್ರದಲ್ಲಿ, ಶ್ರೀ ವೀರನಾರಾಯಣನ ಗದುಗಿನಲ್ಲಿ ಸೇರುತ್ತಲಿರುವ ನಾಲವತ್ತುಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಶುಭಪ್ರಸಂಗದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ, ಸಾಹಿತ್ಯ ಸಂಗೀತ ಕಲಾಪ್ರೇಮಿಗಳ ಪರವಾಗಿ ಮತ್ತು ಗದಗ ಬೆಟಗೇರಿಯ ನಾಗರಿಕರ ಪರವಾಗಿ ಸಮ್ಮೇಳನದ ನಾಂದಿ ಸ್ವರೂಪದ ಈ ಸನ್ಮಾನಪತ್ರದಿಂದ ತಮ್ಮನ್ನು ಸತ್ಕರಿಸಲು ನಮಗೆ ಅತಿಶಯವಾದ ಆನಂದವಾಗುತ್ತದೆ ಬೆಂಗಳೂರು, ಮೈಸೂರುಗಳ ರಸಿಕ ಕಲೋಪಾಸಕರು ತಮ್ಮ ಅಗಾಧ ಕಲಾಸಂಪತ್ತಿಯನ್ನು ಮನವಾರೆ ಮೆಚ್ಚಿ ತಮ್ಮನ್ನು ಈಗಾಗಲೇ ಗೌರವಿಸಿದ್ದುಂಟು. ಆದರೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಮತ್ತು ಕನ್ನಡ ನುಡಿಭಕ್ತರಿಗೆ ಇಂದಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಈ ಸನ್ಮಾನಪತ್ರದಿಂದ ತಮ್ಮನ್ನು ಗೌರವಿಸುವ ಸದವಕಾಶ ದೊರೆತದ್ದು ನಮ್ಮ ಸೌಭಾಗ್ಯವೆಂದೇ ಭಾವಿಸುತ್ತೇವೆ.

"ಉದ್ದಾಮ ಸಾಹಿತಿಗಳು ಸಿಗಬಹುದು, ಸಂಗೀತ ವಿಶಾರದರೂ ಸಿಗಬಹುದು. ವಾದ್ಯವಾದನ ಪಟುಗಳೂ ಸಿಗಬಹುದು. ಆದರೆ ಸಾಹಿತ್ಯ ಸಂಗೀತ ವಾದ್ಯವಾದನ ಕಲೆಗಳ ತ್ರಿವೇಣೀ ಸಂಗಮವಿದ್ದ ಕಲಾಭಿಜ್ಞರು ಸಿಕ್ಕುವದು ವಿರಳ. ತಮ್ಮ ಪೂಜ್ಯ ಗುರುಗಳಾದ ಲಿಂಗೈಕ್ಯ ಪಂಚಾಕ್ಷರಿ ಗವಾಯಿಗಳ ಪೂರ್ಣಕೃಪೆಯಿಂದಲೇ ತಾವು ಮುಕ್ಕಣ್ಣರಾಗಿ ಅಲೌಕಿಕ ಕಲಾಸಂಪತ್–ಸಮೃದ್ಧಿಯ ಸಾರ್ವಭೌಮರಾಗಿದ್ದೀರಿ ಎಂದರೆ ತಪ್ಪಾಗಲಾರದು. ಅಕ್ಕಮಹಾದೇವಿ ಪುರಾಣವನ್ನು ಕನ್ನಡ ಭಾಮಿನಿ ಷಟ್ಪದಿಯಲ್ಲಿ, ಗುರುಗೀತೆಯನ್ನು ಸಂಸ್ಕೃತದಲ್ಲಿ ಮತ್ತು ಹಿಂದಿಯಲ್ಲಿ ಬಸವ ಪುರಾಣವನ್ನು ಬರೆದು ತಮ್ಮ ಅಮೋಘವಾದ ತ್ರಿಭಾಷಾ ಪಾಂಡಿತ್ಯವನ್ನು ಪ್ರದರ್ಶಿಸಿದ್ದೀರಿ. ಜಗಜ್ಯೋತಿ ಬಸವೇಶ್ವರ, ನಲ್ಲೂರ ನಂಬೆಕ್ಕ ಮೊದಲಾದ ಶಿವಶರಣ–ಶರಣೆಯರ ನಾಟಕಗಳನ್ನು ಬರೆದು ತಮ್ಮ ಆಶ್ರಯದಲ್ಲಿ ಸ್ಥಾಪಿತವಾಗಿರುವ ನಾಟಕ ಸಭೆಯಿಂದ ರಂಗಭೂಮಿಗೆ ತಂದಿದ್ದೀರಿ. ಹೇಮರಡ್ಡಿ ಮಲ್ಲಮ್ಮ ನಾಟಕವನ್ನು ೩೦೫ ದಿವಸಗಳವರೆಗೆ ಸತತವಾಗಿ ಅಭಿನಯಿಸಿ ಪ್ರೇಕ್ಷಕರನ್ನು ತಣಿಸಿ ರಂಗಭೂಮಿಯಲ್ಲಿ ಹೊಸ ವಿಕ್ರಮವನ್ನು ಸಾಧಿಸಿದ್ದೀರಿ.

"ಶ್ರೀ ಕುಮಾರಸ್ವಾಮಿ ಕೃಪಾಪೋಷಿತ ಸಂಗೀತ ಸಾಹಿತ್ಯ ಮಹಾವಿದ್ಯಾಲಯ ಮತ್ತು ಶ್ರೀ ವಿರೇಶ್ವ ಪುಣ್ಯಾಶ್ರಮಗಳಲ್ಲಿ ಪಾಠಪ್ರವಚನ ಕೀರ್ತನಗಳಿಂದ ತಮಗೆ ದೈವದತ್ತವಾಗಿ ಬಂದ ಸಾಹಿತ್ಯ ಸಂಗೀತ ಅಧ್ಯಾತ್ಮ ವಿದ್ಯೆಗಳ ಪ್ರಸಾರ ಕಾರ್ಯವನ್ನು ಮಾಡುತ್ತಿರುವಿರಿ. ಆದರಲ್ಲಿಯೂ ವಿಶೇಷತಃ ಕುರುಡು ಸಂತಾನಕ್ಕೆ ತಮ್ಮ ಅಗಾಧ ತಪಸ್ಸನ್ನು ಸಂತತವಾಗಿ ಧಾರೆ ಎರೆಯುತ್ತಿರುವುದು ನಿಜವಾಗಿಯೂ ಶ್ಲಾಘನೀಯವಾಗಿದೆ. ಅನೇಕ ಭಾಷಾಮಧುರ ಬಾಂಧವ್ಯವನ್ನೂ ಹಾಗೂ ಪಾಂಡಿತ್ಯವನ್ನೂ ಏಕದೇಶೀಯವಾಗಿ ಸಾಧಿಸಿದ ತಮ್ಮನ್ನು ಎಷ್ಟು ಗೌರವಿಸಿದರೂ ಕಡಿಮೆಯೇ ಆಗಿದೆ. ಕವಿಯ ಕಣ್ಣು ಭಕ್ತನ ಹೃದಯಗಳಿಂದ ಕೂಡಿದ ತಮ್ಮ ಪ್ರತಿಭೆಯು ಲೋಕದ ಕಣ್ಣು ಕುಕ್ಕಿಸುವಂತಹದು ಇರುತ್ತದೆಂಬುದನ್ನು ಕಣ್ಣಿದ್ದವರು ಕಂಡಿದ್ದಾರೆ, ಕಿವಿ ಇದ್ದವರು ಕೇಳಿ ನಲಿದಿದ್ದಾರೆ.

"ಪರಮೇಶ್ವರನು ತಮಗೆ ದೀರ್ಘಾಯುರಾರೋಗ್ಯ ಭಾಗ್ಯವನ್ನು ದಯಪಾಲಿಸಲೆಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ."

ಸಂಪಾದಕರು: ಅನ್ನದಾನಯ್ಯ ಪುರಾಣಿಕ, ಬಿ.ಕಾಮ್., ಎಲ್ಎಲ್.ಬಿ. ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ. ಮುದ್ರಕರು: ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಬೆಂಗಳೂರು–೧೮.

ಸಾದರ ಸ್ವೀಕಾರ

* ಮಹಿಳೆಯರ ಅಲಂಕಾರ: ಲೇಖಕರು: ಶಾಂತಾದೇವಿ ಮಾಳವಾಡ. ಪ್ರಕಾಶಕರು: ಜಿ. ಕೆ. ಅಂಡ್ ಬ್ರದರ್ಸ್, ಬಸವನಗುಡಿ, ಬೆಂಗಳೂರು. ಸೈಜು ೧/೮ ಕ್ರೌನ್, ಪುಟಗಳು ೧೧೯, ಬೆಲೆ ರೂ. ೩-೦೦.

ಜ್ಯೋತಿರ್ವಾಣಿ: (ಡಿಸೆಂಬರ್ ಮಾಸಪತ್ರಿಕೆ) ಸಂಪಾದಕರು: ಶ್ರೀ ಎನ್. ಕೆ. ಜೋಗಳೇಕರ, ಜ್ಯೋತಿರ್ವಾಣಿ ಕಾರ್ಯಾಲಯ, ತವಳಿಶೇಖರ, ಧಾರವಾಡ. ಬೆಲೆ ೦-೫೦ ನ.ಪೈ.

ಕನ್ನಡ ಸಂಘ, ವ್ಯಾಸಂಗಗೋಷ್ಠಿ ಅಪ್ರೆಂಟಿಸ್ ಹಾಸ್ಟಲ್, ಹೆಚ್. ಎ. ಎಲ್., ಬೆಂಗಳೂರು. ವ್ಯವಸ್ಥಾಪಕರಿಂದ ಅವರ ಗೋಷ್ಠಿಯಲ್ಲಿ ಉಪಯೋಗಿಸಿದ್ದ ೫೭ ಕಾದಂಬರಿಗಳನ್ನು ಪರಿಷತ್ತಿನ ಸರಸ್ವತೀ ಭಂಡಾರಕ್ಕೆ ಉಚಿತವಾಗಿ ಕೊಡಲ್ಪಟ್ಟಿವೆ. ಇವನ್ನು ಕೃತಜ್ಞತೆಯಿಂದ ಸ್ವೀಕರಿಸಲಾಗಿದೆ.

* ಲಲಂತಿಕೆ: (ಚೆಲು ಕವಿತೆಗಳ ಮಾಲೆ) ಲೇಖಕರು: ಶ್ರೀ ಶೇಷಾದ್ರಿ, ಬಿ. ಇ., ಪ್ರಕಾಶಕರು: ಮಲೆನಾಡು ಪ್ರಕಾಶನ, ಬೆಂಗಳೂರು-೨. ಸೈಜು ೧/೮ ಕ್ರೌನ್, ಪುಟಗಳು ೬೦, ಬೆಲೆ ೦-೫೦ ನ.ಪೈ.

ಕಲ್ಯಾಣ: (ಕನ್ನಡ ಡೈಜಸ್ಟ್ ಡಿಶೆಂಬರ್, ಸಂಚಿಕೆ ೨, ಸಂ. ೧), ವಿಜಾಪುರ. ವ್ಯವಸ್ಥಾಪಕರು: ಶ್ರೀ ಎಸ್. ಎನ್. ಪಾಟೀಲ, ಬಿ. ಕಾಮ್. ವಾರ್ಷಿಕ ಚಂದಾ ರೂ. ೪-೫೦ ನ.ಪೈ., ಬಿಡಿಸಂಚಿಕೆ ೦-೪೦ ನ.ಪೈ.

Fourth Music Conference Souvenir—1961, Mysore. Size 1/4 Royal, Pages 103.

ತರಂಗ-ಲಹರಿ: ಲೇಖಕರು: ವಿದ್ವಾನ್ ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್, ಡಾ|| ಸುರತ್ಕಲ್ ಶ್ರೀನಿವಾಸರಾವ್, ಮುಂಡಾಜೆ, ಪ್ರಕಾಶಕರು: ವಿಚಾರ ಸಾಹಿತ್ಯಮಾಲೆ, ಕಡಿರುದ್ಯಾವರ, ದ.ಕ. ಸೈಜು ೧/೮ ಕ್ರೌನ್, ಪುಟಗಳು ೩೯, ಬೆಲೆ ೦-೬೦ ನ.ಪೈ.

The Wayfaring Poet: (Tagore Centinary Publication), From Dunlop Rubber Co. (India) Ltd., Publicity Department, Calcutta. Size 1/4 Royal, Pages 95.

* ರಸವಂತಿ: ಲೇಖಕರು: ಶ್ರೀ ಗಿರಡ್ಡಿ ಗೋವಿಂದರಾಜ, ಪ್ರಕಾಶಕರು: ಅನ್ನದಾನ ಪ್ರಕಾಶನ, ಅಬ್ಬಿಗೇರಿ. ಸೈಜು ೧/೮ ಕ್ರೌನ್, ಪುಟಗಳು ೭೬, ಬೆಲೆ ರೂ. ೧-೦೦.

* ಸತ್ಯಸ್ನೇಹಿ: (ನಾಟಕ) ಲೇಖಕರು: ಶ್ರೀ ಶಾಂತರಸ, ರಾಯಚೂರು, ಪ್ರಕಾಶಕರು: ಶ್ರೀ ಅರವಿಂದ ಗ್ರಂಥಾಲಯ, ಚಡಚಣ. ಸೈಜು ೧/೮ ಕ್ರೌನ್, ಪುಟಗಳು ೧೨೭, ಬೆಲೆ ರೂ. ೧-೭೫ ನ.ಪೈ.

* ತಾಯಿ ಕಾಣದ ಜೀವ: ಲೇಖಕರು: ಶ್ರೀ ಭುವನೇಶ್ವರಿ ಸಿಂಪಿ, ಪ್ರಕಾಶಕರು: ಶ್ರೀ ಅರವಿಂದ ಗ್ರಂಥಾಲಯ, ಸೈಜು ೧/೮ ಕ್ರೌನ್, ಪುಟಗಳು ೧೧೦, ಬೆಲೆ ೧-೫೦ ನ.ಪೈ.

* ಬಾಪು ಕಾವ್ಯಾಂಜಲಿ: (ಗಾಂಧಿ ಸ್ಮಾರಕನಿಧಿ ಪ್ರಕಾಶನ ೧೪-೧೫), ಪ್ರಕಾಶಕರು ಮತ್ತು ಸಂಪಾದಕರು: ಶ್ರೀ ರಾ. ಯು. ಧಾರವಾಡಕರ, ಧಾರವಾಡ. ಸೈಜು ೧/೮ ಫುಲ್‌ಸ್ಕೇಪ್, ಪುಟಗಳು ೧೪೭, ಬೆಲೆ ರೂ. ೧-೦೦.

ಅಮೆರಿಕದ ಕತೆ: ಅನುವಾದಕರು: ಶ್ರೀ ಎನ್. ಎಸ್. ಸೀತಾರಾಮಶಾಸ್ತ್ರಿ, ಪ್ರಕಾಶಕರು: ಪ್ರಗತಿ ಪ್ರಕಟನಾಲಯ, ಗಾಂಧಿನಗರ, ಬೆಂಗಳೂರು-೯. ಸೈಜು ೧/೮ ಕ್ರೌನ್, ಪುಟಗಳು ೨೪೮.

* ಪರಮಾಣು ವಿವರಣೆ: ಅನುವಾದಕರು: ಶ್ರೀ ಡಿ. ವಿ. ರಾಘವೇಂದ್ರ, ಪ್ರಕಾಶಕರು: ಕಾವ್ಯಾಲಯ ಪ್ರಕಾಶನ, ಮೈಸೂರು. ಸೈಜು ೧/೮ ಕ್ರೌನ್, ಪುಟಗಳು ೨೮೪ + XX, ಬೆಲೆ ರೂ. ೩-೦೦.

Mysore's Political Evolution: By P. R. Ramiah, B.Sc., Editor, Chetana, Jayagowri Publications, Bangalore-4. Size 1/8 Crown. Pages 105, Price Re. 1-25 nP.

ನವಕಥಾಗುಚ್ಛ: (ಸಣ್ಣ ಕಥೆಗಳ ಸಂಕಲನ ಸಂಪುಟ ೨) ಸಂಗ್ರಾಹಕರು: ದಕ್ಷಿಣಭಾಷಾ ಪುಸ್ತಕಸಂಸ್ಥೆ, ಮದರಾಸು. ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು. ಸೈಜು ೧/೮ ಕ್ರೌನ್, ಪುಟಗಳು ೧೩೨, ಬೆಲೆ ರೂ. ೧-೩೦ ನ.ಪೈ.

* ಹೌಸು ಟುಲೆಟ್: (ನಗೆನಾಟಕ) ಲೇಖಕರು: ಶ್ರೀ ಕೃ. ನ. ಮೂರ್ತಿ, ಪ್ರಕಾಶಕರು: ಪೂರ್ಣಿಮಾ ಸಾಹಿತ್ಯ ಮಂದಿರ, ಮೈಸೂರು. ಸೈಜು ೧/೮ ಕ್ರೌನ್, ಪುಟಗಳು ೩೧, ಬೆಲೆ ೦-೫೦ ನ.ಪೈ.

* ಅವಾಂತರ: ಲೇಖಕರು: ಶ್ರೀ ನೋಘರಾಜ, ಬಿ.ಎ., (ಆನರ್ಸ್), ಪ್ರಕಾಶಕರು: ಪೂರ್ಣಿಮಾ ಸಾಹಿತ್ಯ ಮಂದಿರ, ಮೈಸೂರು. ಸೈಜು ೧/೮ ಕ್ರೌನ್, ಪುಟಗಳು ೧೯೫, ಬೆಲೆ ರೂ. ೨-೦೦.

* ಗೃಹದೇವಿ: (ಶರತ್ಕಾದಂಬರಿ) ಅನುವಾದಕರು: ಕೃ. ನ. ಪಾರ್ವತಿ, ಪ್ರಕಾಶಕರು: ಪೂರ್ಣಿಮಾ ಸಾಹಿತ್ಯ ಮಂದಿರ, ಮೈಸೂರು. ಸೈಜು ೧/೮ ಕ್ರೌನ್, ಪುಟಗಳು ೧೭೭, ಬೆಲೆ ರೂ. ೨-೦೦.

---

* ಈ ಗುರ್ತಿನ ಪುಸ್ತಕಗಳ ವಿಮರ್ಶೆ 'ಕನ್ನಡ ನುಡಿ'ಯಲ್ಲಿ ಪ್ರಕಟವಾಗುತ್ತದೆ.

Reg. No. B. G. 4—January 1962

Licensed to Pos
pre-payment. Li

ಭಾರತದಲ್ಲೆಲ್ಲಾ ಪ್ರಸಿದ್ಧಿ ಹೊಂದಿರ

ಮೈಸೂರಿನ ಜನದ ಪ್ರೀತಿಗೆ ಪಾತ್ರವಾದ

ಕಾಡೆಮ್ಮೆ ಗುರುತಿನ



ವಿದ್ಯಾರ್ಥಿಗಳಿಗೆ, ಲೇಖಕರಿಗೆ, ಪ್ರಕಾಶಕರಿಗೆ, ಮಹಾಜನರಿಗೆ

ಎಲ್ಲ ರೀತಿಯ ವ್ಯವಹಾರದಲ್ಲಿ

ಬೇಕಾಗುವ

ಮೈಸೂರು ಕಾಗದ

ಮೈಸೂರು ಕಾಗದ ಕಾರ್ಖಾನೆ, ಲಿಮಿಟೆಡ್

ಭದ್ರಾವತಿ. ಬೆಂಗಳೂ

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
2434
ಬೆಂಗಳೂರು-19

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ, ಕ. ಸಾ. ಪ. ಚಾಮರಾಜಪೇಟೆ, ಬೆಂಗಳೂರು—೧೮